ಶಾಸನ ರಚನಾ ಕಲಾಪಗಳು

೧೯೮೮ ರ ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ತಿದ್ದುಪಡಿ) ವಿಧೇಯಕ

(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಎಂ. ರಘುಪತಿ (ಮೀನುಗಾರಿಕೆ ಮತ್ತು ಬಂದರು ಸಚಿವರು) (ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ವಸತಿ ರಾಜ್ಯ ಮಂತ್ರಿ) ಇವರ ಪರವಾಗಿ.—ಮಾನ್ಯ ಅಧ್ಯಕ್ಷರೇ, ನಾನು ೧೯೮೮ನೇ ಇಸವಿಯ ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ,

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "೧೯೮೮ ರ ಕರ್ನಾಟಕ ಗೃಹ ನಿರ್ಮಾಣ ಮಂಡಳಿ(ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ. ರಘುಪತಿ (ಮೀನುಗಾರಿಕೆ ಮತ್ತು ಬಂದರು ಸಚಿವರು) ಶ್ರೀ ಎಂ ಮೊಹಮ್ಮದ್ ಮೊಯಿನುದ್ದೀನ್ (ವಸತಿ ರಾಜ್ಯ ಮಂತ್ರಿ) ಇವರ ಪರವಾಗಿ ಮಾನ್ಯ ಅಧ್ಯಕ್ಷರೇ, ೧೯೮೮ ರ ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ*.

ಶ್ರೀ ಎಂ. ಎಸ್, ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಚೀಟಿ ಇತ್ತು. ಅದನ್ನು ಮಂತ್ರಿಗಳಿಗೆ ಕೊಟ್ಟಿದ್ದೆ. ಮಾನ್ಯ ಸಿದ್ಧಾರ್ಥರವರು ಕೂಡಾ ಆನ್ಸರ್ ಮಾಡುವುದಕ್ಕೆ ರೆಡಿಯಾಗಿದ್ದಾರೆ.

ಅಧ್ಯಕ್ಷರು.—ನಾನು ಅದಕ್ಕೆ ನಂತರ ಅವಕಾಶ ಕೊಡುತ್ತೇನೆ. ಮಾನ್ಯ ಬಚ್ಚೇಗೌಡರೇ. ತಾವು ಭಾಷಣವನ್ನು ಪ್ರಾರಂಭ ಮಾಡಿ,

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

† ಶ್ರೀ ಬಿ. ಎನ್. ಬಚ್ಚೇಗೌಡ (ಹೊಸಕೋಟೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ವಂದನೆಯನ್ನು ಸಲ್ಲಿಸುವ ಕಾರ್ಯದಲ್ಲಿ ನಾನು ಮಾನ್ಯ ರಾಜ್ಯಪಾಲರ ಭಾಷಣವನ್ನು ಸ್ವಾಗತ ಮಾಡುತ್ತೇನೆ. ನಿನ್ನೆ ದಿವಸ ಅಪೂರ್ಣವಾಗಿದ್ದ ಚರ್ಚೆಯನ್ನು ಮುಂದುವರೆಸಿ ಮಾನ್ಯ ಅರಣ್ಯ ಇಲಾಖೆಯ ವತಿಯಿಂದ ಇವತ್ತು ರಾಜ್ಯದಲ್ಲಿ ಬರಡು ಭೂಮಿ ಅಭಿವೃದ್ಧಿ ಮತ್ತು ಬೀಳು ಭೂಮಿ ಅಭಿವೃದ್ಧಿಯಲ್ಲಿ ಸಸಿಗಳನ್ನು ನೆಡುವ ಕಾರ್ಯವನ್ನು ಮಾಡಬೇಕೆಂದು ಸರ್ಕಾರಕ್ಕೆ ತಿಳಿಸಬಯಸುತ್ತೇನೆ.

೧-೦೦ ಪಿ.ಎಂ.

ಲಕ್ಷಾಂತರ ಎಕರೆ ಅರಣ್ಯಗಳು ಇರತಕ್ಕಂಥ ಕಡೆ ಅರಣ್ಯಗಳನ್ನು ಬೆಳೆದಿಲ್ಲ, ಅರಣ್ಯಗಳನ್ನು ಹೆಚ್ಚು ಬೆಳೆಸುವಂತಹ ಕಾರ್ಯವನ್ನು ಇವೊತ್ತು ಮಾಡಬೇಕು. ವಿದ್ಯುಚ್ಛಕ್ತಿ ಸಚಿವರು ಈಗ ರೈತರಿಗೆ ಕೊಡತಕ್ಕಂಥ ವಿದ್ಯುತ್ತನ್ನು ಸುಮಾರು ಎಂಟು ಗಂಟೆಗಳ ಕಾಲ ಕಡಿತ ಮಾಡಿದ್ದಾರೆ. ಬೆಳಿಗ್ಗೆ ಆರು ಗಂಟೆಯಿಂದ ಮಧ್ಯಾಹ್ನ ಎರಡು ಗಂಟೆವರೆಗೆ, ವಿದ್ಯುತ್ತನ್ನು ಕಡಿತ ಮಾಡಿದ್ದಾರೆ. ಇವೊತ್ತು ವಿದ್ಯುತ್ ಸರಬರಾಜನ್ನು ರೈತರಿಗೆ ಸಂಪೂರ್ಣವಾಗಿ ಕೊಡಬೇಕು. ಬೆಳಗಿನಿಂದ ಸಾಯಂಕಾಲದವರೆಗೆ ಕೆಲಸ ಮಾಡುವಂತಹ ರೈತರಿಗೆ ಇವೊತ್ತಿನ ದಿವಸ ವಿದ್ಯುತ್ತಿನ ಅಭಾವದಿಂದ ತೊಂದರೆ ಪಡುತ್ತಾ ಇದ್ದಾರೆ. ರಾತ್ರಿ ಹೊತ್ತು ಮಾತ್ರ ವಿದ್ಯುತ್ತನ್ನು ಸರಬರಾಜು ಮಾಡಿದರೆ ರೈತ ತನ್ನ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳಲು ತೊಂದರೆಯಾಗುತ್ತದೆ. ಆದ್ದರಿಂದ ಈ ಬದಲಾವಣೆಯನ್ನು ಆಲ್ಟರ್‌ನೇಟೀವ್ ಆಗಿ ಒಂದು ದಿವಸ ಆರು ಗಂಟೆಯಿಂದ ಮಧ್ಯಾಹ್ನ ಎರಡು ಗಂಟೆವರೆವಿಗೋ

---

* Annexure.

ಅಥವಾ ಒಂದು ದಿವಸ ಹತ್ತು ಗಂಟೆಯಿಂದ ಆರು ಗಂಟೆವರೆವಿಗೋ ಇರಬಹುದು, ಈ ರೀತಿ ಆಲ್ಟರ್‌ನೇಟೀವ್ ಆಗಿ ಕೊಡುವುದಕ್ಕೆ ಸರ್ಕಾರ ಪ್ರಯತ್ನ ಪಟ್ಟು ಈ ರೀತಿ ಮಾಡಿದರೆ ರೈತರು ಅವರ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳುವುದಕ್ಕೆ ಉತ್ತಮವಾಗುತ್ತದೆ. ಈ ಕಾರ್ಯವನ್ನು ಮಾಡ ಬೇಕೆಂದು ಮಾನ್ಯ ವಿದ್ಯುತ್ ಸಚಿವರನ್ನು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಈಗಾಗಲೇ ಸ್ಥಳೀಯ ರೈತರ ಅನುಕೂಲಗಳನ್ನು ನೋಡಿಕೊಂಡು ಬೆಳಗಿನ ೧೨ ಗಂಟೆಗಳಲ್ಲಿ ಅವರಿಗೆ ಉಪಯೋಗ ಆಗತಕ್ಕ ರೀತಿಯಲ್ಲಿ ವಿದ್ಯುತ್ತನ್ನು ಬೇಕಾದರೆ ೪-೦೦ ಗಂಟೆ ಆದರೂ ಪರವಾಗಿಲ್ಲ, ಬೆಳಿಗ್ಗೆ ನಾಲ್ಕು ಗಂಟೆ ಕೊಟ್ಟು, ಕಟ್ ಮಾಡಿ ಮತ್ತೆ ೪ ಗಂಟೆ ಕೊಡುವಂತಹ ವಿಷಯವನ್ನು ಈಗಾಗಲೇ ತೀರ್ಮಾನ ಮಾಡಿ ತಿಳಿಸಿದ್ದೇನೆ. ಕೆಲವರು ಬೆಳಿಗ್ಗೆ ಆರು ಗಂಟೆಗೆ ಬೇಕು ಎಂದು, ಮತ್ತೆ ಕೆಲವರು ನಮಗೆ ೧೦ ಗಂಟೆ ಕೊಡಿ, ಇನ್ನು ಕೆಲವರು ೧೨ ಗಂಟೆಗೆ ಕೊಡಿ ಎಂದು ಹೇಳುತ್ತಾರೆ. ಆದಕ್ಕೋಸ್ಕರ ಸ್ಥಳೀಯ ರೈತರ ಅನುಕೂಲಗಳನ್ನು ಅನುಸರಿಸಿ ಅವರಿಗೆ ಸೂಟ್ ಆಗುವಂತೆ ಪವರ್ ಕಟ್ ಮಾಡಬೇಕು ಎನ್ನುವಂತಹ ಆದೇಶವನ್ನು ಈಗಾಗಲೇ ಕೊಟ್ಟಿದ್ದೇನೆ. ಈ ರೀತಿ ಸ್ಥಳೀಯ ಮುಖಂಡರು, ಸ್ಥಳೀಯ ಅಧಿಕಾರಿಗಳು ಆಗಲೀ ಅವರ ಮುಖಾಂತರ ಅವರಿಗೆ ಪತ್ರ ಬರೆದು ಅಥವಾ ಅವರನ್ನು ಸಂಪರ್ಕಿಸಿ ಅವರು ಅನುಕೂಲವಾಗುವ ರೀತಿಯಲ್ಲಿ ವಿದ್ಯುತ್ತನ್ನು ಉಪಯೋಗಿಸಿಕೊಳ್ಳಬಹುದು.

ಶ್ರೀ ಸಿ. ಎನ್. ಓಬ್ಬೇಗೌಡ.—ಈ ರೀತಿಯ ಆದೇಶಗಳನ್ನು ಕಳಿಸಿಕೊಟ್ಟಿದ್ದೇನೆಂದು ವಿದ್ಯುತ್‌ಶಕ್ತಿ ಸಚಿವರು ತಿಳಿಸಿದ್ದಾರೆ. ಇದು ಉತ್ತಮವಾದದ್ದು. ಅದನ್ನು ಸ್ವಾಗತ ಮಾಡಿ ಮತ್ತೆ ಇರತಕ್ಕ ಅಥವಾ ಕೊಡತಕ್ಕ ವಿದ್ಯುತ್ ವೋಲ್ಟೇಜ್ ಇಲ್ಲದೆ ರೈತನಿಗೆ ಕೊಟ್ಟ ಅವಧಿಯಲ್ಲಿ ವಿದ್ಯುತ್ತನ್ನು ಬಳಸಿಕೊಳ್ಳಲು ಆಗುತ್ತಾ ಇಲ್ಲ ಇವೊತ್ತು ವೋಲ್ಟೇಜ್ ಸಾಕಷ್ಟು ಕಡಿಮೆಯಾಗಿ ಪಂಪುಗಳು ಇರಬಹುದು, ಅಥವಾ ಬೋರ್‌ವೆಲ್‌ಗಳು ಇರಬಹುದು ಒಂದೆಡೆ ೪೨೦ ಅಥವಾ ೩೬೦, ೩೮೦ ಇದ್ದದ್ದು, ಕೇವಲ ೨೨೦, ೨೩೦ ಬರತಕ್ಕಂಥ ವೋಲ್ಟೇಜನ್ನು ನಾವು ನೋಡಿದ್ದೇವೆ. ಹಳ್ಳಿಗಳಲ್ಲಿ ಅನೇಕ ಕಡೆ ಪಂಪುಸೆಟ್ಟುಗಳನ್ನು ಅಳವಡಿಸಿಕೊಂಡಿದ್ದಾರೆ ಅವರಿಗೆ ಸರಬರಾಜು ಇರತಕ್ಕಂಥ ವಿದ್ಯುತ್ ಪಂಪುಗಳೇ ಓಡದಿರತಕ್ಕಂಥ ಸರಬರಾಜು ಇರತಕ್ಕಂಥ ವೋಲ್ಟೇಜನ್ನು ತಪ್ಪಿಸಬೇಕು. ತಾವು ದಯವಿಟ್ಟು ವಿದ್ಯುತ್ತನ್ನು ಸರಬರಾಜು ಮಾಡುತ್ತೀರಿ. ಅದನ್ನು ನಿಖರವಾಗಿ ರೈತನಿಗೆ ಕೊಡುವಂತಹ ಸಮಯದಲ್ಲಿ ಪಂಪುಗಳನ್ನು ಓಡಿಸುವಂತಹ ವ್ಯವಸ್ಥೆ ಮತ್ತು ಸರಿಯಾಗಿ ವೋಲ್ಟೇಜ್ ಇರತಕ್ಕಂಥ ವಿದ್ಯುತ್ತನ್ನು ಸರಬರಾಜು ಮಾಡಬೇಕೆಂದು ಮಾನ್ಯ ಸಚಿವರನ್ನು ನಾನು ಒತ್ತಾಯ ಮಾಡುತ್ತೇನೆ ಈ ಒಂದು ಆದೇಶವನ್ನು ಇಲಾಖೆಗೆ ಕೊಟ್ಟು ಇವೊತ್ತಿನ ದಿವಸ ರೈತ ಮುಖ್ಯವಾಗಿ ಅವಲಂಬಿಸಿರತಕ್ಕ ವಿದ್ಯುತ್ತನ್ನು ಅವನಿಗೆ ಕಾಲದಲ್ಲಿ ಕೊಡತಕ್ಕದ್ದನ್ನು ಸರಿಯಾದ ವೋಲ್ಟೇಜನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ರೈತರಿಗೆ ಶೋಷಣೆ ಆಗತಕ್ಕಂಥ ಅಥವಾ ದಳ್ಳಾಳಿಗಳ ಮುಖಾಂತರ ಶೋಷಣೆ ಆಗುವುದನ್ನು ತಪ್ಪಿಸಬೇಕು. ನಿಯಂತ್ರಿತ ಮಾರುಕಟ್ಟೆಗಳಲ್ಲಿ ಕೇವಲ ಗ್ರಾಹಕ ಪಡೆದುಕೊಂಡ, ಕೊಂಡು ಕೊಂಡ ಎಲ್ಲವನ್ನೂ ಆತನೇ ತುಂಬಬೇಕು ಎಂಬ ಉತ್ತಮವಾದ ಕಾರ್ಯವನ್ನು ಮಾಡಿದೆ. ಆದರೆ ನಿಯಂತ್ರಿತ ಮಾರುಕಟ್ಟೆಗಳಲ್ಲಿ ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಾ ಇದ್ದವರು ಕೇವಲ ದಿನಗೂಲಿಯ ಮೇಲೆ ನೇಮಕ ಮಾಡಿಕೊಂಡಿದ್ದ. ಅವರನ್ನು ಖಾಯಂ ಮಾಡದೆ ಸಾವಿರಾರು ಹುದ್ದೆಗಳು ಖಾಲಿ ಇರತಕ್ಕದ್ದನ್ನು ನಾವು ಕಂಡಿದ್ದೇವೆ. ಯಾವ ಒಂದು ಕಾರಣಕ್ಕಾಗಿ ಹೀಗೆ ಆಗಿದೆಯೋ ಗೊತ್ತಿಲ್ಲ. ಕೇವಲ ಎರಡು ಅಥವಾ ಮೂರು ತಿಂಗಳು ದಿನಗೂಲಿಯ ಆಧಾರದ ಮೇಲೆ ನೇಮಕ ಮಾಡಿಕೊಂಡು ನಿಯಂತ್ರಿತ ಮಾರುಕಟ್ಟೆಗಳಲ್ಲಿ ಎ.ಪಿ.ಎಂ.ಸಿ.ಯವರು ಹಣ ತುಂಬುವುದು ಇದ್ದರೂ ಸಹ ಅದನ್ನು ತುಂಬದೆ ಇವೊತ್ತು ಖಾಲಿ ಇರತಕ್ಕಂಥ ಹುದ್ದೆಗಳನ್ನು ಖಾಲಿ ಇಡತಕ್ಕದ್ದು ಮಾಡದೆ ತುಂಬುವಂತಹ ಕಾರ್ಯವನ್ನು ಮಾಡಬೇಕೆಂದು ಹೇಳುತ್ತೇನೆ.

(ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಮಾನ್ಯ ನಿಯಂತ್ರಿತ ಮಾರುಕಟ್ಟೆ ಸಚಿವರು ಇದ್ದಾರೆ. ಅವರು ಆದಷ್ಟು ಬೇಗ ಈ ಖಾಲಿ ಹುದ್ದೆಗಳನ್ನು ತುಂಬುವಂತಹ ಕಾರ್ಯವನ್ನು ರಾಜ್ಯಾದ್ಯಂತ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಈಗ ತಾತ್ಕಾಲಿಕವಾಗಿ ನೇಮಕಗಳನ್ನು ಮಾಡಿಕೊಂಡು ಒಂದೆರಡು ತಿಂಗಳ ನಂತರ ಅವರನ್ನು ಕೆಲಸದಿಂದ ತೆಗೆಯುವಂತಹ ಕೆಲಸ ಏನು ನಡೆಯುತ್ತಿದೆ, ಅದು ನಿಲ್ಲಬೇಕು. ಈಗ ಈ ಇಲಾಖೆಯಲ್ಲಿ ಏನು ಖಾಲಿ ಹುದ್ದೆಗಳು ಇವೆ ಅವುಗಳಿಗೆ ಅಭ್ಯರ್ಥಿಗಳನ್ನು ಖಾಯಂ ಆಗಿ ಭರ್ತಿ ಮಾಡಬೇಕು. ಇದಕ್ಕೆ ಆಗುವಂತಹ ಖರ್ಚನ್ನು ಸರ್ಕಾರ ಏನೂ ತುಂಬಿಕೊಡಬೇಕಾಗಿ ಬರುವುದಿಲ್ಲ. ಈ ಹಣವನ್ನು ಆಯಾ ಮಾರುಕಟ್ಟೆ ಸಮಿತಿಯವರೇ ತುಂಬಿಕೊಡಲು ಸಿದ್ಧರಾಗಿದ್ದಾರೆ. ಆದ್ದರಿಂದ ಈ ಕೆಲಸ ಜಾಗ್ರತೆ ಆಗಬೇಕೆಂದು ನಾನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಇನ್ನು ಜಿಲ್ಲಾಪರಿಷತ್‌ಗಳ ಆಡಳಿತದ ಬಗ್ಗೆ ಹೇಳಬೇಕೆಂದರೆ, ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಅಧಿಕಾರ ಮತ್ತು ಆಡಳಿತದ ವಿಕೇಂದ್ರೀಕರಣವಾಗಬೇಕೆಂಬ ದೃಷ್ಟಿಯಿಂದ ಈ ಮಂಡಲ್ ಪಂಚಾಯತ್‌ಗಳು ಮತ್ತು ಜಿಲ್ಲಾಪರಿಷತ್‌ಗಳು ರಚನೆ ಆದವು. ಇವುಗಳ ಕೆಲಸಕಾರ್ಯ ಪ್ರಾರಂಭವಾಗಿ ಈಗ ಒಂದು ವರ್ಷ ಮುಗಿದಿದೆ. ಇಷ್ಟು ಅಲ್ಪ ಸಮಯದಲ್ಲಿಯೇ ಇವುಗಳ ಆಡಳಿತದ ಬಗ್ಗೆ ನಾವು ಅನೇಕ ಟೀಕಾಟಿಪ್ಪಣಿಗಳನ್ನು ಕೇಳಿದ್ದೇವೆ. ಇದೊಂದು ಹೊಸ ಪ್ರಯೋಗವಾಗಿರುವುದರಿಂದ ಇವುಗಳ ಆಡಳಿತದ ಬಗ್ಗೆ ಇಷ್ಟೊಂದು ದೊಡ್ಡ ರೀತಿಯಲ್ಲಿ ಟೀಕೆಗಳನ್ನು ಮಾಡುವುದು ಸರಿಯಲ್ಲವೆಂದು ನಾನು ಹೇಳುತ್ತೇನೆ. ಮಾನ್ಯ ಯಡಿಯೂರಪ್ಪನವರು ನಿನ್ನೆ ದಿವಸ ಮಾತನಾಡುವಾಗ ಕರ್ನಾಟಕ ರಾಜ್ಯದಲ್ಲಿರುವ ಮಂಡಲ್ ಪಂಚಾಯಿತಿಗಳ ಪೈಕಿ ಒಂದು ಪಂಚಾಯಿತಿಯಲ್ಲಿಯೂ ಸಹ ೨೫ ಸಾವಿರ ರೂಪಾಯಿಗಳಷ್ಟು ಕೆಲಸ ನಡೆದಿಲ್ಲ ಎಂದು ಹೇಳಿದರು. ಆದರೆ ಇದು ಸತ್ಯಕ್ಕೆ ದೂರವಾದ ಮಾತು. ನಮ್ಮ ಬೆಂಗಳೂರು ಜಿಲ್ಲಾಪರಿಷತ್‌ನ್ನು ತೆಗೆದುಕೊಂಡರೆ, ಇದರ ವ್ಯಾಪ್ತಿಯಲ್ಲಿ ೭೨ ಮಂಡಲ್ ಪಂಚಾಯತ್‌ಗಳು ಬರುತ್ತವೆ. ಪ್ರತಿ ಮಂಡಲ್ ಪಂಚಾಯತ್‌ನವರು ಸಹ ೩ ಲಕ್ಷ ರೂಪಾಯಿಗಳಷ್ಟು ಕೆಲಸಗಳನ್ನು ಮಾಡಿಸಿದ್ದಾರೆ. ಅದು ಎನ್.ಆರ್.ಇ.ಪಿ. ಇರಬಹುದು, ಕೂಲಿಗಾಗಿ ಕಾಳು ಯೋಜನೆ ಕೆಲಸ ಇರಬಹುದು, ಬರಗಾಲದ ಕಾಮಗಾರಿ ಕೆಲಸಗಳು ಇರಬಹುದು. ಒಟ್ಟಿನಲ್ಲಿ ಪ್ರತಿ ಮಂಡಲ್ ಪಂಚಾಯತ್ ವ್ಯಾಪ್ತಿಯಲ್ಲಿ ೩ ಲಕ್ಷ ರೂಪಾಯಿಗಳಷ್ಟು ಕೆಲಸ ನಡೆದಿದೆ. ಅದೇ ರೀತಿ ಇಡೀ ರಾಜ್ಯಾದ್ಯಂತವಿರುವ ಎಲ್ಲಾ ಮಂಡಲ್ ಪಂಚಾಯತ್ ವ್ಯಾಪ್ತಿಯಲ್ಲಿ ೫೦ ಸಾವಿರ ರೂಪಾಯಿಗಳಿಂದ ಹಿಡಿದು ಒಂದು ಲಕ್ಷ ರೂಪಾಯಿಗಳವರೆಗೆ ಕೆಲಸಕಾರ್ಯಗಳು ನಡೆದಿದ್ದರೂ ಸಹ ೨೫ ಸಾವಿರ ರೂಪಾಯಿಗಳ ಕೆಲಸಗಳೂ ನಡೆದಿಲ್ಲ ಎಂದು ಟೀಕೆ ಮಾಡಿದ್ದುದು ಸರಿಯಲ್ಲ. ಅವರ ವಾದವನ್ನು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ, ಇದೊಂದು ಹೊಸ ಪ್ರಯೋಗ ಏನೇ ಆಗಿದೆ, ಆದ್ದರಿಂದ ಅವರು ಕೆಲವು ಕಾಲದವರೆಗೆ ಕೆಲಸ ಮಾಡಲು ಅವಕಾಶ ಮಾಡಿಕೊಡಬೇಕಾಗುತ್ತದೆ. ಅವರ ಕೆಲಸದಲ್ಲಿ ಏನಾದರೂ ಲೋಪದೋಷಗಳು ಕಂಡುಬಂದರೆ, ಅವುಗಳನ್ನು ಸರಿಪಡಿಸುವ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಇವುಗಳು ಅಸ್ತಿತ್ವದಲ್ಲಿ ಒಂದು ಒಂದು ವರ್ಷದ ಮೇಲಾದರೂ ಸಹ ಎಲ್ಲಾ ಪಂಚಾಯಿತಿಗಳಿಗೂ ಕಾರ್ಯದರ್ಶಿಗಳನ್ನು ಇನ್ನೂ ನೇಮಕ ಮಾಡಿಲ್ಲ. ಕೆಲವು ಪಂಚಾಯಿತಿಗಳಲ್ಲಿ ಕಾರ್ಯದರ್ಶಿಗಳು ಇಲ್ಲದೆ ಅಲ್ಲಿನ ಪ್ರಧಾನರೇ ಎಲ್ಲಾ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಇವರನ್ನು ನೇಮಕ ಮಾಡಲು ಏತಕ್ಕೆ ನಿಧಾನವಾಗುತ್ತಿದೆ ? ಇದರ ಬಗ್ಗೆ ಸರ್ಕಾರ ಕೈಕಟ್ಟಿ ಕುಳಿತುಕೊಳ್ಳುವುದು ಸರಿಯಲ್ಲ. ಶೇಕಡ ೫೦ರಷ್ಟು ಕಾರ್ಯದರ್ಶಿಗಳನ್ನು ವ್ಯವಸಾಯ ಇಲಾಖೆಯಿಂದ ಮತ್ತು ಇನ್ನುಳಿದ ಶೇಕಡ ೫೦ರಷ್ಟು ಕಾರ್ಯದರ್ಶಿಗಳನ್ನು ರೆವಿನ್ಯೂ ಇಲಾಖೆಯಿಂದ ತುಂಬಬೇಕೆಂಬ ಆದೇಶದ ಪ್ರಕಾರ ಈಗಾಗಲೇ ಶೇಕಡ ೫೦ರಷ್ಟು ಕಾರ್ಯದರ್ಶಿಗಳು ವ್ಯವಸಾಯ ಇಲಾಖೆಯಿಂದ ಹೋಗಿ ಕೆಲಸ ಮಾಡುತ್ತಿದ್ದಾರೆ. ಆದರೆ ರೆವಿನ್ಯೂ ಇಲಾಖೆಯಿಂದ ಯಾರೂ ಸಹ ಹೋಗಿ ಅಲ್ಲಿ ಕಾರ್ಯದರ್ಶಿಗಳಾಗಿ ಕೆಲಸ ಮಾಡಲು ಇಷ್ಟಪಡುತ್ತಿಲ್ಲ. ಇದರಿಂದ ಅಲ್ಲಿ ಶೇಕಡ ೫೦ರಷ್ಟು ಸ್ಥಾನಗಳು ಖಾಲಿ ಇವೆ. ಇದರಿಂದ ಅನೇಕ ಕೆಲಸಗಳು ನಡೆಯದೆ ಸ್ಥಗಿತವಾಗಿವೆ. ಆರ್ಥಿಕ ಸಂಪನ್ಮೂಲಗಳನ್ನು ಆಯಾ ಮಂಡಲ್ ಪಂಚಾಯತ್‌ಗಳೇ ರೂಢಿಸಿಕೊಳ್ಳಬೇಕಾಗಿದೆ. ಇದರ ಜೊತೆಗೆ ಬೇರೆ ಇತರೇ ಕೆಲಸಗಳನ್ನು ಮಾಡಲು ಕಾರ್ಯದರ್ಶಿಗಳ ಅವಶ್ಯಕತೆ ಈ ಮಂಡಲ್ ಪಂಚಾಯಿತಿಗಳಿಗೆ ಇದೆ. ಆದ್ದರಿಂದ ಕಂದಾಯ ಇಲಾಖೆಯಿಂದಲಾಗಲೀ ಅಥವಾ ವ್ಯವಸಾಯ ಇಲಾಖೆಯಿಂದಲಾಗಲೀ ಅಧಿಕಾರಿಗಳ ಸೇವೆಯನ್ನು ಪಡೆದುಕೊಂಡು ಈ ಹುದ್ದೆಗಳಿಗೆ ನೇಮಕ ಮಾಡಬೇಕೆಂದು ಮತ್ತು ಈ ಕೆಲಸ ಜಾಗ್ರತೆ ಆಗಬೇಕೆಂದು ಮಾನ್ಯ ಗ್ರಾಮಾಭಿವೃದ್ಧಿ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಬಗ್ಗೆ ಅವರ ಜೊತೆ ಸಾಕಷ್ಟು ಸಲ ಪ್ರಸ್ತಾಪ ಮಾಡಿದ್ದೇನೆ. ಈಗಾಗಲೇ ಅವರು ಸಾಕಷ್ಟು ಪ್ರಯತ್ನ ಮಾಡಿ ಕೆಲವು ಖಾಲಿಯಾದ ಹುದ್ದೆಗಳನ್ನು ತುಂಬಿದ್ದಾರೆ. ಇನ್ನುಳಿದ ಜಾಗಗಳಿಗೂ ತುಂಬಬೇಕೆಂದು ಕೇಳಿಕೊಳ್ಳುತ್ತೇನೆ. ಈ ಜಿಲ್ಲಾಪರಿಷತ್‌ಗಳು ಮತ್ತು ಮಂಡಲ್ ಪಂಚಾಯತ್‌ಗಳು ತಮ್ಮ ಭಾಗದ

ಅಭಿವೃದ್ಧಿ ಕೆಲಸಗಳಿಗೆ ಬೇಕಾದ ಹಣಕ್ಕೆ ಸರ್ಕಾರವನ್ನೇ ಅವಲಂಬಿಸದೆ, ತಮಗೆ ಬೇಕಾದ ಸಂಪನ್ಮೂಲಗಳನ್ನು ತಾವೇ ರೂಢಿಸಿಕೊಳ್ಳುವಂಥ ಕೆಲಸ ಮಾಡಬೇಕು. ಈ ಒಂದು ಕೆಲಸವನ್ನು ಈ ಸಂಸ್ಥೆಗಳು ಯಶಸ್ವಿಯಾಗಿ ಮಾಡಬೇಕಾಗುತ್ತದೆ.

ಆ ಒಂದು ಪ್ರಯತ್ನವನ್ನು ನಾವು ಮಾಡಿದರೆ, ಆಯಾ ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಉತ್ತಮವಾದ ಕಾರ್ಯವನ್ನು ಮಾಡುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ಅಂತಹ ಒಂದು ಒಳ್ಳೆಯ ಪರಿಸ್ಥಿತಿ ಇದೆ. ಇವತ್ತು ಅನೇಕ ಕಾಂಗ್ರೆಸ್ ಮಿತ್ರರು ಟೀಕೆ ಮಾಡುತ್ತಾ ಮಂಡಲ ಪಂಚಾಯಿತಿಗಳು ಚುನಾವಣೆ ಆದಮೇಲೆ ಮರ್ಡರ್ ಪಂಚಾಯಿತಿಗಳಾಯಿತು ಗ್ರಾಮಗಳಲ್ಲಿ ಗಲಾಟೆಗಳಾಗುತ್ತಿದೆ, ಪೋಲೀಸ್ ಸ್ಟೇಷನ್‌ಗೆ ಹೋಗುವಂಥ ಪರಿಸ್ಥಿತಿ ಇದೆ, ಜಿಲ್ಲಾ ಪರಿಷತ್ತುಗಳ ಚುನಾವಣೆ ನಂತರ ಗ್ರಾಮಗಳಲ್ಲಿ ನೆಮ್ಮದಿ ಕೆಟ್ಟಿದೆ ಎಂದು ಹೇಳಿದ್ದಾರೆ. ಹಿಂದೆ ಗ್ರಾಮ ಪಂಚಾಯಿತಿಗಳು ಇರಬಹುದು, ತಾಲ್ಲೂಕು ಬೋರ್ಡ್ ಇರಬಹುದು. ಈಗ ಚುನಾವಣೆ ನಡೆದಿದೆ. ಕೆಲವಾರು ದಿನಗಳಿಂದ ಇಲ್ಲಿ ವಿರೋಧಪಕ್ಷದವರು ಬಾಯ್ಕಾಟ್ ಮಾಡಿದ್ದಾರೆ. ಮದ್ರಾಸ್ ಅಸೆಂಬ್ಲಿಯಲ್ಲಿ ಬೇಕಾದಷ್ಟು ಗಲಾಟೆಯಾಗಿದೆ, ಅಸೆಂಬ್ಲಿ ರದ್ದು ಮಾಡಿದ್ದಾರೆ', ಅಲ್ಲಿ ಆ ಒಂದು ಸೆಟ್‌ಅಪ್ ತಪ್ಪಿದೆ. ಇದಕ್ಕೆ ನನ್ನ ವಿರೋಧ ಇದೆ ಎಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ತಿಳಿಸುತ್ತೇನೆ. ಮಂಡಲ ಪಂಚಾಯಿತಿಗಳಿಗೆ ಚುನಾವಣೆ ಮಾಡಿದೆ. ಗ್ರಾಮ ಸ್ವರಾಜ್ಯ ಆಗಬೇಕು, ಜನರಿಗೆ ಅಧಿಕಾರ ಸಿಗಬೇಕು. ಗ್ರಾಮಗಳಲ್ಲಿ ಗ್ರಾಮ ಸಭೆಗಳನ್ನು ನಡೆಸಬೇಕು, ಅಧಿಕಾರ ವಿಕೇಂದ್ರೀಕರಣ ಆಗಬೇಕು ಸಾಮಾನ್ಯ ಜನರಿಗೆ ಸರ್ಕಾರದ ಫಲ ತಲುಪಬೇಕು ಎಂಬ ಉದ್ದೇಶದಿಂದ ಇದನ್ನು ಮಾಡಿದೆ. ಈ ದಿಸೆಯಲ್ಲಿ ಒಳ್ಳೆಯ ಕೆಲಸಗಳು ಆಗುತ್ತಿವೆ. ಇವತ್ತು ಶಾಸಕರಿಗೆ ಏನು ಅಧಿಕಾರ ಇದೆ ಎನ್ನುವ ಪ್ರಶ್ನೆ ಇದೆ. ಕಮ್ಯುನಿಸ್ಟ್ ಪಕ್ಷದ ಮಾನ್ಯ ಸದಸ್ಯರಾದ ಭೂಪತಿಯವರು ಎಂದು ಕಾಣುತ್ತದೆ, ಅವರು ಮಾತನಾಡುವಾಗ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳು ಆದಮೇಲೆ ನಮ್ಮನ್ನು ಸೂಪರ್‌ವೈಸರಾಗಿ ಮಾಡಿದ್ದಾರೆ ಎಂದು ಪ್ರಸ್ತಾಪ ಮಾಡುತ್ತಿದ್ದರು. ಶಾಸಕರನ್ನು ತಾಲ್ಲೂಕು ಪಂಚಾಯಿತಿ ಸಮಿತಿಗಳಲ್ಲಿ ಅಧ್ಯಕ್ಷರನ್ನಾಗಿ ನೇಮಕಮಾಡಿ ಮೇಲ್ವಿಚಾರಣೆಗಾಗಿ ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ನ್ನು ನೋಡಿಕೊಳ್ಳುವ ಕೋಆರ್ಡಿನೇಟರಾಗಿ ಕೆಲಸ ಮಾಡಬೇಕು ಎಂದು ನಮ್ಮನ್ನು ನೇಮಕ ಮಾಡಿದ್ದಾರೆ. ಇವತ್ತು ನಮಗೆ ಅಧಿಕಾರ ಕೊಡಿ, ನಮಗೆ ಸ್ವಲ್ಪ ಹಣ ಕೊಡಿ. ತಾಲ್ಲೂಕು ಪಂಚಾಯಿತಿ ಸಮಿತಿಯಲ್ಲಿ ಹಣದ ವ್ಯವಸ್ಥೆ ಇಲ್ಲ, ಬರೀ ಸಭೆ ಮಾಡಬೇಕು. ತಿಂಗಳಿಗೆ ಒಂದು ಸಭೆ ಮಾಡಿ ಮಾತನಾಡಿ ಹೋಗಬೇಕು ಎನ್ನುವ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಅದಕ್ಕೋಸ್ಕರ ಇವತ್ತು ನಮಗೆ ಸ್ವಲ್ಪ ಅಧಿಕಾರ ಕೊಡುವ, ಹಣ ಕೊಡುವ ಒಂದು ಕೆಲಸವನ್ನು ಮಾಡಿ ಎಂದು ತಮ್ಮ ಮೂಲಕ ನಾನು ಒತ್ತಾಯ ತಂದು ಉತ್ತಮವಾಗಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತೇನೆ, ಮಾನ್ಯ ಯಡಿಯೂರಪ್ಪನವರು ಈಗ ತಾನೇ ಸಭೆಗೆ ಬಂದಿದ್ದಾರೆ. ಅವರು ನಿನ್ನೆ ಚಾಲೆಂಜ್ ಮಾಡಿದರು, ಅವರು ಬಂದಿದ್ದರಿಂದ ಈಗ ಹೇಳುತ್ತೇನೆ. ಅವರು ಯಾವುದೇ ಮಂಡಲ ಪಂಚಾಯಿತಿಯಲ್ಲಿ ೨೫ ಸಾವಿರ ಖರ್ಚು ಮಾಡಿಲ್ಲ ಎಂದು ಹೇಳಿದರು. ದಯಮಾಡಿ, ಇದು ಸತ್ಯಕ್ಕೆ ದೂರವಾದ ಮಾತು, ಇದನ್ನು ವಾಪಸ್ ತೆಗೆದುಕೊಳ್ಳಬೇಕು. ಇಡೀ ರಾಜ್ಯದಲ್ಲಿ ಮಂಡಲ ಪಂಚಾಯಿತಿಗಳಲ್ಲಿ ಲಕ್ಷಾಂತರ ರೂಪಾಯಿಗಳು ಖರ್ಚಾಗಿದೆ. ಅವರು ಕೇವಲ ಟೀಕೆಗೆ ಈ ರೀತಿ ಮಾಡಿರಬಹುದೇನೋ ಎಂದು ನಾನು ಅಂದುಕೊಂಡಿದ್ದೇನೆ. ಅವರು ನನ್ನ ಜೊತೆ ಬರಬಹುದು, ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡಲಿ, ಎಷ್ಟು ಉತ್ತಮವಾದ ಕೆಲಸಗಳನ್ನು ಮಾಡಿದ್ದಾರೆ ಎನ್ನುವುದನ್ನು ನಾನು ತೋರಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸ ಮಾಡಿದ್ದೇನೆ. ರಾಜ್ಯದಲ್ಲಿ ಬೇರೆ ಕಡೆ ಪ್ರವಾಸ ಮಾಡಿದ್ದೇನೆ. ಶಿವಮೊಗ್ಗ ಜಿಲ್ಲೆಯಲ್ಲಿ ರೆಕಾರ್ಡ್ ತರಿಸಿ, ಎಲ್ಲಾದರೂ ಒಂದು ಮಂಡಲ ಪಂಚಾಯಿತಿಯಲ್ಲಿ ೨೫ ಸಾವಿರ ರೂಪಾಯಿಗಳನ್ನು ಜನಹಿತಕ್ಕೋಸ್ಕರ ಖರ್ಚು ಮಾಡಿದೆ ಎಂದು. ನೋಡಿದ್ದೇನೆ. ಇಂತಹ ಒಂದು ತಾಲ್ಲೂಕನ್ನು, ಮಂಡಲ ಪಂಚಾಯಿತಿಯನ್ನು ಉದಾಹರಣೆಯಾಗಿ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಕೊಟ್ಟರೆ ನಾನು ತುಂಬ ಋಣಿಯಾಗಿರುತ್ತೇನೆ.

ಶ್ರೀ ಬಿ. ಎನ್. ಬಚ್ಚೇಗೌಡ.—ಮಾನ್ಯ ಯಡಿಯೂರಪ್ಪನವರಿಗೆ ಗೊತ್ತಿದೆ. ಬರಗಾಲ ಪರಿಹಾರದಲ್ಲಿ ಕಾರ್ಯ ಆಗಿದೆ, ಇಲ್ಲ ಎಂದು ಅವರು ಹೇಳುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಇಂಟರ್‌ಫಿಯರ್ ಆಗಬೇಕು ಎಂದು ಅಲ್ಲ. ಇದು ಇಡೀ ರಾಜ್ಯದ ರೈತರ ವಿಚಾರಕ್ಕೆ ಸಂಬಂಧಪಟ್ಟಿದ್ದದು, ಬರಗಾಲ ಪರಿಹಾರ ಕಾಮಗಾರಿಯು ಫುಡ್ ಫಾರ್ ವರ್ಕ್ ಅಲ್ಲ. ಅದಕ್ಕೆ ಕೇಂದ್ರ ಸರ್ಕಾರದ ದುಡ್ಡು ಇದೆ, ಮತ್ತು ನಮ್ಮ ಸಂಪನ್ಮೂಲಗಳಿಂದಲೂ ಬರಗಾಲ ಪರಿಹಾರ ಕಾರ್ಯದಲ್ಲಿ ಖರ್ಚುಮಾಡಿ, ಕೆಲಸ ಎಲ್ಲೆಲ್ಲಿ ಆಗಬೇಕೋ ಅಲ್ಲಿ ಮಾಡಿದ್ದಾರೆ. ಆದರೆ ವಿಕೇಂದ್ರೀಕರಣ ಆಗಬೇಕು ಎಂದು ಮಾಡಿದಂಥ ಮಂಡಲ ಪಂಚಾಯಿತಿಯಲ್ಲಿ ಪ್ರಧಾನರ ಸಿಟ್ಟಿಂಗ್ ಫೀಸ್ ಬಿಟ್ಟರೆ ಯಾವುದೇ ಕೆಲಸ ಮಾಡುವುದಕ್ಕೆ ಆಗುತ್ತಾ ಇಲ್ಲ. ಎಸ್ಟಿಮೇಟ್ ತಂದರೆ ಮಂಜೂರು ಮಾಡುತ್ತಾ ಇಲ್ಲ, ಸ್ಟಾಫ್ ಇಲ್ಲ. ಆದ್ದರಿಂದ ಇದಕ್ಕೂ ಬರಗಾಲಕ್ಕೂ ಒಂದಕ್ಕೊಂದು ಜೋಡಿಸಿದರೆ ಹೇಗೆ ಸರಿಹೋಗುತ್ತದೆ ಎಂದು ನನಗೆ ಅರ್ಥವಾಗುತ್ತಾ ಇಲ್ಲ,

ಶ್ರೀ ಬಿ. ಎನ್. ಬಚ್ಚೇಗೌಡ.—ಇದರಲ್ಲಿ ನಮ್ಮ ರಾಜ್ಯ ಸರ್ಕಾರದ ಭಾಗವೂ ಇದೆ. ನಿನ್ನೆ ವ್ಯವಸಾಯ ಇಲಾಖೆ ಬಗ್ಗೆ ಪ್ರಸ್ತಾಪ ಬಂತು. ಇವತ್ತು ರಾಷ್ಟ್ರೀಯ ಜಲಾನಯನ ಪ್ರದೇಶ ಯೋಜನೆಯ ಮೂಲಕ ೨೦ ಜಿಲ್ಲೆಗಳಲ್ಲಿ ಭೂಮಿಯನ್ನು ಆಯ್ಕೆ ಮಾಡಿಕೊಂಡು ಅಭಿವೃದ್ಧಿಪಡಿಸುವಂಥ ಒಂದು ಯೋಜನೆ ಇದೆ. ಈಗ ೫ ತಾಲ್ಲೂಕುಗಳನ್ನು ಕೇಂದ್ರದ ಮಂಜೂರಾತಿಗಾಗಿ ಕಳುಹಿಸಿಕೊಡಲಾಗಿದ್ದು, ಒಂದೊಂದು ತಾಲ್ಲೂಕಿನಲ್ಲಿ ಸುಮಾರು ೪–೫ ಸಾವಿರ ಹೆಕ್ಟೇರ್ ಪ್ರದೇಶವನ್ನು ಆಯ್ಕೆ ಮಾಡಿ ಹರಿದುಹಂಚಿ ಹೋಗಿದ್ದ ಭೂಮಿಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ೧೯೮೭–೮೮ರಲ್ಲಿಯೇ ಕೇಂದ್ರಕ್ಕೆ ಯೋಜನೆಯನ್ನು ಸಲ್ಲಿಸಿದರೂ ಕಾಲಕ್ಕೆ ಸರಿಯಾಗಿ ಮಂಜೂರಾತಿ ಸಿಕ್ಕು ಅದು ಬರದೇ ತಡವಾಗಿದೆ. ಈ ವಿಚಾರದಲ್ಲಿ ಸಾಕಷ್ಟು ಪ್ರಯತ್ನ ಮಾಡಿ ಕೇಂದ್ರದಿಂದ ಮಂಜೂರಾತಿಯನ್ನು ಪಡೆದು ೧೯೮೮–೮೯ರಲ್ಲಾದರೂ ಇದನ್ನು ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ.

ಪ್ರಾಥಮಿಕ ಶಿಕ್ಷಣದ ಬಗ್ಗೆ ನಮ್ಮ ಸಹದ್ಯೋಗಿಗಳು ಮಾತನಾಡಿದ್ದಾರೆ. ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ. ಏಕೋಪಾಧ್ಯಾಯರೂ ಇಲ್ಲದೇ ಇರತಕ್ಕ ಪರಿಸ್ಥಿತಿ ನಿರ್ಮಾಣವಾಗಿದೆ. ಜಿಲ್ಲಾ ನೇಮಕಾತಿ ಸಮಿತಿಗಳ ಮೂಲಕ ಆದಷ್ಟು ಬೇಗ ಶಿಕ್ಷಕರನ್ನು ನೇಮಕ ಮಾಡಿ, ಎಲ್ಲಾ ಶಾಲೆಗಳಲ್ಲಿಯೂ ಪೂರ್ಣ ಪ್ರಮಾಣದ ಶಿಕ್ಷಕರುಗಳು ಇರುವಂತೆ ಮಾಡಬೇಕು. ಮುಂದಿನ ವರ್ಷಗಳಲ್ಲಿ ಶಾಲೆಗಳು ಪ್ರಾರಂಭವಾಗುವ ಮುನ್ನ ಈ ಒಂದು ಕೆಲಸವನ್ನು ಸರ್ಕಾರ ಮಾಡಬೇಕು. ನಮ್ಮ ಜಿಲ್ಲಾ ಪರಿಷತ್ತಿನಲ್ಲಿ ಒಂದು ಕಾರ್ಯವನ್ನು ನಾವು ಮಾಡಿದ್ದೇವೆ. ಸುಮಾರು ೫೦೦ ವಿದ್ಯಾವಂತರು ಬೆಂಗಳೂರು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಸಂಭಾವನೆಯನ್ನು ಪಡೆಯದೇ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇವೊತ್ತು ರಾಜ್ಯ ಸರ್ಕಾರಕ್ಕೆ ಹಣದ ಕೊರತೆ ಇರುವುದರಿಂದ, ಹೆಚ್ಚು ಹೆಚ್ಚು ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಳ್ಳಬೇಕಾಗಿದೆ. ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಸಾವಿರಾರು ಎಕರೆ ಜಮೀನು ಬರುತ್ತದೆ. ಆ ಪ್ರದೇಶದಲ್ಲಿ ಎಲ್ಲಾ ಜಾತಿಯ ಹಣ್ಣಿನ ಗಿಡಗಳನ್ನು ಬೆಳೆಸತಕ್ಕ ಕಾರ್ಯ ಆಗಬೇಕು. ತೋಟಗಾರಿಕೆ ಇಲಾಖೆಗೆ ಹೆಚ್ಚು ಹಣ ಇಲ್ಲ. ಅಧಿಕಾರಿಗಳಿಗೆ ಬರೀ ಸಂಬಳ ಮಾತ್ರ ಕೊಡಲಾಗುತ್ತಿದೆ. ಇದರ ಮೂಲಕ ರೈತರಿಗೆ ಬೇಕಾದಂಥ ತೆಂಗು ಮಾವು, ಹಲಸಿನ ಗಿಡಗಳನ್ನು ಒದಗಿಸುವಂಥ ವ್ಯವಸ್ಥೆ ಮಾಡಬೇಕು. ವಿಶೇಷ ಘಟಕ ಯೋಜನೆಯ ಮೂಲಕ ತೆಂಗಿನ ಸಸಿಗಳನ್ನು ರೈತರಿಗೆ ಕೊಡುವುದಿಲ್ಲ. ಹರಿಜನರಿಗೆ ಮಾತ್ರ ಕೊಡುತ್ತಿದ್ದಾರೆ. ಇವತ್ತು ರೈತರಿಗೆ ಅಗತ್ಯವಿರುವಷ್ಟು ಸಸಿಗಳನ್ನು ಸರಬರಾಜು ಮಾಡತಕ್ಕ ಸ್ಥಿತಿಯಲ್ಲಿ ತೋಟಗಾರಿಕೆ ಇಲಾಖೆ ಇಲ್ಲ. ಸರ್ಕಾರದವರು ಈ ಇಲಾಖೆಗೆ ಹೆಚ್ಚು ಹಣಕಾಸಿನ ನೆರವನ್ನು ನೀಡಿ ಈ ಇಲಾಖೆಯ ಮೂಲಕ ರೈತರಿಗೆ ಗಿಡಗಳನ್ನು ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಸನ್ಮಾನ್ಯ ಅಧ್ಯಕ್ಷಣಿಯವರೇ, ನನ್ನ ತಲ್ಲೂಕಿನಲ್ಲಿ ಇವೊತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಯೋಜನೆಯಲ್ಲಿ ಫಲಪುಷ್ಪಗಳನ್ನು ಹೊರ ದೇಶಕ್ಕೆ ಕಳುಹಿಸುವಂಥ ಕಾರ್ಯವನ್ನು ಈ ತೋಟಗಾರಿಕೆ ಸಚಿವರು, ಕೇಂದ್ರಸರ್ಕಾರದ ಸಚಿವರು ಬಂದು ಈ ಪ್ರಯತ್ನವನ್ನು ಮಾಡಿ ಇಲ್ಲಿ ಬೆಳೆಯತಕ್ಕ ಹಣ್ಣು ತರಕಾರಿಗಳು ಇರಬಹುದು, ಫಲಪುಷ್ಪ ಇರಬಹುದು ಅವುಗಳನ್ನು ಹೊರ ದೇಶಕ್ಕೆ ಕಳುಹಿಸುವುದರ ಮೂಲಕ ರೈತರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಮಾಡಿದ್ದಾರೆ. ನನ್ನ ತಾಲ್ಲೂಕಿನ ಕನ್ನಮಂಗಲದಲ್ಲಿಯೂ ಸಹ ಈ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದಾರೆ. ಅದಕ್ಕೆ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಮತ್ತು ಆ ಕಡೆಯ ಸಾಕಷ್ಟು ಜನ ಸದಸ್ಯರು ಮಾತನಾಡುತ್ತಾ ಅನೇಕ ಟೀಕೆಟಿಪ್ಪಣಿಗಳನ್ನು ಮಾಡುವುದರ ಜೊತೆಗೆ ನಮ್ಮ

ಸರ್ಕಾರದಲ್ಲಿ ಹಣ ಇಲ್ಲ ಸಂಪನ್ಮೂಲಗಳ ಕೊರತೆ ಇದೆ, ಅದನ್ನು ಸರಿಪಡಿಸಿಕೊಳ್ಳುವ ವ್ಯವಸ್ಥೆಯನ್ನು ಮಾಡಿ ಎಂದು ಮಾತನಾಡಿದರು. ಇವೊತ್ತು ಬ್ಯುರೋಕ್ರಾಟ್ಸ್ ಏನಿದ್ದಾರೆ ಇವರಿಂದ ಅತೀ ಹೆಚ್ಚು ಹುದ್ದೆಗಳು ನಿರ್ಮಾಣವಾಗುತ್ತಿವೆ.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಸದಸ್ಯರು ನನ್ನ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾತನಾಡುತ್ತಾ, ಇವೊತ್ತು ತೆಂಗಿನ ಗಿಡಗಳನ್ನು ಒದಗಿಸಲಿಕ್ಕೆ ಇಲಾಖೆಗೆ ಶಕ್ತಿ ಇಲ್ಲ ಹಣದ ಕೊರತೆ ಇದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಸದಸ್ಯರು ಯಾವ ದಿನ ವಿಚಾರವನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳಿದರೋ ಗೊತ್ತಿಲ್ಲ. ನಾಳೆ ಸಂಜೆಗೆ ಬೇಕಾದರೆ ಎಷ್ಟು ಲಕ್ಷ ತೆಂಗಿನ ಗಿಡಗಳನ್ನು ಬೇಕಾದರೂ ರೈತರಿಗೆ ನಮ್ಮ ಇಲಾಖೆ ಕೊಡಲಿಕ್ಕೆ ಸಿದ್ಧವಿದೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಎನ್. ಬಚ್ಚೇಗೌಡ.—ಅಧ್ಯಕ್ಷರೆ, ಮಾನ್ಯ ಸಚಿವರ ಹೇಳಿಕೆಯನ್ನು ನಾನು ಸ್ವಾಗತ ಮಾಡುತ್ತೇನೆ. ಇವೊತ್ತು ನಾವು ಬ್ಯುರೋಕ್ರಾಟ್ಸ್ ಎಂದು ಏನು ಹೇಳುತ್ತೇವೆ ಇವರಿಂದ ಅನೇಕ ಇಲಾಖೆಗಳು ಜಾಸ್ತಿಯಾಗಿವೆ. ಇದನ್ನು ನಾವು ಈಗಾಗಲೇ ಗುರುತಿಸಿದ್ದೇವೆ. ಸರ್ಕಾರದಲ್ಲಿ ಎಸ್ಟಾಬ್ಲಿಷ್‌ಮೆಂಟ್ ಜಾಸ್ತಿಯಾಗುತ್ತಾ ಇದ್ದು, ನೂರಕ್ಕೆ ಅರವತ್ತರಷ್ಟು ಹಣವನ್ನು ಇವರಿಗಾಗಿ ಖರ್ಚು ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ನಮ್ಮ ಸರ್ಕಾರದ ಸಂಪಾದನೆಯ ಹಣವನ್ನು ಇವರುಗಳ ಓಡಾಟಕ್ಕೆ, ಸಂಬಳಕ್ಕೆ ಕೊಡುವಂತಾಗಿರುವುದನ್ನು ನಾವು ಗುರುತಿಸಿದ್ದೇವೆ. ಇಲಾಖೆಗಳು ದಿನೇ ದಿನೇ ಜಾಸ್ತಿಯಾಗುತ್ತಿವೆ. ಅಡೀಷನಲ್ ಸೆಕ್ರೆಟರಿ, ಐ.ಪಿ.ಎಸ್. ಈ ಕೇಡರ್‌ಗಳು ಏನು ಇವೆ ಇವರು ಆರ್ಗನೈಸ್ಡ್ ಸೆಕ್ಟರ್, ಅದು ತಮಗೂ ಗೊತ್ತಿದೆ. ಇವರು ಏನು ಮಾಡುತ್ತಾರೆ ಅಂದರೆ ಒಬ್ಬ ಸೆಕ್ರೆಟರಿ ಇದ್ದರೆ ನಾಳೆ ಅಡೀಷನಲ್ ಸೆಕ್ರೆಟರಿ, ಒಬ್ಬ ಡಿ.ಐ.ಜಿ. ಇದ್ದರೆ, ನಾಳೆ ಅಡೀಷನಲ್ ಡಿ.ಐ.ಜಿ. ಈ ರೀತಿ ಸಾವಿರಾರು ಹುದ್ದೆಗಳು ಜಾಸ್ತಿಯಾಗಿರುವುದನ್ನು ನಾವು ಕಾಣಬಹುದಾಗಿದೆ. ಒಂದು ಜಿಲ್ಲಾಧಿಕಾರಿ ಇದ್ದುದು ಎರಡು ಜಿಲ್ಲಾಧಿಕಾರಿ ಮಾಡಿರುವುದು ಇರಬಹುದು, ಎರಡು ಜಿಲ್ಲಾಧಿಕಾರಿ ಇದ್ದುದು ನಾಲ್ಕು ಜಿಲ್ಲಾಧಿಕಾರಿ ಮಾಡಿರುವುದು ಇರಬಹುದು. ಇಬ್ಬರು ಡೆಪ್ಯುಟಿ ಸೆಕ್ರೆಟರಿ, ನಾಲ್ಕು ಜನ ಅಸಿಸ್ಟೆಂಟ್ ಸೆಕ್ರೆಟರಿ, ಅವರ ಕೆಳಗೆ ೨೫೦ ಜನ ಕೆಲಸ ಮಾಡುವಂಥ ಇಲಾಖೆಗಳು ವಿಪರೀತವಾಗಿವೆ. ಇವರ ಸಂಬಳ ಸಾರಿಗೆಗೆ ಸರ್ಕಾರದ ಹಣವನ್ನು ಕೊಟ್ಟು, ಬೊಕ್ಕಸ ಖಾಲಿಯಾಗುತ್ತಿದೆ. ಸರ್ಕಾರಕ್ಕೆ ಬರತಕ್ಕ ಸಂಪೂರ್ಣ ಹಣವನ್ನು ಇವರು ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ನಾವು ಈಗಾಗಲೇ ಗುರುತಿಸಿದ್ದೇವೆ. ಇದನ್ನು ನಾವು ಇನ್ನು ಮುಂದೆ ಕಡಿಮೆ ಮಾಡುವುದಲ್ಲದೆ, ನಿಲ್ಲಿಸಬೇಕಾಗುತ್ತದೆ. ಈ ರೀತಿ ಬೆಳೆದುಕೊಂಡು ಹೋಗುತ್ತಿರುವುದನ್ನು ಕಡಿಮೆ ಮಾಡದೇ ಹೋದರೆ ಮುಂದೆ ಕಷ್ಟವಾಗುತ್ತದೆ. ಈಗ ಇದುವರೆಗೂ ಇಲಾಖೆಗಳಲ್ಲಿ ಕೆಲಸಗಾರರನ್ನು ಏನು ನೇಮಕ ಮಾಡಿಕೊಂಡಿದ್ದೇವೆ ಅವರು ಎಷ್ಟರಮಟ್ಟಿಗೆ ಜನರ ಕೆಲಸವನ್ನು ಮಾಡುತ್ತಿದ್ದಾರೆ ಎನ್ನುವುದನ್ನು ನಾವು ಕಂಡಿದ್ದೇವೆ. ಮಾನ್ಯ ಯಡಿಯೂರಪ್ಪನವರು ಮಾತನಾಡುವಾಗ, ಮೂರು ವರ್ಷಗಳ ಕಾಲ ಅಪಾಯಿಂಟ್‌ಮೆಂಟ್ ಬ್ಯಾನ್ ಮಾಡಿದಿರಿ, ಎಂದು ಹೇಳಿದರು. ಮೊನ್ನೆ ಸರ್ಕಾರದ ಪ್ಲಾನ್‌ನಲ್ಲಿ ಎಲ್ಲಿ ಅಪ್ರೂವ್ ಆಗಿದೆ ಅಂತಹ ಕಡೆ ಅಪಾಯಿಂಟ್‌ಮೆಂಟ್ ಮಾಡಿ ಹೊಸದಾಗಿ ತೆಗೆದುಕೊಳ್ಳಬಹುದು ಎಂದು ತಿಳಿಸಿದರು. ಇವೊತ್ತು ನಾವು ಇಲಾಖೆಗಳಲ್ಲಿ ಒಬ್ಬರು ಮಾಡುವಂಥ ಕೆಲಸವನ್ನು ಹತ್ತು ಜನರು ಮಾಡುತ್ತಿರುವುದು ಗುರುತಿಸಿದ್ದೇವೆ. ಇವರಲ್ಲಿ ದಕ್ಷತೆ ಕಡಿಮೆಯಾಗಿದೆ. ಇವೊತ್ತು ಅಥಾರಿಟಿ ಏನು ಕೆಲಸ ಮಾಡುತ್ತಿದೆ ಅದು ಡೈಲ್ಯೂಟ್ ಆಗಿದೆ. ಒಬ್ಬರು ಮಾಡುವಂಥದ್ದನ್ನು ನಾಲ್ಕು ಜನ ಮಾಡುವಂತೆ ಹುದ್ದೆಗಳನ್ನು ಸೃಷ್ಟಿ ಮಾಡಿರುವುದರಿಂದ ಹಣ ಅದೇ ರೀತಿ ಖರ್ಚಾಗುತ್ತಿದೆ. ಕೋಟ್ಯಾಂತರ ರೂಪಾಯಿಗಳ ಹಣ ಇವರ ಓಡಾಟಕ್ಕೆ, ಸಾರಿಗೆಗೆ, ಸಂಬಳಕ್ಕೆ ಕೊಡುವಂಥ ಕಾರ್ಯವನ್ನು ನಾವು ದಿನನಿತ್ಯ ಕಾಣುತ್ತಿದ್ದೇವೆ. ಇದಕ್ಕೆ ನಾವು ಕಡಿವಾಣ ಹಾಕಲೇಬೇಕಾಗುತ್ತದೆ. ತಮಗೆ ಉದಾಹರಣೆ ಹೇಳಬೇಕೆಂದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಒಂದು ಪ್ರಾರಂಭವಾಯಿತು. ಅದೇ ರೀತಿ ಬೆಂಗಳೂರು ನಗರ ಜಿಲ್ಲೆ ಎಂದು ಇನ್ನೊಂದು ಆಯಿತು.

ನಗರ ಜಿಲ್ಲೆಗೆ ಜಿಲ್ಲಾಧಿಕಾರಿಗಳು, ಅಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿವರ್ಗ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೆಲಸಮಾಡತಕ್ಕ ಜಿಲ್ಲಾಧಿಕಾರಿಗಳು, ಮತ್ತು ಅಲ್ಲಿ ಕೆಲಸಮಾಡತಕ್ಕ ಸಿಬ್ಬಂದಿವರ್ಗ ಹೀಗೆ ಕೇವಲ ಸಿಬ್ಬಂದಿವರ್ಗವೇ ಜಾಸ್ತಿಯಾಗುತ್ತಿದೆ. ಹಿಂದೆ ಒಬ್ಬರೇ ಒಬ್ಬರು ಜಿಲ್ಲಾಧಿಕಾರಿಯವರು

ಮಾಡುತ್ತಿದ್ದ ಕೆಲಸವನ್ನು ಈಗ ೪ ಜನ ಜಿಲ್ಲಾಧಿಕಾರಿಗಳು ಮಾಡುತ್ತಿದ್ದಾರೆ. ಇವತ್ತು ಅದೇ ಕಾರ್ಯವನ್ನು ಮಾಡಲು ಬೆಂಗಳೂರು ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತು ಬಂದರೆ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಮತ್ತು ಆನೇಕಲ್ ತಾಲ್ಲೂಕಿನಲ್ಲಿ ಕೆಲಸಮಾಡತಕ್ಕ ಸಿಬ್ಬಂದಿಗೆ ಎಷ್ಟು ಹಣವನ್ನು ಖರ್ಚುಮಾಡಬೇಕಾಗಿದೆ ಎಂಬುದನ್ನು ತಾವು ನೋಡಬೇಕು. ಅಷ್ಟೊಂದು ಆರ್ಥಿಕ ಹೊರೆ ನಮ್ಮ ಸರ್ಕಾರದಮೇಲೆ ಬೀಳುತ್ತಿದೆ. ಇದೇರೀತಿ ಇನ್ನೂ ಎಷ್ಟು ಹಣವನ್ನು ಸಿಬ್ಬಂದಿಗಾಗಿ ಖರ್ಚು ಮಾಡುತ್ತಿದ್ದೇವೆಂಬುದನ್ನು ತಾವು ಹೇಳಬೇಕು. ಹಲವಾರು ಇಲಾಖೆಗಳಲ್ಲಿ ಈ ಬ್ಯೂರೋಕ್ರ್ಯಾಟ್ಸ್ ಏನಿದ್ದಾರೆ ಅವರೆಲ್ಲರಿಗೂ ನಾವು ಕಡಿವಾಣವನ್ನು ಹಾಕದಿದ್ದರೆ ಇನ್ನು ಮುಂದೆಯೂ ಇದೇರೀತಿ ನಡೆದು ಕೊಂಡು ಹೋಗುತ್ತದೆ ಇದನ್ನು ತಾವು ಸರಿಪಡಿಸಬೇಕು. ನಗರ ವ್ಯಾಪ್ತಿಯಲ್ಲಿ ಉತ್ತಮ ಕೆಲಸಗಳಾಗಿವೆ ಇಲ್ಲಿ ರೆವಿನ್ಯೂ ನಿವೇಶನಗಳನ್ನು ಖಾಯಂ ಮಾಡತಕ್ಕ ಕಾರ್ಯವನ್ನು ಸರ್ಕಾರ ಮಾಡಬೇಕು. ಈಗ ರೆವಿನ್ಯೂ ನಿವೇಶನಗಳಲ್ಲಿ ಯಾರ್‍ಯಾರು ಮನೆಗಳನ್ನು ಕಟ್ಟಿಕೊಂಡು ಹತ್ತಾರು ವರ್ಷಗಳಿಂದ ವಾಸಮಾಡುತ್ತಿದ್ದಾರೆ ಅವರವರ ಮನೆಗಳನ್ನು ಅವರವರಿಗೇ ಖಾಯಂ ಮಾಡಿಕೊಡತಕ್ಕ ಕೆಲಸವನ್ನು ತಾವು ಮಾಡಿದ್ದೀರಿ. ಇವತ್ತಿನ ದಿವಸ ಬೆಂಗಳೂರು ಪ್ರಾಧಿಕಾರದವರು ಹತ್ತಾರು ಸಾವಿರ ಮನೆ ನಿವೇಶನಗಳನ್ನು ವಿತರಣೆ ಮಾಡುತ್ತಾ ಬಹಳ ವರ್ಷಗಳಿಂದ ಯಾವ ಜನ ನಿವೇಶನಗಳನ್ನು ಕೇಳುತ್ತಿದ್ದರು ಆ ಎಲ್ಲಾ ಜನರಿಗೂ ನಿವೇಶನಗಳನ್ನು ಒದಗಿಸಿಕೊಡತಕ್ಕ ಕೆಲಸವನ್ನು ಮಾಡಿದ್ದಾರೆ. ಭೂ ಸ್ವಾಧೀನದ ಪ್ರಕರಣಗಳಲ್ಲಿ ಹಿಂದೆ ಒಂದು ಎಕರೆಗೆ ೪೦—೫೦ ಸಾವಿರ ರೂಪಾಯಿಗಳ ಪರಿಹಾರವನ್ನು ಏನು ಕೊಡುತ್ತಿದ್ದರು ಅದನ್ನು ಈಗ ಹೆಚ್ಚು ಮಾಡಿ ಸುಮಾರು ೧ ಲಕ್ಷ ರೂಪಾಯಿಗಳ ವರೆಗೂ ಕೊಡತಕ್ಕ ಕೆಲಸವನ್ನು ಮಾಡಿದ್ದೀರಿ. ಯಾರು ತಮ್ಮ ಜಮೀನನ್ನು ನಿವೇಶನಗಳಿಗೋಸ್ಕರ ಸರ್ಕಾರದವರಿಗೆ ಬಿಟ್ಟು ಕೊಡುತ್ತಾರೆ, ಅಥವಾ ಸರ್ಕಾರದವರು ಭೂ ಸ್ವಾಧೀನ ಮಾಡಿಕೊಂಡಾಗ ಯಾರು ಜಮೀನನ್ನು ಕಳೆದುಕೊಳ್ಳುತ್ತಾರೆ ಅವರಿಗೆ ಬೇರೆ ಕಡೆ ಜಮೀನು ಕೊಡತಕ್ಕ ಅಥವಾ ಪರಿಹಾರ ಧನವನ್ನು ಕೊಡತಕ್ಕ ಕೆಲಸವನ್ನು ತಾವು ಮಾಡಿದ್ದೀರಿ. ಹಲವಾರು ಕ್ಷೇತ್ರಗಳಲ್ಲಿ ಬಹಳ ಉತ್ತಮ ಕೆಲಸಗಳನ್ನು ಕಳೆದ ೫ ವರ್ಷಗಳಲ್ಲಿ ಮಾಡಿದ್ದೀರಿ. ಅದು ರೈತರಿಗೋಸ್ಕರ ಇರಬಹುದು ಕಾರ್ಮಿಕರಿ ಗೋಸ್ಕರ ಇರಬಹುದು, ಅಥವಾ ಕೃಷಿ ಕಾರ್ಮಿಕರಿಗೋಸ್ಕರ ಇರಬಹುದು. ಕಾರ್ಮಿಕ ಕ್ಷೇತ್ರದಲ್ಲಿ ಮಾಲೀಕರಿಂದ ಕಾರ್ಮಿಕರ ಶೋಷಣೆ ಆಗುತ್ತಿದ್ದು ಆ ಕಾರ್ಮಿಕ ವರ್ಗದಲ್ಲಿ ಏನು ಅಶಾಂತಿಯನ್ನು ಕಾಣುತ್ತಿದ್ದೇವೆ ಅದನ್ನು ದೂರ ಮಾಡಬೇಕೆಂದು ಮತ್ತು ಕೈಗಾರಿಕೆಗಳ ಮೇಲೆ ನಿಯಂತ್ರಣ ಇಟ್ಟುಕೊಂಡು ಕಾರ್ಮಿಕರ ಜೀವನವನ್ನು ಉತ್ತಮಗೊಳಿಸಲು ಸರ್ಕಾರ ಕೆಲಸ ಮಾಡಬೇಕೆಂದು ನಾನು ತಿಳಿಸಬಯಸುತ್ತೇನೆ. ಸ್ವಾಮಿ, ನನ್ನ ತಾಲೂಕಿನಲ್ಲಿ ಅಲೆಂಬಿಕ್ ಕಾರ್ಖಾನೆ ಮುಚ್ಚಿ ಹೋಗಿದೆ. ಅಲ್ಲಿ ಕೆಲಸಮಾಡುತ್ತಿದ್ದ ಸುಮಾರು ೧ ಸಾವಿರ ಜನ ಇವೊತ್ತು ಬೀದಿಯ ಪಾಲಾಗಿದ್ದಾರೆ. ತಾವು ಅನೇಕ ರೀತಿಯಲ್ಲಿ ಆ ಮಾಲೀಕರ ಜೊತೆ ಸಂಧಾನ ಮಾಡಿದರೂ ಅವರು ಕಾರ್ಖಾನೆಯನ್ನು ತೆರೆಯದೆ ಕಾರ್ಮಿಕರಿಗೆ ತೊಂದರೆಯನ್ನುಂಟು ಮಾಡಿದ್ದಾರೆ. ಈ ಕಾರ್ಖಾನೆಯನ್ನು ಸರ್ಕಾರ ಸ್ವಾಧೀನ ಪಡಿಸಿಕೊಳ್ಳುವ ಅಥವಾ ಅಲ್ಲಿನ ಕಾರ್ಮಿಕರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಇಂಥ ಕಾರ್ಖಾನೆಗಳ ಮೇಲೆ ಹತೋಟಿಯನ್ನು ಇಟ್ಟುಕೊಳ್ಳಬೇಕಾದರೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ತಂದು ಕಾನೂನಿನಲ್ಲಿ ಏನಾದರೂ ತಿದ್ದುಪಡಿಯನ್ನು ಮಾಡಬೇಕಾಗಿ ಕಂಡುಬಂದರೆ ಅದನ್ನಾದರೂ ಮಾಡಿ ಯಾರು ಕಾರ್ಖಾನೆಗಳನ್ನು ಮುಚ್ಚುತ್ತಾರೆ ಅಂಥ ಕಾರ್ಖಾನೆ ಗಳನ್ನು ಸ್ವಾಧೀನಪಡಿಸಿಕೊಳ್ಳುವ ಕ್ರಮ ಕೈಗೊಂಡು ಅಲ್ಲಿನ ಕಾರ್ಮಿಕರು ಜೀವನ ನಡೆಸುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನು ಪುರಸಭೆಗಳ ಬಗ್ಗೆ ಹೇಳುವುದಾದರೆ, ನನಗಿಂತಲೂ ಚೆನ್ನಾಗಿ ತಮಗೇ ಗೊತ್ತಿದೆ. ಪುರಸಭೆಗಳ ಆರ್ಥಿಕ ಪರಿಸ್ಥಿತಿ ಏನಾಗಿದೆ ಎಂದರೆ ಅಲ್ಲಿ ಒಂದು ರೀತಿಯ ವಾಸನೆ ಬಡಿಯುತ್ತಿದೆ. ಪುರಸಭೆಗಳಿಗೆ ಬರುತ್ತಿದ್ದ ಆಕ್ಟ್ರಾಯ್ ರದ್ದಾಯಿತು. ಅದಾದಮೇಲೆ ಆ ಪುರಸಭೆಗಳಿಗೆ ಆಕ್ಟ್ರಾಯ್ ಬಾಬ್ತು ಬರುತ್ತಿದ್ದ ಹಣವನ್ನು ಸರ್ಕಾರ ತುಂಬುತ್ತಿಲ್ಲ. ಅಲ್ಲಿನ ಸಿಬ್ಬಂದಿವರ್ಗದವರಿಗೆ ಪ್ರತಿ ತಿಂಗಳೂ ಸುಮಾರು ೫೦ ಸಾವಿರದಿಂದ ೧ ಲಕ್ಷ ರೂಪಾಯಿವರೆಗೂ ಸಂಬಳಸಾರಿಗೆಗಳನ್ನು ಕೊಡಬೇಕಾಗುತ್ತದೆ ೫—೬ ಲಕ್ಷ ರೂಪಾಯಿಗಳ ವರಮಾನ ಬರುತ್ತಿದ್ದ ಪುರಸಭೆಗಳಿಗೆ ಆರ್ಥಿಕ ಸಹಾಯವನ್ನು ಮಾಡುತ್ತೇವೆಂದು ಹಲವಾರು ವರ್ಷಗಳಿಂದ ಹೇಳುತ್ತಿದ್ದರೂ ಕೂಡ ಅವರಿಗೆ ಹಣ ಸಹಾಯ ಮಾಡುವುದಕ್ಕೆ ನಮಗೆ ಇದುವರೆಗೂ ಆಗುತ್ತಿಲ್ಲ.

ಇವರಿಗೆ ಎಷ್ಟು ಕೊಡುತ್ತಾರೆಂದರೆ ಕೇವಲ ೨೫ ಸಾವಿರ ೫೦ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಯಾವುದೇ ಹೆಚ್ಚಿನ ಸಹಾಯವನ್ನು ಪುರಸಭೆಗಳಿಗೆ ಕೊಡದಿದ್ದರೆ ನಗರವಾಸಿಗಳಿಗೆ ಬಹಳ ಕಷ್ಟವಾಗುತ್ತದೆ, ಬಹಳಷ್ಟು ತೊಂದರೆಗೆ ಈಡಾಗುತ್ತಾರೆಂದು ಮಾನ್ಯ ಅಧ್ಯಕ್ಷಣಿಯವರ ಮುಖಾಂತರ ಸರ್ಕಾರಕ್ಕೆ ಒತ್ತಾಯಮಾಡಿ, ಪುರಸಭೆಗಳಿಗೆ ಇನ್ನೂ ಹೆಚ್ಚಿನ ಹಣವನ್ನು ಸರ್ಕಾರದವರು ಒದಗಿಸಿಕೊಡುವಂಥ ಕಾರ್ಯವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲು ಇಚ್ಛಿಪಡುತ್ತೇನೆ.

ಇನ್ನು ಮಾನ್ಯ ರಾಜ್ಯಪಾಲರು ಐದು ವರ್ಷಗಳ ಜನತಾ ಪಕ್ಷದ ಸಾಧನೆಯನ್ನು ಚೆನ್ನಾಗಿ ಮೆಚ್ಚಿದ್ದಾರೆ. ಮೂವತ್ತೈದು ವರ್ಷಗಳಕಾಲ ಕಾಂಗ್ರೆಸ್ ಸರ್ಕಾರ, ಹಿಂದಿನ ಸರ್ಕಾರಗಳು ಯಾವುದೂ ಮಾಡಲಿಲ್ಲ. ಜನತಾ ಸರ್ಕಾರ ಆಡಳಿತಕ್ಕೆ ಬಂದಮೇಲೆ ಜನತೆಯ ಆಶೋತ್ತರಗಳನ್ನು ಈಡೇರಿಸಲು ಆಗಬೇಕಾದಂಥ ಕಾರ್ಯ ಕ್ರಮಗಳನ್ನು ಹಮ್ಮಿಕೊಂಡು ಜನತೆಯ ಆಶೋತ್ತರಗಳಿಗೆ ಸ್ಪಂದಿಸುವ ರೀತಿಯಲ್ಲಿ ಮಾಡಿದೆ ಎಂದು ಪ್ರಸ್ತಾಪ ಮಾಡಿದ್ದಾರೆ ಬಹಳ ಮುಖ್ಯವಾಗಿ ರಾಜ್ಯದಲ್ಲಿ ನಿವೇಶನ ರಹಿತರಿಗೆ ನಿವೇಶನಗಳನ್ನು ಹಂಚುವಂಥ ಕಾರ್ಯ ಮತ್ತು ವಾಸದ ಮನೆಗಳನ್ನು ಕೊಡುವಂಥ ಕೆಲಸವನ್ನು ಸಂಪೂರ್ಣವಾಗಿ ಮಾಡಿದೆ. ಮತ್ತೆ ರಾಜ್ಯದಲ್ಲಿ ವಿದ್ಯುದ್ದೀಕರಣವಾಗಬೇಕು ಎನ್ನುವ ಕಾರ್ಯವನ್ನು ಕೈಗೊಂಡು ಭಾಗ್ಯಜ್ಯೋತಿ ಯೋಜನೆಯನ್ನು ಸಂಪೂರ್ಣವಾಗಿ ಮಾಡಬೇಕೆಂದು ಈ ವರ್ಷದಲ್ಲಿಯೇ ಆ ಕಾರ್ಯವನ್ನು ಮುಗಿಸುತ್ತೇವೆಂದು ಘೋಷಣೆ ಮಾಡಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಇಂಥ ಒಳ್ಳೆಯ ಕಾರ್ಯಗಳನ್ನು ಮಾಡಿರುವಂಥ ಸರ್ಕಾರ ತನ್ನ ಐದು ವರ್ಷಗಳ ಜನೋತ್ಸವ ಮಾಡಿರುವ ಬಗ್ಗೆ ಇವೊತ್ತು ಸಾಕಷ್ಟು ಟೀಕೆ ಟಿಪ್ಪಣಿಗಳನ್ನು ಮಾಡಿದಂಥ ಕಮ್ಯುನಿಸ್ಟ್ ಸದಸ್ಯರು ಏನು ಹೇಳಿದರು ಎಂದರೆ ಜನರನ್ನು ಕರೆದುಕೊಂಡು ಜನೋತ್ಸವವನ್ನು ಮಾಡಿದರು ಎಂದು ಹೇಳಿದರು. ಅದು ಸಂಪೂರ್ಣವಾಗಿ ಸತ್ಯಕ್ಕೆ ದೂರವಾದ ಮಾತು. ಲಕ್ಷಾಂತರ ಜನರು ಸ್ವಇಚ್ಛೆಯಿಂದ ಬಂದು ಈ ಜನೋತ್ಸವದಲ್ಲಿ ಪಾಲ್ಗೊಂಡು ಸಂತೋಷದಿಂದ ಹಿಂದಿರುಗಿದ್ದಾರೆ. ನಮ್ಮ ಜಿಲ್ಲೆಯಿಂದಲೇ ಲಕ್ಷಾಂತರ ಜನರು ಬಂದು ರಾಜ್ಯದ ಮಹಾಜನರು, ವಿರೋಧಪಕ್ಷದ ದುರೀಣರು, ಮಾಡಿದಂಥ ಭಾಷಣವನ್ನು ಕೇಳಿದ್ದನ್ನು ನಾವು ನೋಡಿದ್ದೇವೆ. ಐದು ವರ್ಷಗಳ ಕಾಲ ಜನತೆಯ ಸೇವೆಯನ್ನು ಸಂಪೂರ್ಣವಾಗಿ ಮಾಡಿ ಜನೋತ್ಸವ ಸಮ್ಮೇಳನವನ್ನು ನಾವು ಮಾಡಿದ್ದೇವೆಂದು ತಿಳಿಸಿ, ಈ ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟ ಮಾನ್ಯ ಅಧ್ಯಕ್ಷಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೧-೩೦ ಪಿ.ಎಂ.

† ಶ್ರೀ ಕೆ. ಬಿ ಶಾಣಪ್ಪ.—(ಶಹಬಾದ್).—ಸನ್ಮಾನ್ಯ ಅಧ್ಯಕ್ಷಣಿಯವರೇ ಈಗಾಗಲೇ ಮಾನ್ಯ ಬಿ. ಎನ್. ಬಚ್ಚೇಗೌಡರು ಜನತಾ ಸರ್ಕಾರ ಸುಮಾರು ಐದು ವರ್ಷಗಳಲ್ಲಿ ಜನತೆಯ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಮಾಡಿದಂಥ ಪ್ರಯತ್ನದಲ್ಲಿ ಸತತವಾಗಿ ಐದು ವರ್ಷಗಳ ಅವಧಿಯಲ್ಲಿ ಎಷ್ಟು ಕಾರ್ಯಕಲಾಪಗಳನ್ನು ಮಾಡಿದರು, ಯಾವ ಯಾವ ರಂಗದಲ್ಲಿ ಯಾವ ಯಾವ ರೀತಿಯಲ್ಲಿ ಪ್ರಗತಿಯನ್ನು ಈ ಐದು ವರ್ಷಗಳಲ್ಲಿ ಮಾಡಿದರು ಎನ್ನುವ ಬಗ್ಗೆ ಹೇಳಿದರು. ಮಾನ್ಯ ರಾಜ್ಯಪಾಲರು ದಿನಾಂಕ ೨೦ ರಂದು ಮಾಡಿದ ಭಾಷಣದಲ್ಲಿ, ವಿಸ್ತಾರವಾಗಿ ಇದನ್ನು ಹೇಳಿ ತಮ್ಮ ಬೆನ್ನನ್ನು ತಾವೇ ತಟ್ಟಿಸಿಕೊಂಡಿದ್ದಾರೆ. ನಾವು ಕೂಡ ೧೯೮೩ರಲ್ಲಿ ಜನತಾ ಸರ್ಕಾರ ಅಧಿಕಾರಕ್ಕೆ ಬಂದಾಗ ಹೊಸದಾಗಿ ಆರಿಸಿ ಬಂದಿದ್ದೆವು. ಅನೇಕ ಸಮಸ್ಯೆಗಳನ್ನು ಒಡ್ಡಿದ್ದಂಥ ಕಾಂಗ್ರೆಸ್ ಸರ್ಕಾರ ಕರ್ನಾಟಕದ ಜನತೆಯ ಸಮಸ್ಯೆಗಳನ್ನು ಬಗೆಹರಿಸಲಿಲ್ಲ. ರೈತರ ಹೋರಾಟವನ್ನು ವಿರುದ್ಧವಾಗಿ ಕಂಡು ಅದನ್ನು ಹತ್ತಿಕ್ಕಲಿಕ್ಕೆ ಮಾಡಿದಂಥ ಪ್ರಯತ್ನ, ಮತ್ತು ಸಾವಿರಾರು ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲಿಲ್ಲ ಎನ್ನುವ ಒಂದು ವಿಷಯವನ್ನು ತೆಗೆದುಕೊಂಡು ಚುನಾವಣೆಯಲ್ಲಿ ರಾಜ್ಯದ್ಯಂತ ಜನ ಮತ್ತು ನಾವು ಕೂಡ ಹೊಂದಾಣಿಕೆ ಮಾಡಿಕೊಂಡು ಹೊಸ ಸರ್ಕಾರವನ್ನು ರಚನೆ ಮಾಡಿದೆವು. ೧೯೮೩ರ ರಾಜ್ಯಪಾಲರ ಭಾಷಣವನ್ನು ನಾವು ನೋಡಿದಾಗ, ೧೯೮೩ರಿಂದ ೧೯೮೮ರ ವರೆಗೆ, ರಾಜ್ಯಪಾಲರ ಭಾಷಣದಲ್ಲಿ ರಾಜ್ಯದ ಜನತೆಗೆ ಮಾನ್ಯ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಕೊಟ್ಟಂಥ ಆಶ್ವಾಸನೆ ಏನು ಇದೆ, ಯಾವ ಯಾವ ರಂಗದಲ್ಲಿ ತಮ್ಮ ಸರ್ಕಾರ ಯಾವರೀತಿಯಲ್ಲಿ ಪ್ರಗತಿಯನ್ನು ಸಾಧಿಸಿದ್ದಾರೆಂಬುದನ್ನೆಲ್ಲ ಹೇಳಿದ್ದಾರೆ. ಅದೇ ಪ್ರಕಾರ ಎರಡು ವರ್ಷಗಳ ಅವಧಿಯನ್ನು ನೋಡಿದಾಗ ನಾವೂ ಕೂಡ ಈ ಸರ್ಕಾರ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವಂತಿದೆ ಎನ್ನುವಂತಿತ್ತು.

ನಾವು ಕೂಡ ಆಗ ಇವರಿಗೆ ಬೆನ್ನು ತಟ್ಟಿದ್ದೆವು. ಅದೇ ಸರ್ಕಾರ ೧೯೮೫ರಲ್ಲಿ ತವಮ್ಮದೇ ಆದ ಮೆಜಾರಿಟಿಯನ್ನು ಗಡೆದುಕೊಂಡು ಇವತ್ತು ರಾಜ್ಯಭಾರ ಮಾಡುತ್ತಿದೆ. ಇವರಿಗೆ ನಾವು ಈಗಲೂ ಒಳ್ಳೆಯ ಕೆಲಸ ಮಾಡಿದಾಗ ಬೆನ್ನು ತಟ್ಟುತ್ತೇವೆ, ಆಗಲೂ ತಟ್ಟಿದ್ದೆವು. ಆದರೆ ಇವತ್ತು ಪರಿಸ್ಥಿತಿ ಎಷ್ಟು ಏಕೋಪಕ್ಕ ಹೋಗಿದೆ ಎಂದರೆ, ಯಾವುದೇ ರಂಗವನ್ನು ಅಥವಾ ಯಾವುದೇ ಒಂದು ಇಲಾಖೆಯನ್ನು ತೆಗೆದುಕೊಂಡು ಅವಲೋಕನ ಮಾಡಿದಾಗ ಯಾವ ರೀತಿಯ ಪ್ರಗತಿಯನ್ನು ಸಾಧಿಸಿರುವುದು ಕಂಡುಬರುತ್ತಿಲ್ಲ. ದುರ್ದೈವದಿಂದ ಇವತ್ತು ಈ ಸದನದಲ್ಲಿ ಮುಖ್ಯವಾಗಿ ವಿರೋಧ ಪಕ್ಷದವರು ಇಲ್ಲ. ಇರತಕ್ಕವರು ನಾವು ಮತ್ತು ಎಡಿಯೂರಪ್ಪನವರು. ೬೬ ಜನ ಇದ್ದಂತಹ ಕಾಂಗ್ರೆಸ್ ಸದಸ್ಯರು ಯಾವುದೋ ವಿಷಯದ ಮೇಲೆ ಪ್ರತಿಭಟನೆ ಮಾಡಿ ಹೊರಗಡೆ ಹೋಗಿದ್ದಾರೆ. ನನಗೆ ಗೊತ್ತಿದ್ದ ಹಾಗೆ ಕರ್ನಾಟಕ ವಿಧಾನ ಮಂಡಲದ ಇತಿಹಾಸದಲ್ಲಿ ಇಷ್ಟು ದೊಡ್ಡ ಸಂಖ್ಯೆಯಲ್ಲಿರತಕ್ಕ ವಿರೋಧ ಪಕ್ಷದವರು ಬಾಯ್‌ಕಾಟ್ ಮಾಡಿ, ರಾಜ್ಯಪಾಲರ ಭಾಷಣದ ಮೇಲೆ ಕೆಲವೇ ಜನ ಮಾತನಾಡಿದ್ದು ಇದುವರೆಗೆ ಕಂಡಿರಲಿಕ್ಕೆ ಇಲ್ಲ. ಭಾಷಣ ಮಾಡಬೇಕು, ನಮ್ಮ ವಿಚಾರವನ್ನು ಸದನದಲ್ಲಿ ಹೇಳಬೇಕು, ಸರ್ಕಾರದ ನ್ಯೂನತೆಗಳನ್ನು, ಕಾರ್ಯಕಲಾಪಗಳನ್ನು ಹೇಳಬೇಕು ಅಂದರೆ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಕೂಡ ಇಲ್ಲಿ ಇಲ್ಲ. ಒಬ್ಬೊಬ್ಬರನ್ನು ನೋಡಿದರೆ ಏನು ಹೇಳಬೇಕೆಂಬ ಪ್ರಚೋದನೆ ಕೂಡ ಬರುತ್ತಿಲ್ಲ. ನಿಮ್ಮನ್ನು ನೋಡಿದರೆ ಮತ್ತೆ ಹಳೆಯದನ್ನೇ ಮಾತನಾಡುತ್ತೇನೆ. ಮಾನ್ಯ ರಾಮಯ್ಯನವರು, ಶಂಕರ್‌ರವರು, ವೀರಣ್ಣನವರು ಮತ್ತು ಬಾಗಲಕೋಟೆಯವರು ಇದ್ದಾರೆ. ಅವರೆಲ್ಲರೂ ರಾಜ್ಯ ಮಂತ್ರಿಗಳೇ. ಅವರಿಗೂ ಕೂಡ ಕಳಕಳಿ ಏನೆಂದರೆ ವಿರೋಧ ಪಕ್ಷ ಹೊರಗೆ ಹೋದಾಗ ಏನು ಹೇಳಬೇಕು, ಕೇಳಬೇಕು ಎಂದು.

ಶ್ರೀ ಆರ್. ವೆಂಕಟರಾಮಯ್ಯ.—ಫ್ರಂಟ್ ಬೆಂಚಿನಲ್ಲಿ ಕೂಡ ಒಬ್ಬರೂ ಇಲ್ಲ. ಇವರಿಗೆ ಎಷ್ಟು ಬೇಜವಾಬ್ದಾರಿ ಎಂದರೆ...

ವೈಸ್ ಚೇರ್ಮನ್.—ಮಾನ್ಯ ಮಂತ್ರಿಗಳು ಕೌನ್ಸಿಲ್ಲಿಗೆ ಹೋಗಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಒಬ್ಬ ಮಂತ್ರಿಗಳೂ ಇಲ್ಲ. ಎಂದರೆ ಅವರು ಹೇಳಿದ್ದನ್ನು ಬರೆದುಕೊಳ್ಳುವವರು ಯಾರು ? ಇಷ್ಟೊಂದು ಬೇಜವಾಬ್ದಾರಿತನದ ವರ್ತನೆಯನ್ನು ನಾವು ಸಹಿಸುವುದಕ್ಕಾಗುವುದಿಲ್ಲ. ಈಗ ಒಬ್ಬೊಬ್ಬರು ಬರುತ್ತಿದ್ದಾರೆ, ಮಾನ್ಯ ಶಾಣಪ್ಪನವರು ರಾಜ್ಯಪಾಲರ ಭಾಷಣದ ಬಗ್ಗೆ ಹೇಳುತ್ತಿದ್ದಾರೆ ಕೇಳಿ.

ಶ್ರೀ ಕೆ. ಬಿ. ಶಾಣಪ್ಪ.—ಈ ಸಂದರ್ಭದಲ್ಲಿ ನನಗೆ ಬೀಚಿಯವರ ತಿಮ್ಮನ ತಲೆ ನೆನಪಿಗೆ ಬರುತ್ತದೆ. ಭಾಷಣಕಾರ ಭಾಷಣ ಮಾಡುವಾಗ ಹೊಡೆದ-ಹೊಡೆದ ಭಾಷಣವನ್ನು, ಕೊನೆಗೆ ಯಾರೂ ಇರಲಿಲ್ಲ. ನಿಮ್ಮಂಥವರು ಒಬ್ಬರು ಅಲ್ಲಿ ಕುಳಿತಿದ್ದರು. ಎಲ್ಲರೂ ಹೋದರು, ನನ ಭಾಷಣದ ಹಾಗೆ ನಿನ್ನ ಭಾಷಣವೂ ಇದೆ, ಅದಕ್ಕೋಸ್ಕರ ನಾನು ಕುಳಿತಿದ್ದೇನೆ ಎಂದರು. ಇವತ್ತು ವಿಧಾನಸಭೆಯಲ್ಲಿ ಈ ಪರಿಸ್ಥಿತಿ ಉಂಟಾಗಿದೆ. ೧೯೮೬-೮೭-೮೮ನೇ ಸಾಲಿನ ರಾಜ್ಯಪಾಲರ ಭಾಷಣಗಳನ್ನು ಓದಿದರೆ ಪುನರಾವರ್ತನೆ ಕಾಣುತ್ತದೆ. ನನ್ನ ಸರ್ಕಾರ ಹಾಗೆ ಮಾಡಿತು, ಹೀಗೆ ಮಾಡಿತು, ಜಿಲ್ಲಾ ಪರಿಷತ್ತಿನ ಚುನಾವಣೆ ತಂದಿತು, ಅಧಿಕಾರ ವಿಕೇಂದ್ರೀಕರಣ ಮಾಡಿತು, ನನ್ನ ಸರ್ಕಾರ ೪೬ ಲಕ್ಷ ಮಕ್ಕಳಿಗೆ ಬಟ್ಟೆಗಳನ್ನು ಹಂಚಿತು. ವಿಧವೆಯರಿಗೆ ಪೆನ್‌ಷನ್ ಕೊಟ್ಟಿತು, ನನ್ನ ಸರ್ಕಾರ ೨೦ ಲಕ್ಷ ಹೆಕ್ಟೇರ್ ಜಮೀನಿಗೆ ನೀರು ಬಿಟ್ಟಿತು. ನನ್ನ ಸರ್ಕಾರ ಬಂದ ನಂತರ ಕಾರ್ಮಿಕರಿಗೆ ಸಂಧಾನ ಮಾಡಿಸಿ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಿತು ಒಂದು ತಿಂಗಳಿಗೆ ಒಂದು ಸಾವಿರ ಇಂಡಸ್ಟ್ರಿಗಳನ್ನು ಓಪನ್ ಮಾಡಿದೆ; ನನ್ನ ಸರ್ಕಾರ ಬಂದ ಮೇಲೆ ರೈತರಿಗೆ ಸಾಲವನ್ನು ಮನ್ನಾ ಮಾಡಿದ್ದೇವೆ. ಹೀಗೇ ಪ್ರತಿಯೊಂದನ್ನು ಮಾಡಿದ್ದೇವೆ. ಎಂದು ಹೇಳಿರುವಾಗ ಉಳಿದ್ದಾದರೂ ಏನು ?

೩೫ ವರ್ಷಗಳಿಂದ ಕಾಂಗ್ರೆಸ್ಸಿನವರು ಮಾಡಲಾರದ್ದನ್ನು ಕೇವಲ ಐದು ವರ್ಷಗಳಲ್ಲಿ ನೀವು ಮಾಡಿದ್ದರೆ ನಾವು ಅಪ್ರಿಸಿಯೇಷನ್ ಕೊಡಬೇಕಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು.—ಪೂರ್ತಿ ಮಾಡಿದ್ದೇವೆ.

ಶ್ರೀ ಕೆ. ಬಿ. ಶಾಣಪ್ಪ.—ಪೂರ್ತಿ ಮಾಡುವುದಕ್ಕೆ ನಿಮ್ಮ ಹತ್ತಿರ ರೊಕ್ಕಾನೇ ಇಲ್ಲವಲ್ಲ. ಇವರು ನಾವು ಮಾತನಾಡಿದಾಗ ಇವರೇ ಹೇಳಿದ್ದಾರೆ. ಖಾಸಗಿಯಾಗಿ ಮಾತನಾಡುವಾಗ ನಮ್ಮ ಕ್ಷೇತ್ರದಲ್ಲಿ

ಕೆಲಸ ಮಾಡುವುದಕ್ಕೆ ಹಣ ಇಲ್ಲ ಎಂದು ಹೇಳಿದ್ದಾರೆ. ಆದರೆ ಅಸೆಂಬ್ಲಿಯಲ್ಲಿ ಕುಳಿತಾಗ ಮಾತ್ರ ಆ ರೀತಿ ಹೇಳುವುದಿಲ್ಲ. ನಾವು ಫ್ರಾಂಕಾಗಿ ಇರೋಣ. ಎಸ್ಟಿಮೇಟ್ ಕಮಿಟಿಯಲ್ಲಿ ಕುಳಿತಾಗ ನಾವು ಇದರ ಬಗ್ಗೆ ಮಾತನಾಡಲಿಲ್ಲವೇ ? ಈ ಸರ್ಕಾರದ ಬಗ್ಗೆ ಜೀವಿಜಯ ಅವರು ಕೂಡ ಹೇಳಿದ್ದಾರೆ. ೧೯೮೫ ರವರೆಗೆ ನಮ್ಮ ಸರ್ಕಾರ ಚೆನ್ನಾಗಿತ್ತು, ೧೯೮೫ರ ನಂತರ ಕೆಟ್ಟುಹೋಗಿದೆ ಎಂದು ಹೇಳಿದ್ದುದು ಪೇಪರ್‌ನಲ್ಲಿ ಬಂದಿದ್ದನ್ನು ನಾನು ಓದಿದ್ದೇನೆ. ಅವರೇ ಒಪ್ಪಿದ್ದಾರೆ. ಈ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದ ಪ್ರಗತಿ ಎಷ್ಟರಮಟ್ಟಿಗೆ ಮುಟ್ಟಿದೆ ಎಂಬ ಬಗ್ಗೆ ಒಂದೊಂದಾಗಿ ನೋಡೋಣ. ಎಜುಕೇಷನ್ ರಂಗದಲ್ಲಿ ಇವರು ಬಂದನಂತರ ಮೆಡಿಕಲ್ ಕಾಲೇಜುಗಳನ್ನು ಬಹಳಷ್ಟು ಧಾರಾಳವಾಗಿ ಕೊಟ್ಟಿದ್ದಾರೆ. ಅದೂ ಯಾವ ರೀತಿಯಲ್ಲಿ ? ಒಂದೊಂದು ವರ್ಗಕ್ಕಲ್ಲ. ಒಂದೊಂದು ಜಾತಿಯ ಹೆಸರಿನ ಮೇಲೆ ಕೊಟ್ಟಿದ್ದಾರೆ. ಮೈನಾರಿಟಿ ಕಮ್ಯುನಿಟಿ ಹೆಸರಿನಲ್ಲಿ ಕೊಟ್ಟಿದ್ದಾರೆ. ಮಾನ್ಯ ಜಾಲಪ್ಪನವರಿಗೆ ಸಂತೋಷ ಮಾಡುವುದಕ್ಕೆ ಅವರಿಗೆ ಒಂದು ಮೆಡಿಕಲ್ ಕಾಲೇಜು, ದೇವರಾಜ ಅರಸ್ ಮೆಡಿಕಲ್ ಕಾಲೇಜು, ಅಂಬೇಡ್ಕರ್ ಮೆಡಿಕಲ ಕಾಲೇಜು, ಹೀಗೆ ಎಲ್ಲಾ ಕಾಲೇಜುಗಳು ಮೂರು ವರ್ಷದ ಅವಧಿಯಲ್ಲಿ ಜಾತಿ ಆಧಾರದ ಮೇಲೆ ಆಗಿದೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳನ್ನು ಮಾಡುವಾಗ ನಾವೂ ಕೂಡ ಅದನ್ನು ಸಪೋರ್ಟ್ ಮಾಡಿದ್ದೆವು. ಕೆಳಗಿರುವ ರೈತ ಪಟ್ಟಣದಲ್ಲಿರುವಂಥ ನಾಗರೀಕ ಅವನ ಸಮಸ್ಯೆಗಳನ್ನು ಅಲ್ಲೇ ಬಗೆಹರಿಸಿಕೊಳ್ಳಬೇಕು, ರೂರಲ್ ಸಮಸ್ಯೆಗಳನ್ನು ಅಲ್ಲೇ ಬಗೆಹರಿಸಿಕೊಳ್ಳಬೇಕು, ಸರ್ಕಾರದ ಮಟ್ಟದಲ್ಲಿ ಆಗುವಂಥದ್ದನ್ನು ಜಿಲ್ಲೆಯಲ್ಲೇ ಬಗೆಹರಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳು ರಚನೆಯಾಯಿತು. ಚುನಾವಣೆಗಳು ಆದವು ಅದಕ್ಕೆ. ಯಾವರೀತಿ ಚುನಾವಣೆಗಳಾದವು ಎಂಬ ಬಗ್ಗೆ ಅನೇಕಸಾರಿ ನಾವು ಚರ್ಚೆ ಮಾಡಿದ್ದೇವೆ ಒಂದು ವರ್ಷ ಆಯಿತು ಜಿಲ್ಲಾ ಪರಿಷತ್ತು ಆಗಿ. ೧೯೮೭ ರಲ್ಲಿ ಮಾನ್ಯ ನಜೀರ್ ಸಾಹೇಬರು ಹೇಳಿದ್ದರು. ಪ್ರತಿಯೊಂದು ಜಿಲ್ಲೆಗೂ ಸುಮಾರು ೩೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆ, ಮಂಡಲ ಪಂಚಾಯಿತಿಗಳಿಗೆ ೧೦–೧೫ ಲಕ್ಷ ರೂಪಾಯಿ ಕೊಡುತ್ತೇವೆ. ಜನಸಂಖ್ಯೆ ಆಧಾರದಮೇಲೆ ಪ್ರತಿಯೊಂದು ಕಡೆ ಗ್ರ್ಯಾಂಟ್ ರೂಪದಲ್ಲಿ ಅಮೌಂಟ್ ಕೊಡುತ್ತೇವೆ ಎಂದು ಒಪ್ಪಿದ್ದರು ನಮ್ಮ ಶಹಬಾದ್ ಮತ ಕ್ಷೇತ್ರದಲ್ಲಿ ೬೦ ಸಾವಿರ ಜನಸಂಖ್ಯೆ ಇದ್ದು ಅಲ್ಲಿ ೧೬ ಮಂಡಲ ಪಂಚಾಯಿತಿಗಳು ಬರುತ್ತವೆ. ಚಿತ್ತಾಪುರ ತಾಲ್ಲೂಕಿನಲ್ಲಿ ೬–೮ ಪಂಚಾಯಿತಿಗಳು ಬರುತ್ತವೆ. ನಮ್ಮ ಕ್ಷೇತ್ರದಲ್ಲಿ ವಾಡಿ. ಹೊನಗುಂಟ ಮಂಡಲ ಪಂಚಾಯಿತಿಗಳಿಗೆ ನಾವೂ ಕೂಡ ಹೋಗುತ್ತೇವೆ ಈ ಮಂಡಲ ಪಂಚಾಯಿತಿಗಳಲ್ಲಿ ಯಾವುದೇ ಒಂದು ಸರಿಯಾದ ವ್ಯವಸ್ಥೆ ಇಲ್ಲ. ಮನೆಗಳ ವಿತರಣೆ ಮಾಡುವುದಕ್ಕೆ ಮಂಡಲ ಪಂಚಾಯಿತಿಗಳಿಗೆ ಅವಕಾಶ ಕೊಟ್ಟಿದೆ. ಸೈಟುಗಳನ್ನು ಕೊಡುವುದಕ್ಕೆ ಪರವಾನಗಿ ಕೊಟ್ಟಿದ್ದೇವೆ. ಭಾಗ್ಯಜ್ಯೋತಿ ಸ್ಕೀಮನ್ನು ಅವರ ಕೈಯಲ್ಲಿ ಕೊಟ್ಟಿದ್ದೇವೆ. ಹ್ಯಾಮ್ಲೆಟ್ಸ್ ಎಲೆಕ್ಟ್ರಿಫಿಕೇಷನ್ ಮಾಡುವುದನ್ನು ಅವರ ಕೈಯಲ್ಲಿ ಕೊಟ್ಟಿದ್ದೇವೆ. ಈ ಕೆಲಸಗಳನ್ನೆಲ್ಲಾ ನೋಡಿದಾಗ ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಒಂದು ವರ್ಷದಿಂದ ಯಾವುದೇ ಪ್ರಗತಿ ಕಾಣಲಿಲ್ಲ. ಮೊದಲು ನಾವು ಎಂ.ಎಲ್.ಎ.ಗಳು ಮಿನಿಸ್ಟರ್ ಹತ್ತಿರ ಮಾಸ್ಕ್ ಹೊಡೆದು ರೋಡಿಗೆ ಹಣ ಕೊಡಿ, ಬೇರೆಯದಕ್ಕೆ ಕೊಡಿ ಎಂದು ಕೇಳಿ ೫ ಲಕ್ಷ ರೂಪಾಯಿಗಳವರೆಗೆ ಸ್ಯಾಂಕ್ಷನ್ ಮಾಡಿಸಿಕೊಳ್ಳುತ್ತಿದ್ದೆವು. ಈಗ ಎಂ.ಎಲ್.ಎ. ಪರಿಸ್ಥಿತಿ ಏನಾಗಿದೆ ಎಂದರೆ ನಮ್ಮ ಹತ್ತಿರ ಜನರೇ ಬರುವುದಿಲ್ಲ. ಕರ್ನಾಟಕದಲ್ಲಿ ನಮ್ಮ ಪ್ರಜಾತಂತ್ರದಲ್ಲಿ ಮೈನ್ ಅಧಿಕಾರ ಮೂರು ಜನರಲ್ಲಿ ಮಾತ್ರ ಇದೆ. ರಾಜ್ಯ ಮಟ್ಟದಲ್ಲಿ ರಾಮಕೃಷ್ಣ ಹೆಗಡೆಯವರ ಹತ್ತಿರ, ಜಿಲ್ಲಾ ಮಟ್ಟದಲ್ಲಿ ಜೆಡ್.ಪಿ. ಛೇರ್ಮನ್ ಹತ್ತಿರ ಮತ್ತು ಮಂಡಲ ಪಂಚಾಯಿತಿ ಮಟ್ಟದಲ್ಲಿ ಮಂಡಲ ಪಂಚಾಯಿತಿ ಪ್ರಧಾನರ ಹತ್ತಿರ ಅಧಿಕಾರ ಇದೆ ಈ [illegible] [illegible] ಎಂ.ಎಲ್.ಎ.ಗಳು ಜೆಡ್.ಪಿ. ಸದಸ್ಯರು ಯಾವ ಲೆಕ್ಕಕ್ಕೂ ಇಲ್ಲ. ಜೆಡ್.ಪಿ ಇಂಪ್ಲಿಮೆಂಟ್ ಆಗುವುದಕ್ಕಿಂತ ಮುಂಚೆ ದಿನಾಗಲೂ ನಮ್ಮ ಮನೆ ಹತ್ತಿರ ೫೦–೬೦ ಜನ ಬಂದು ನಿಂತುಕೊಳ್ಳುತ್ತಿದ್ದರು. ನಮ್ಮ ಊರಿಗೆ ಆ ಕೆಲಸ ಮಾಡಿಸಿ ಈ ಕೆಲಸ ಮಾಡಿಸಿ ಎಂದು ಕೇಳುತ್ತಿದ್ದರು. ಈಗ ಈ ಮನುಷ್ಯನ ಹತ್ತಿರ ಏನೂ ಅಧಿಕಾರ ಇಲ್ಲ ಎಂದು ಯಾರೂ ಬರುವುದಿಲ್ಲ. ಅಧಿಕಾರಿಗಳ ಹತ್ತಿರ ಹೋದರೆ ನೀವು ಲೆಜಿಸ್ಲೇಷನ್ ಕೆಲಸ ಮಾಡಿರಿ, ನಮ್ಮ ಅಫೇರ್ಸ್‌ನಲ್ಲಿ ಇಂಟರ್‌ಫಿಯರ್ ಆಗಬೇಡಿ ಎಂದು ಹೇಳುತ್ತಾರೆ. ಟೀಚರ್ಸ್ ಅಪಾಯಿಂಟ್‌ಮೆಂಟ್ ಜಿಲ್ಲಾ ಪರಿಷತ್ತಿಗೆ ಇರಬೇಕು, ಒಬ್ಬ ಡಾಕ್ಟರ್ ಬೇಕು ಅದು ಜಿಲ್ಲಾ ಪರಿಷತ್, ಈಗ ಒಬ್ಬ ಸದಸ್ಯರು ಮಾತನಾಡುತ್ತಾ ಬಹಳ ಒಳ್ಳೆಯ ಸಲಹೆ ಕೊಟ್ಟಿದ್ದಾರೆ ಯಾವ ಜನ ಜಿಲ್ಲಾ ಪರಿಷತ್ತಿಗೆ ಓಟು ಕೊಡಲಿಲ. ಅಂತಹ ಕಡೆ ಏನೂ ಕೆಲಸ ಇಲ್ಲ. ಶಹಬಾದ್ ನಗರದಲ್ಲಿ ೬೦ ಸಾವಿರ ಜನಸಂಖ್ಯೆಯಿದೆ. ಅಲ್ಲೊಂದು ಆಸ್ಪತ್ರೆ ಕಟ್ಟಲಿಕ್ಕೆ ಮಾನ್ಯ

ಮುಖ್ಯಮಂತ್ರಿಗಳು ೧೯೮೪ರಲ್ಲಿ ಫೌಂಡೇಶನ್ ಹಾಕಿ ಬಂದರು. ಆ ಆಸ್ಪತ್ರೆ ಕಟ್ಟಲಿಕ್ಕೆ ಜಿಲ್ಲಾ ಪರಿಷತ್‌ನವರು ಬಡ್ಜೆಟ್ ಕೊಡಬೇಕು. ಅದರ ಅಂದಾಜು ವೆಚ್ಚ ೮೮ ಲಕ್ಷ. ಓವರ್ ಹೆಡ್ ಬ್ರಿಡ್ಜ್ ಕೆಲಸ ಮಾಡುವ ಅಧಿಕಾರ ಮೊದಲು ಲೋಕೋಪಯೋಗಿ ಇಲಾಖೆಗೆ ಇತ್ತು, ಈಗ ಇದು ಜಿಲ್ಲಾ ಪರಿಷತ್‌ಗೆ ಹೋಗಬೇಕೆಂದು ಕೊಟ್ಟರು, ರಸ್ತೆ ಕೆಲಸಗಳನ್ನು ಜಿಲ್ಲಾ ಪರಿಷತ್‌ಗೆ ಕೊಟ್ಟರು. ಈ ಪ್ರಕಾರ ಅನೇಕ ಹೈಸ್ಕೂಲ್‌ಗಳು ಜಿಲ್ಲಾ ಪರಿಷತ್‌ಗೆ ಹೋದವು. ಅಲ್ಲಿಯ ಜನ ಓಟು ಹಾಕಲಿಲ್ಲವೆಂದು ಈ ತರಹ ಮಾಡಲಾಗುತ್ತಿದೆಯೆ ? ನಮ್ಮ ಇಂಟರೆಸ್ಟ್ ಏನೆಂದರೆ ಆಸ್ಪತ್ರೆ ಆಗಬೇಕು, ಓವರ್‌ಹೆಡ್ ಬ್ರಿಡ್ಜ್ ಆಗಬೇಕು. ಶಾಲೆಗಳನ್ನು ಕೊಡುತ್ತಿದ್ದೀರಿ, ಆದರೆ ಅಲ್ಲಿ ಟೀಚರ್ಸ್‌ಗಳು ಇಲ್ಲ. ಟೀಚರ್ಸ್‌ಗಳನ್ನು ಫಿಲಪ್ ಮಾಡಬೇಕೆಂದು ಜಿಲ್ಲಾ ಪರಿಷತ್‌ನ ಅಧ್ಯಕ್ಷರು ಮತ್ತು ಆ ಭಾಗದ ಜಿಲ್ಲಾ ಪರಿಷತ್‌ನ ಸದಸ್ಯರನ್ನು ಕೇಳಿದಾಗ I am not representing them, it is none of my business to provide funds. this is what they say. ನಾವು ಎಂ.ಎಲ್.ಎ.ಗಳು ಬಡ್ಜೆಟ್ ಕೊಡಿ ಎಂದರೆ ಅದು ಇಲ್ಲ. ಈ ಲಕೂನ ಏನಿದೆ ಅದನ್ನು ಮಾನ್ಯ ಬೊಮ್ಮಾಯಿಯವರು ಸರಿಪಡಿಸುತ್ತೇನೆಂದು ಹೇಳಿದ್ದಾರೆ. ಅದನ್ನು ದಯಮಾಡಿ ಸರಿಪಡಿಸಬೇಕು.

ಇನ್ನು ಹೈಸ್ಕೂಲ್‌ಗಳ ಬಗ್ಗೆ ಹೇಳುವುದಾದರೆ ಶಿಕ್ಷಣ ರಂಗದಲ್ಲಿ ಬಹಳಷ್ಟು ಪ್ರಗತಿಯನ್ನು ಸಾಧಿಸಿದ್ದೇವೆಂದು ನೀವು ಹೇಳಿದರೆ, ಪ್ರೈವೇಟ್ ಕಾಲೇಜುಗಳು ನಿಮ್ಮ ಪಿರಿಯಡ್‌ನಲ್ಲಿ ಆದಷ್ಟು ೩೦ ವರ್ಷಗಳ ಕಾಲ ಆಡಳಿತದಲ್ಲಿದ್ದ ಕಾಂಗ್ರೆಸ್‌ನವರ ಪಿರಿಯಡ್‌ನಲ್ಲಿ ಆಗಲಿಲ್ಲ. ಇಂಜಿನಿಯರಿಂಗ್ ಕಾಲೇಜು ಯಾವುದೇ ಕಾಲೇಜು ತೆಗೆದುಕೊಳ್ಳಿ ನಿಮ್ಮ ಅಧಿಕಾರಾವಧಿಯಲ್ಲಿ ಪ್ರೈವೇಟ್ ಕಾಲೇಜುಗಳು ಜಾಸ್ತಿಯಾಗಿವೆ. ಇಂಜಿನಿಯರ್ ಕಾಲೇಜುಗಳ ಬಗ್ಗೆ ಮಾನ್ಯ ಪಂಪಾಪತಿಯವರ ಪ್ರಶ್ನೆಗೆ ಉತ್ತರವಾಗಿ ಸರ್ಕಾರೀ ಕಾಲೇಜುಗಳು ಆರು ಇದ್ದರೆ ೧೫-೨೦ ಪ್ರೈವೇಟ್ ಕಾಲೇಜುಗಳಿವೆ. ಎಲ್ಲಿ ಹೋದರೂ ಪ್ರೈವೇಟ್ ಸಂಸ್ಥೆಗಳವರಿಗೆ ಬಹಳ ಮಹತ್ವ ಕೊಟ್ಟಿದ್ದೀರಿ. ಸೀಟಿಂಗ್ ಪ್ರಾಬ್ಲಮ್ ಬಂದಾಗ ಅನೇಕ ಸಲ ಅಡ್ಜಸ್ಟ್ ಮಾಡಿದ್ದೀರಿ. ಅನೇಕ ಸಲ ಡೊನೇಷನ್ ತೆಗೆದುಹಾಕುತ್ತೇವೆಂದು ಹೇಳಿದ್ದೀರಿ. ಡೊನೇಷನ್ ತೆಗೆದರೆ ೨೦೦ ಕೋಟಿ ರೂಪಾಯಿಗಳು ಸರ್ಕಾರಕ್ಕೆ ಖರ್ಚಾಗುತ್ತದೆಂದು ಹೇಳುತ್ತೀರಿ. ಪ್ರೈವೇಟ್ ಕಾಲೇಜುಗಳನ್ನು ಸರ್ಕಾರ ತೆಗೆದುಕೊಂಡರೆ ಅಲ್ಲಿಯ ಎಸ್ಟಾಬ್ಲಿಶ್‌ಮೆಂಟ್ ಚಾರ್ಜಸ್, ಟೀಚರ್ಸ್ ಸ್ಯಾಲರಿ ಇವುಗಳಿಗೆಲ್ಲ ೨೦೦ ಕೋಟಿ ರೂಪಾಯಿ ಬೇಕು ಅದಕ್ಕಾಗಿ ಹಂತ ಹಂತವಾಗಿ ಇದನ್ನು ತೆಗೆಯುತ್ತೇವೆಂದು ಹೇಳಿ, ಐದು ವರ್ಷಗಳು ಮುಗಿದರೂ ಅದರ ಬಗ್ಗೆ ಇದುವರೆವಿಗೂ ಚಕಾರ ಶಬ್ದವಿಲ್ಲ ಅದರ ಬಗ್ಗೆ ತಾವುಗಳು ಈಗ ಮಾತನಾಡುತ್ತಿಲ್ಲ. ಡೊನೇಷನ್ ಹಾವಳಿ ಜಾಸ್ತಿಯಾಗಿ ಹೋಗಿದೆ. ಈ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಡೊನೇಷನ್ ಪದ್ಧತಿಯನ್ನು ರದ್ದು ಮಾಡಿದ್ದೇವೆಂದು ಹೇಳಿಲ್ಲ. ಚುನಾವಣೆಗಳನ್ನು ಮಾಡಿದ್ದೇವೆಂದು ಹೇಳಿದ್ದಾರೆ ಯಾವುದೇ ಒಂದು ಸರ್ಕಾರದ ಕರ್ತವ್ಯ ಅಂದರೆ ಸರ್ಕಾರ ಬದಲಿಯಾದಾಗ ರಾಜ್ಯದ ಜನತೆಯ ಸಮಸ್ಯೆಯನ್ನು ಯಾವರೀತಿ ಬಗೆಹರಿಸಬೇಕು ಎಂಬುದನ್ನು ತಿಳಿದುಕೊಳ್ಳಬೇಕು. ಅಲ್ಲಿಯ ಜನಸಾಮಾನ್ಯರ ಪರಿಸ್ಥಿತಿಯನ್ನು ಅವನಲ್ಲಿನ ಬದಲಾವಣೆಯನ್ನು ನೋಡಿದಾಗ ಅರ್ಥವಾಗುತ್ತದೆ. ನಾನು ಚುನಾವಣೆಗಳನ್ನು ಮಾಡಿ ಅಧಿಕಾರ ವಿಕೇಂದ್ರೀಕರಣ ಮಾಡಿದ್ದೇನೆ ನಾನು ಕೌನ್ಸಿಲ್‌ನ ಸೀಟುಗಳನ್ನು ೬೩ ಇದ್ದದನ್ನು ೭೫ಕ್ಕೆ ಏರಿಸಿದ್ದೇನೆ. ನಾನು ಸಾರ್ಕ್ ಸಮ್ಮೇಳನವನ್ನು ಬಹಳ ವಿಜೃಂಭಣೆಯಿಂದ ನಮ್ಮ ರಾಜ್ಯದಲ್ಲಿ ಮಾಡಿದ್ದೇನೆ. ಜನತಾ ಸರ್ಕಾರದ ಐದು ವರ್ಷಗಳ ಜನೋತ್ಸವ ಕಾರ್ಯಕ್ರಮವನ್ನು ಜನತಾ ಪಕ್ಷದ ಲಕ್ಷಾಂತರ ಜನರನ್ನು ಸೇರಿಸಿ ನಾನ್ ಕಾಂಗ್ರೆಸ್ ಮುಖ್ಯಮಂತ್ರಿಗಳನ್ನು ಕರೆಯಿಸಿ ಮಾಡಿದ್ದೇನೆಂದು ಬಹಳ ರೀತಿಯಿಂದ ಪ್ರವರ್ಧನೆ ಮಾಡಿದ್ದಾರೆ. ನಿಮಗೆ ತಿಳಿಯುವುದಿಲ್ಲ. ತಮ್ಮ ಬಗ್ಗೆ ಜನಸಾಮಾನ್ಯರಿಗೆ ೧೯೮೩ರಲ್ಲಿ ಇದ್ದಂತಹ ಅಭಿಮಾನ ಈಗಿಲ್ಲ. ರೈತರು ಹೇಳುತ್ತಿದ್ದಾರೆ, ಸಾಮಾನ್ಯ ಜನರು ಹೇಳುತ್ತಿದ್ದಾರೆ ಕಾರ್ಮಿಕರ ಹೇಳುತ್ತಿದ್ದಾರೆ ನಾನು ಹೇಳುತ್ತಿಲ್ಲ ಮೊದಲು ಮಾನ್ಯ ಬೈರೇಗೌಡರನ್ನು ರೈತರು ಪ್ರೀತಿ ಮಾಡುತ್ತಿದ್ದರು. ನಾವು ಬಸ್ಸಿನಲ್ಲಿ ಹೋಗುತ್ತೇವೆ ನಮಗೆ ಎಲ್ಲಾ ಗೊತ್ತಾಗುತ್ತದೆ. ಜನ ನಿಮ್ಮ ಬಗ್ಗೆ ಏನು ಮಾತನಾಡಿಕೊಳ್ಳುತ್ತಾರೆಂಬುದನ್ನು ನೀವು ನಮ್ಮನ್ನು ಕೇಳಬೇಕು.

ಮಾನ್ಯ ಬೈರೇಗೌಡರು ಬಸ್‌ನಲ್ಲಿ ಓಡಾಡುವುದಿಲ್ಲ. ಅವರು ಈಗ ಕಾರಿನಲ್ಲಿ ಓಡಾಡುತ್ತಾರೆ. ಇವರಿಗೆ ಆ ಜನರ ಮಾತುಗಳು ತಿಳಿಯುತ್ತಿಲ್ಲ, ಜನ ಮೊದಲು ಇವರ ಬಗ್ಗೆ ಅಭಿಮಾನ ಇಟ್ಟಿದ್ದರು.

ಶ್ರೀ ಸಿ. ಬೈರೇಗೌಡ.—ನನ್ನ ಕ್ಷೇತ್ರಕ್ಕೆ ಈಗ ಹೋಗೋಣ ಬನ್ನಿ. ನಮ್ಮ ಮೇಲೆ ಅಭಿಮಾನ ಹೇಗಿಟ್ಟಿದ್ದಾರೆಂದು ತಾವೇ ನೋಡುವಿರಂತೆ.

ಶ್ರೀ ಕೆ. ಬಿ. ಶಾಣಪ್ಪ.—ನೀವು ನಿಮ್ಮ ಕ್ಷೇತ್ರಕ್ಕೆ ಬಸ್‌ನಲ್ಲಿ ಹೋಗುವುದಿಲ್ಲ.

ಶ್ರೀ ಸಿ. ಬೈರೇಗೌಡ.—ನಾನು ಕಾರ್‌ನಲ್ಲಿ ಹೋಗುವುದು ನಿಜ. ಆದರೆ ನನ್ನ ಕಾರಿನಲ್ಲಿ ಬಸ್‌ಗಿಂತ ಹೆಚ್ಚು ಜನರು ಇರುತ್ತಾರೆ.

ಶ್ರೀ ಕೆ. ಬಿ. ಶಾಣಪ್ಪ.—ತಮ್ಮ ಪ್ರಗತಿಯ ಚಿಂತನೆಯ ಬಗ್ಗೆ ನಮ್ಮ ರಾಜ್ಯದ ಜನತೆ ಹಿಂದೆ ಏನು ಮಾಡುತ್ತಿದ್ದರೋ ಅದು ಕಡಿಮೆಯಾಗಿದೆ. ಜಿಲ್ಲಾ ಪರಿಷತ್ತುಗಳಲ್ಲಿ ಹೆಚ್ಚು ಸೀಟನ್ನು ಗಳಿಸಿದೆವು ಎನ್ನುವ ಅಹಂದಿಂದ ತಾವು ಕುಳಿತರೆ ಆಗುವುದಿಲ್ಲ. ಈ ಭೂಮಿಯಲ್ಲಿ ಹಿಟ್ಲರ್ ಅಂತಹವನ ಗತಿ ಏನಾಯಿತು ? ನಿಮ್ಮಂತಹವರು ತಪ್ಪು ಮಾಡಿದರೆ ನಿಮ್ಮ ಸರ್ಕಾರ ಉಳಿಯುವುದಿಲ್ಲ. ಇವತ್ತು ಜಿಲ್ಲಾ ಪರಿಷತ್ತು ಹಾಗೂ ಮಂಡಲಗಳಲ್ಲಿನ ನಿಮ್ಮ ಪ್ರಾಬಲ್ಯ ಎಷ್ಟು ಕುಸಿದಿದೆ. ಹೆಗಡೆ ಸಾಹೇಬರು ಇರುವವರೆಗೆ ಏನು ತಪ್ಪು ಮಾಡಿದರೂ ಮುಚ್ಚಿಕೊಳ್ಳುತ್ತದೆಂದು ಎಷ್ಟು ಹೊಲಸಾದರು ಮುಚ್ಚಬಹುದೆಂದು ಕುಳಿತರೆ ಜನ ಸುಮ್ಮನಿರುವುದಿಲ್ಲ. ೨ ವರ್ಷದ ಮೇಲೆ ಜನ ಲೆಕ್ಕ ಪತ್ರ ಮಾಡುತ್ತಾರೆ. ಇವತ್ತು ಕಾರ್ಮಿಕರಲ್ಲಿ ಬಹಳ ಶಾಂತಿ ಇದೆ ಎಂದು ಹೇಳಿದ್ದೀರಿ. ಅಲಂಬಿಕ್ ಫ್ಯಾಕ್ಟರಿ, ಟೊಬ್ಯಾಕೋ ಕಂಪನಿಗಳ ಗತಿ ಏನಾಗಿದೆ ಸ್ವಾಮಿ. ನಿಮ್ಮ ಸರ್ಕಾರ ಬರುವುದಕ್ಕಿಂತ ಮುಂಚಿನಿಂದ ಮುಚ್ಚಿರುವ ಫ್ಯಾಕ್ಟರಿಗಳನ್ನು ತಾವು ತೆರೆಸಲು ಸಾಧ್ಯವಾಗಿಲ್ಲ. ಈ ಬಗ್ಗೆ ಮಾತನಾಡಲು ತಮ್ಮಲ್ಲಿ ಮಾರಲ್ ರೈಟ್ಸ್ ಇದೆಯೇ? ತಾವು ಕಾರ್ಮಿಕರ ಸಮಸ್ಯೆ ಬಗ್ಗೆ ಹರಿಸಿದ್ದೀರಾ ? ಇವತ್ತು ಟ್ಯಾನಿಂಗ್ ಫ್ಯಾಕ್ಟರಿ ಬಗ್ಗೆ ಏನು ಮಾಡಿದ್ದೀರಿ ?

ಶ್ರೀ ಆರ್. ಎಲ್. ಜಾಲಪ್ಪ.—ಒಂದೊಂದು ತಿಂಗಳು ಒಂದೊಂದು ಫ್ಯಾಕ್ಟರಿಗಳನ್ನು ಮುಚ್ಚಿಕೊಂಡು ಬರುತ್ತಿದ್ದೀರಿ. ಆಮೇಲೆ ನಮಗೆ ಅದನ್ನು ತೆಗೆಯಿರಿ ಎಂದು ಹೇಳುತ್ತೀರಿ.

ಶ್ರೀ ಕೆ. ಬಿ. ಶಾಣಪ್ಪ.—ಅವುಗಳನ್ನು ತೆರೆಯಲು ನಾವು ಸಹಕಾರವನ್ನು ಕೊಡುತ್ತಾ ಬಂದಿದ್ದೇವಲ್ಲ ಸ್ವಾಮಿ. ಮಾನ್ಯ ಜಾಲಪ್ಪನವರು ಹೋಮ್ ಮಿನಿಸ್ಟರ್ ಆಗಿದ್ದಾರೆ ಅವರಿಂದ ಹೊಡೆತ ತಿನ್ನಬೇಡಿ ಎಂದು ನಾವು ಅವರಿಗೆ ಹೇಳುತ್ತಾ ಬಂದಿದ್ದೇವೆ. ಕಾರ್ಮಿಕ ನಾಯಕ ಪಂಪಾಪತಿಯವರನ್ನು ತಾವು ಜೈಲಿಗೆ ಹಾಕಿದ್ದೀರಿ. ಅವರು ಜೈಲಿಗೆ ಏಕೆ ಹೋದರು ಎಂದು ಚಿಂತನೆ ಮಾಡಿದ್ದೀರಾ ? ಪ್ರೊ ಲಕ್ಷ್ಮೀಸಾಗರ್ ಅವರೇ ಈ ಬಗ್ಗೆ ತಾವು ಕೇಳಿದಿರಾ ? ಅವರು ಈ ಸಭೆಗೆ ಬರುವುದಕ್ಕೆ ತಾವು ಬಿಡುತ್ತಾ ಇಲ್ಲ. ಈ ಸದನದ ಸದಸ್ಯ, ಕಾರ್ಮಿಕ ನಾಯಕ ಪಂಪಾಪತಿಯವರನ್ನು ದಾವಣಗೆರೆಯಲ್ಲಿ ಜೈಲಿಗೆ ಹಾಕಿದ್ದೀರಿ. ಸಿದ್ದೇಶ್ವರ ಮಿಲ್, ಗಣೇಶ ಟೆಕ್ಸ್‌ಟೈಲ್ಸ್ ಸಮಸ್ಯೆ ಏನಾಯಿತು ದಾವಣಗೆರೆ ಚಿಗಟೇರಿ ಮಿಲ್ ಬಗ್ಗೆ ಎಲ್ಲಾ ಮಂತ್ರಿಗಳು ಶಾಮೀಲು ಆದರೂ ಏನೂ ಆಗಲಿಲ್ಲ. ಪಾಪ ಕಾರ್ಮಿಕ ಮಂತ್ರಿಗಳಿಗೆ ಕಾರ್ಮಿಕರಲ್ಲಿ ಸ್ವಲ್ಪ ಅನುಕಂಪ ಇದೆ. ಇವತ್ತಿನ ವ್ಯವಸ್ಥೆಯಲ್ಲಿ ಕಾರ್ಮಿಕನ ಬಗ್ಗೆ ಚಿಂತನೆ ಮಾಡುವ ಒಬ್ಬ ನಾಯಕ ಇರುವುದಕ್ಕಾಗುವುದಿಲ್ಲ. ಇಲ್ಲಿ ಎಲ್ಲಾ ಬರೀ ತಿಮಿಂಗಲಗಳೇ. ಮಾನ್ಯ ಜೆ. ಹೆಚ್. ಪಟೇಲರು ಮೈಸೂರು ಸ್ಯಾಂಡಲ್ ಫ್ಯಾಕ್ಟರಿಯ ಬಗ್ಗೆ ಮಾತನಾಡುತ್ತಾ ಮ್ಯೂಸಿಯಂ ಶೋಪೀಸ್ ಬಗ್ಗೆ ಒಂದು ಉದಾಹರಣೆ ಕೊಟ್ಟರು. ಆ ರೀತಿ ಈ ಕಾರ್ಮಿಕ ಮಂತ್ರಿಯವರು ಒಂದು ಶೋಪೀಸ್ ರೀತಿ ಇದ್ದಾರೆ. ಅವರ ಪರಿಸ್ಥಿತಿ ನೆಟ್ಟಗಿಲ್ಲ. ಮಾನ್ಯ ಹೆಗಡೆಯವರು ಅವರನ್ನು ಸುಮ್ಮನೆ ಶೋ ಪೀಸ್ ರೀತಿ ಇಟ್ಟಿದ್ದಾರೆ. ಆದಷ್ಟು ಮಟ್ಟಿಗೆ ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಬಹಳ ಮಟ್ಟಿಗೆ ಹೇಳುತ್ತಾರೆ. ಅದು ಆಗುವುದಿಲ್ಲ. ಟೆಕ್ಸ್‌ಟೈಲ್ಸ್‌ನ ಬಗ್ಗೆ ಬಹಳ ಮಂದಿಯನ್ನು ಕರಿಯಿಸಿದರು, ಮಾನ್ಯ ಬೊಮ್ಮಾಯಿಯವರು ಇಂಟರೆಸ್ಟ್ ತೋರಿಸಿದರು. ಮಾನ್ಯ ಜೆ. ಹೆಚ್. ಪಟೇಲ್‌ರವರು ಅಡ್ಡ ಬಂದರು, ಸಮಸ್ಯೆ ಬಗೆಹರಿಯಲಿಲ್ಲ. ಸಾವಿರಾರು ಜನ ಕಾರ್ಮಿಕರು ಇವತ್ತು ಹೊಟ್ಟೆಗೆ ಹಿಟ್ಟಿಲ್ಲದೆ ಬೇರೆ ಬೇರೆ ಕಡೆ ಹೋಗುವ ಸ್ಥಿತಿಯಾಗಿದೆ. ಮಾನ್ಯ ರಾಜ್ಯಪಾಲರು ನನ್ನ ಸರ್ಕಾರ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಆಗಲಿಲ್ಲವೆಂದು ಹೇಳಬೇಕಾಗಿತ್ತು. ಏತಕ್ಕೆ ಹೇಳಲಿಲ್ಲ ? ನಿನ್ನೆ ಒಂದು ರಿಪೋರ್ಟ್ ಬಂದಿದೆ, ಶಹಬಾದ್ ನನ್ನ ಮತದಾರ ಕ್ಷೇತ್ರದ ವಾಡಿಯಲ್ಲಿ ಮೈಸೂರು ಸಿಮೆಂಟ್ ಫ್ಯಾಕ್ಟರಿಯವರು, ಅಮ್ಮಸಂದ್ರ ಸಿಮೆಂಟ್ ಫ್ಯಾಕ್ಟರಿಯವರು ಒಂದು ಥರ್ಮಲ್‌ಪ್ಲಾಂಟ್ ಹಾಕಿದ್ದಾರೆ. ಅದು ೧೦ ಮೆಗಾವಾಟ್ ಕೆಪಾಸಿಟಿಯದು ೧೯೭೭ ರಿಂದ ಥರ್ಮಲ್‌ಪ್ಲಾಂಟ್ ಇದೆ. ಅದು ದಿನಾ ೧೦ ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡಬೇಕು. ಇಲ್ಲಿಯವರೆಗೆ ಅದು ಉತ್ಪಾದನೆ ಮಾಡಿದ್ದುದು, ೧೯೭೭ ರಿಂದ ೧೯೮೮ ರ ವರೆಗೆ ೩೪ ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡಿದೆ. ಇದಕ್ಕೆ ಕಾರ್ಮಿಕವರ್ಗದವರು ಜವಾಬ್ದಾರಿಯಲ್ಲ, ಅಲ್ಲಿದ್ದಂತಹ ಮಾಲೀಕವರ್ಗದವರು ಜವಾಬ್ದಾರರು ಅಲ್ಲ, ಮ್ಯಾನೇಜ್‌ಮೆಂಟ್‌ರವರು ಬಿರ್ಲಾರವರು ಇದನ್ನು ಬಂದ್

ಮಾಡಬೇಕು, ಕ್ಲೋಸರ್ ಮಾಡಬೇಕೆಂದು ಹೇಳಿದರೆ ಕೆಇಬಿಯವರ ಜೊತೆ ಮಾತನಾಡಿ ಒಂದು ಪರಿಹಾರ ಕಂಡುಕೊಳ್ಳಬೇಕು. ಪ್ರಾಫಿಟಬಲ್ ಇಂಡಸ್ಟ್ರಿ ಮಾಡುತ್ತೇವೆಂದು ನೋಟೀಸ್ ಕೊಟ್ಟಿದ್ದು, ಕೆಲವು ಮಿಷಿನರಿಗಳನ್ನು ಅಲ್ಲಿಂದ ಶಿಫ್ಟ್ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಪವರ್ ಸ್ಕೇರ್‌ಸಿಟಿ ಇದೆಯೆಂದು ಬೇರೆ ಬೇರೆ ರಾಜ್ಯಗಳಿಂದ ಪವರ್ ಕೇಳುತ್ತಿದ್ದೇವೆ. Number of industries have been shut down because of shortage of power, ಪವರ್ ಮಂತ್ರಿಗಳು ಬಂದರೆ ಏನಾಯಿತು, ಅವರು ಬರೀ ಮಂತ್ರಿಗಳಿದ್ದಾರೆ ಅವರಿಗೆ ಪವರ್ ಇಲ್ಲ.

ಶ್ರೀ ಲಕ್ಷ್ಮೀನರಸಿಂಹಯ್ಯ.— ಪವರ್ ಅನ್ನು ಸ್ಟೋರ್ ಮಾಡುವುದಕ್ಕಾಗುವುದಿಲ್ಲ. ಅಲ್ಲಿ ಬಂದದ್ದನ್ನು ಅಲ್ಲಿಯೇ ಉಪಯೋಗಿಸಬೇಕು.

ಶ್ರೀ ಕೆ. ಬಿ. ಶಾಣಪ್ಪ.— ಸ್ಟೋರ್ ಮಾಡುವ ಕೆಪಾಸಿಟಿ ಇದ್ದರೆ ಅದನ್ನು ಕಲಿಯಿರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಸ್ಟೋರ್ ಮಾಡುವ ಕೆಪಾಸಿಟಿ ಇದ್ದಿದ್ದರೆ ಅವರು ರಾಜ್ಯ ಮಂತ್ರಿಗಳಾಗಿ ಇರುತ್ತಿರಲಿಲ್ಲ, ಕ್ಯಾಬಿನೆಟ್ ಮಂತ್ರಿಗಳಾಗಿ ಇರುತ್ತಿದ್ದರು.

ಶ್ರೀ ಕೆ. ಬಿ. ಶಾಣಪ್ಪ.— ಅಮ್ಮಸಂದ್ರ ಸಿಮೆಂಟ್ ಫ್ಯಾಕ್ಟರಿಯವರು ವಾಡಿಯಲ್ಲಿ ೧೦ ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡತಕ್ಕ ಮೆಷಿನರಿಗಳನ್ನು ಹಾಕಿದ್ದಾರೆ ನೋಟೀಸ್ ಕೊಡದೆ ೧೫೦ ಜನ ಕಾರ್ಮಿಕರು ಇರತಕ್ಕ ಜಾಗದಲ್ಲಿ ಮೆಷಿನರಿಗಳನ್ನು ಶಿಫ್ಟ್ ಮಾಡುವ ಕಾಲಕ್ಕೆ ಜಿಲ್ಲಾಧಿಕಾರಿಗಳವರಿಗೆ ದೂರು ಕೊಟ್ಟಿದ್ದಾರೆ. ಇಲ್ಲಿಯು ೧೫೦ ಜನ ಎಬಿಎಲ್‌ನ ೨೫೦೦ ಜನ ಮೆಷಿನರಿಯನ್ನು ಶಿಫ್ಟ್ ಮಾಡಲಿಕ್ಕೆ ಬಿಟ್ಟುಕೊಡದೆ ಕಾರ್ಮಿಕ ಮಂತ್ರಿಗಳಿಗೆ ಅರ್ಜಿ ಕೊಟ್ಟಿದ್ದಾರೆ. ಕೆಇಬಿಯವರ ಸಮಸ್ಯೆಯಿದ್ದರೆ ತಮ್ಮೊಟ್ಟಿಗೆ ಮಾತನಾಡಿಯೆಂದು ಹೇಳಿದ್ದೇವೆ ರಾಜ್ಯಪಾಲರ ಭಾಷಣದಲ್ಲಿ ಎಷ್ಟು ಕೆಲಸ ಮಾಡಿದ್ದೇವೆಂದು ತೋರಿಸಿಕೊಡುವುದಕ್ಕೆ ನಿಮ್ಮಿಂದ ಆಗಿಲ್ಲ.

ಇನ್ನು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಬಗ್ಗೆ ಹೇಳುವುದಾದರೆ, ಪಿಎಲ್‌ಡಿ ಬ್ಯಾಂಕಿನಲ್ಲಿ ರೈತರಿಗೆ ಸಾಲ ಕೊಡುತ್ತಾರೆ. ಅನೇಕ ಸಲ ಕೋ ಆಪರೇಟೀವ್ ಸಾಲಗಳನ್ನು ಜೂನ್ ತಿಂಗಳೊಳಗ ಕಟ್ಟಿದರೆ ಬಡ್ಡಿ, ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಹೇಳುತ್ತಾರೆ. ೧೯೮೩ ರಲ್ಲಿ ಇದೇ ಪ್ರಕಾರ ಮಾಡಿದ್ದಾರೆ. ಮಾನ್ಯ ಬೊಮ್ಮಾಯಿಯವರು ಗಮನಿಸಬೇಕು, ಇದು ಸರ್ಕಾರದ ಗಮನಕ್ಕೆ ಬಂದಿಲ್ಲ. ಅನೇಕ ಕಡೆಗಳಲ್ಲಿ ಸುಮಾರು ೧೫–೨೦ ವರ್ಷಗಳ ಹಿಂದೆ ಪಿಎಲ್‌ಡಿ ಬ್ಯಾಂಕುಗಳಿಂದ ತೆಗೆದುಕೊಂಡ ಸಾಲವನ್ನು ರೈತರು ಸಕಾಲದಲ್ಲಿ ಮರುಪಾವತಿ ಮಾಡದಿದ್ದರೆ ಕಾನೂನು ಪ್ರಕಾರ ಜಿಲ್ಲಾಧಿಕಾರಿಯವರು ಆ ಜಮೀನನ್ನು ಸರ್ಕಾರದ ಹೆಸರಿನ ಮೇಲೆ ವರ್ಗಾವಣೆ ಮಾಡಿದ್ದಾರೆ. ಹಾಗೆ ವರ್ಗಾವಣೆ ಮಾಡಿದಂತಹ ಜಮೀನಿನ ಮೇಲೆ ಸರ್ಕಾರ ತನ್ನ ಅಧಿಕಾರವನ್ನು ಇಟ್ಟುಕೊಂಡಿದೆ.

೨-೦೦ ಪಿ. ಎಂ.

ಅಲ್ಲಿರುವಂಥ ರೈತರು ಯಾರೂ ಆಕ್ಷನ್‌ನಲ್ಲಿ ಭಾಗವಹಿಸುವುದು. ಅಂತಹ ಜಮೀನು ಸಾವಿರಾರು ಎಕರೆ ಸರ್ಕಾರದ ಹೆಸರಿನಲ್ಲಿದೆ ಹಾಗೆಯೇ ಅದು ಡಿ.ಸಿ. ಹೆಸರಿನಲ್ಲಿದೆ. ಇಂತಹ ಒಂದು ಜಮೀನನ್ನು ಒಂದುವೇಳೆ ರೈತ ಸರ್ಕಾರಕ್ಕೆ ತನ್ನ ಸಾಲವನ್ನು ಮರುಪಾವತಿ ಮಾಡುವುದಕ್ಕೆ ಸಾಧ್ಯವಾದ ಪರಿಸ್ಥಿತಿಯುಂಟಾಗಿ ಮುಂದೆ ಬಂದರೆ ತಾವು ಈ ಜಮೀನನ್ನು ಅವನ ಹೆಸರಿಗೆ ಪುನಃ ಕೊಡುವಂಥ ಕನ್‌ಸೇಷನ್ ಅನ್ನು ಕೊಡಬೇಕೆಂದು ನಾನು ಹೇಳುತ್ತೇನೆ. ಏಕೆಂದರೆ ಈಗಾಗಲೇ ಅವನ ಜಮೀನು ಬೀಳಾಗಿ ಬಿದ್ದಿದೆ. ಸರ್ಕಾರದಲ್ಲಿ ಅದನ್ನು ಊಳಲಿಕ್ಕೆ ಶಕ್ತಿ ಇಲ್ಲ. ರೈತರಿಗೆ ಅದನ್ನು ಕೊಡುವಂಥ ಪರಿಸ್ಥಿತಿ ಇಲ್ಲ. ಇಂತಹ ಜಮೀನುಗಳ ಬಗ್ಗೆ ತಾವು ಆದಷ್ಟು ಬೇಗ ಸರಿಯಾದ ಒಂದು ಯೋಜನೆಯನ್ನು ಹಾಕಿ ಪುನಃ ಅವರು ಪಡೆದಂಥ ಸಾಲ ವಾಪಸ್ಸು ಕೊಟ್ಟರೆ ಅವರ ಹೆಸರಿಗೇ ಜಮೀನನ್ನು ಮಾಡಿಕೊಡುವಂಥ ಭರವಸೆಯನ್ನು ತಾವು ಕೊಡಬೇಕು.

ಆಮೇಲೆ ಈ ಡ್ರೈಲ್ಯಾಂಡ್ ಡೆವಲಪ್‌ಮೆಂಟ್, ಕಾರ್ಪೊರೇಷನ್, ಬೋರ್ಡ್‌ಗಳು. ನಾವು ೧೯೮೫ರಲ್ಲಿ ಆರಿಸಿ ಬಂದಾಗ ಬಹಳ ಜನ ಮಾತನಾಡುತ್ತಿದ್ದರು. 'ಏನ್ರಿ ಮಿನಿಸ್ಟರ್ ಯಾರು ಆಗ್ತಾರೆ' ಏನು ವಿಷಯ ಎನ್ನುವ ಪರಿಸ್ಥಿತಿ ಇತ್ತು. ನಮ್ಮ ಡಿಸ್ಟ್ರಿಕ್ಟ್‌ನಲ್ಲಿ ಇವ ಆಗಬಹುದು ಅಥ ಆಗಬಹುದು ಮತ್ತು ಮಿನಿಸ್ಟರ್ ಖಾತೆಯ ಬಗ್ಗೆ ಎಲ್ಲರಿಗೂ ಕುತೂಹಲ. ಆಗ ಏನಾಯಿತು ? ಈ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಮಾಡಿದ್ದೇವೆ, ಕಾಡಾಗಳಿಗೆ ಚೇರ್ಮನ್‌ಗಳನ್ನು ಮಾಡಿದ್ದೇವೆ,

ಕಾರ್ಪೊರೇಷನ್ ಚೇರಮನ್‌ಗಳನ್ನು ಮಾಡಿದ್ದೇವೆ ಎಂದು ಪೇಪರ್‌ನಲ್ಲಿ ಬಂತು. ಆಗ ನನಗನ್ನಿಸುತ್ತದೆ ಶ್ರೀ ಉದಾಸಿಯವರದ್ದು ಎಂದು ಕಾಣಿಸುತ್ತದೆ, ಏನೋ ಮಾತನಾಡಿದ್ದರು. ಏನು ೧೯೮೫ ರಲ್ಲಿ ಎಲೆಕ್ಷನ್‌ನಲ್ಲಿ ಸೋತವರಿಗೆಲ್ಲ ತಾವು ಕಾರ್ಪೊರೇಷನ್ ಮತ್ತು ಡ್ರೈಲ್ಯಾಂಡ್ ಡೆವಲಪ್‌ಮೆಂಟ್‌ನಲ್ಲಿ ಅದರದ್ದು ಇದರದ್ದು ಎಂದು ಚೇರ್ಮನ್ ಮಾಡಿದ್ದೀರಿ, ನಾವು ಎಂ ಎಲ್. ಎ. ಆಗಿ ಉದ್ದು ಹರಿಯಲಿಕ್ಕೆ ಬಂದಿದ್ದೀವಿ ಏನು? ಎಂದರು ಏಕೆಂದರೆ ಸೋತವರು ಪಾರ್ಟಿಯಲ್ಲಿ ಕೆಲಸ ಮಾಡುವವರು ಅವರಿಗಂತೂ ಎನಕರೇಜ್‌ಮೆಂಟ್ ಕೊಡಬೇಕು. ನೀವು ಈಗಾಗಲೇ ಎಂ.ಎಲ್.ಎ.ಗಳಿದ್ದೀರಿ, ಡಿಸ್‌ಗ್ರಂಟಲ್ಡ್ ಎಲಿಮೆಂಟ್ಸ್ ಆಗಬಾರದು ಅವರು, ಅದಕ್ಕಾಗಿ ನಾವು ಇದೆಲ್ಲ ಮಾಡಿದ್ದೇವೆ ಅಂದರು. ಇಲ್ಲಿ ಏನು ಹೇಳ್ತೀರಿ ನಿಮ್ಮ ರಾಜ್ಯಪಾಲರ ಭಾಷಣದಲ್ಲಿ ? My Government. by creation of dry land development Board. CADA Etc,, ಅದಷ್ಟು ಮಟ್ಟಿಗೆ ಇರಿಗೇಷನ್ ಪೊಟೇನ್‌ಶಿಯೋಲಿಟಿಯನ್ನು ಹೆಚ್ಚಿಗೆ ಮಾಡುತ್ತದೆ ಸರ್ಕಾರ ಎಂದು ಹೇಳಿದ್ದೀರಿ. ನೀವು ಮಾಡಿದ್ದು ಈ ಇರಿಗೇಷನ್ ಪೊಟೇನ್‌ಶಿಯೊಲಿಟಿಯನ್ನು ಹೆಚ್ಚು ಮಾಡುವುದಕ್ಕೆ ಅಲ್ಲ. ಅಥವಾ ಇಲ್ಲಿ ರೈತ ಸರಿಯಾದಂಥ ಉತ್ಪಾದನೆ ಮಾಡಬೇಕು, ಧವಸಧಾನ್ಯಗಳನ್ನು ಬೆಳೆಸಬೇಕು ಎಂದು ಅಲ್ಲ. ಅವರನ್ನು ಯಾವ ಪ್ರಕಾರವಾಗಿ ನಿಮ್ಮ ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳಬೇಕು, ಅವರು ಡಿಸಿಡೆಂಟ್ಸ್ ಆಗಕೂಡದು. ಆ ಒಂದು ಭಾವನೆಯನ್ನು ಇಟ್ಟುಕೊಂಡು ಸೋತಂಥ ಪ್ರತಿಯೊಬ್ಬರನ್ನೂ ತಾವು ಈ ಬೋರ್ಡ್‌ಗಳ ಚೇರ್ಮನ್‌ಗಳನ್ನಾಗಿ ಮಾಡಿದ್ದೀರಿ. ಇದಕ್ಕೆ ನೀವು ರಾಜ್ಯಪಾಲರ ಭಾಷಣದಲ್ಲಿ ನನ್ನ ಸರ್ಕಾರ ಅದನ್ನು ಮಾಡಿದೆ ಎಂದರೆ ನನ್ನ ಮಟ್ಟಿಗೆ ನಾನಂತೂ ಇದನ್ನು ಒಪ್ಪುವುದಿಲ್ಲ. ಏಕೆ ಮಾಡಿದ್ದಾರೆ ಎಂದು ಅವರನ್ನು ಖುಷಿ ಮಾಡುವ ಸಲುವಾಗಿ ಮಾಡಿದ್ದಾರೆ.

ಇನ್ನು ೧೯೮೦–೮೧ರ ರಾಜ್ಯಪಾಲರ ಭಾಷಣದಲ್ಲಿ ಬರಗಾಲ ಇವರ ಬೆನ್ನು ಹತ್ತಿದೆ. ೧೯೮೩ ರಲ್ಲಿ ಕೂಡ ಬರಗಾಲ ಇವರ ಬೆನ್ನು ಹತ್ತಿತ್ತು ಇವರ ಭಾಷಣದಲ್ಲಿ ನೀವು ಇರುವ ತನಕ ಈ ರಾಜ್ಯದಲ್ಲಿ ಬರಗಾಲ ಇರುತ್ತದೆ ಎಂದು ನನಗನ್ನಿಸುತ್ತದೆ. ನಿಮ್ಮ ಹಣೆ ಬರಹಕ್ಕೆ ನೀವಂತೂ ಬರಗಾಲದ ಕಾಲು ತಗೊಂಡೇ ಈ ವಿಧಾನಮಂಡಲಕ್ಕೆ ಹೆಜ್ಜೆ ಹಾಕಿದ್ದೀರಿ. ಒಂದು ಸಲವಾದರೂ ಬರಗಾಲ ಇಲ್ಲ ಎಂದು ಮಾತನಾಡಿದ್ದೀರಾ ಈ ರಾಜ್ಯಪಾಲರ ಭಾಷಣದಲ್ಲಿ ? ನಾವು ಏನು ಮಾಡೋಣ ! ನಾವು ಬಂದ ಕೂಡಲೇ ಬರಗಾಲ ಬಿತ್ತು ಎಂದರೆ ಎಷ್ಟು ಪ್ರಯತ್ನ ಮಾಡಿದೆ ಈ ಜನತಾ ಸರ್ಕಾರ ಹೆಗಡೆ ಸರ್ಕಾರ ? ಈ ಬರಗಾಲವನ್ನು ಎದುರಿಸಲಿಕ್ಕೆ ಇಡೀ ಮಂತ್ರಿಮಂಡಲದವರು ಗೋಶಾಲೆಗಳನ್ನು, ಹುಲ್ಲಿನ ಗೋದಾಮುಗಳನ್ನು ಮಾಡಿದ್ದೀವಿ, ಇಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀವಿ, ಎಂದು ಹೇಳುತ್ತಾ ಕೇಂದ್ರದವರು ನಮಗೆ ಕೊಟ್ಟಿಲ್ಲ ಎಂದು ಅದು ಬೇರೆ ಹೇಳುವುದು. ನಿಮಗೆ ಮೊದಲೇ ರೊಕ್ಕ ಇಲ್ಲ ಎಂದು ಹೇಳ್ತೀರಿ. ಇಷ್ಟೆಲ್ಲ ಸಂಬಾಳಿಸುವುದು ಹೇಗೆ ? ಎಲ್ಲಿ ಗೋವುಗಳನ್ನು ಕಟ್ಟುತ್ತಾ ಇದ್ದಾರೆ ? ನಮ್ಮ ಜಿಲ್ಲೆಯಲ್ಲಂತೂ ಎಲ್ಲೂ ಇಲ್ಲ. ಗುಲ್ಬರ್ಗಾದಲ್ಲಿ ಇಲ್ಲ. ಬೆಳಗಾವಿ ಭಾಗದಲ್ಲಿ ಏನಿತ್ತೋ ನನಗಂತೂ ಗೊತ್ತಿಲ್ಲ.

ಯಾವುದೇ ಒಂದು ಪ್ರೋಗ್ರಾಂ ನಮ್ಮಲ್ಲಿ ಇಂಪ್ಲಿಮೆಂಟ್ ಆಗಿಲ್ಲ. ಆಮೇಲೆ ಈ ವರ್ಷ ಮಳೆ ಬಹಳ ಚೆನ್ನಾಗಿ ಆಗಿದೆ. ನಾವೂ ಕೂಡ ತೊಗರಿ ಬೆಳೆ ನೋಡಿ ಬಹಳ ಸಂತೋಷದಿಂದ ಇದ್ದೆವು. ಇಡೀ ಕರ್ನಾಟಕಕ್ಕೆ ೫೦–೬೦ ಪರ್ಸೆಂಟ್ ತೊಗರಿ ಸಪ್ಲೈ ಮಾಡುವಂತಹ ಜನ ನಾವು. ತೊಗರಿ ಬೆಳೆಯನ್ನು ನೋಡಿದಾಗ ರೈತರು ಈಸಾರಿ ಎಲ್ಲಾ ಸಾಲವನ್ನೂ ತೀರಿಕೊಳ್ಳುತ್ತಾರೆಂದು ನನಗನಿಸಿತು. ಆದರೆ ಸೈಕ್ಲೋನ್ ತರಹ ಮಳೆ ಬಂದಕೂಡಲೇ, ರೈತನ ತೊಗರಿಗೆ ಹಾಕಿದ್ದ ಪೌಡರ್, ಗೊಬ್ಬರ, ಔಷಧಿ ಇನ್ನೂ ಏನೇನು ಮಾಡಿದ್ದರು. ಅದೆಲ್ಲಾ ಹೋಯಿತು ಇನ್ನೇನು ಪೂರ್ಣ ಫಸಲು ಬರುತ್ತದೆಂದು ತಿಳಿದ್ದಾಗ, ಪೂರ್ಣ ತೊಗರಿ ಬೆಳೆ ಕೆಟ್ಟು ಹೋಯಿತು. ಈ ಬೆಳೆಗೆ ಹುಳ ಬಿತ್ತು. ೨೫ ಚೀಲ ಕೂಡ ಆಗುತ್ತಿಲ್ಲ. ಜೋಳದ ಬೆಳೆಗೂ ಕೂಡ ಇದೇ ಪರಿಸ್ಥಿತಿ ಆಯಿತು. ಈ ಒಂದು ಪರಿಸ್ಥಿತಿಯಲ್ಲಿ ರೈತನಿಗೆ ಸಕಾಲದಲ್ಲಿ ಮಳೆ ಬರದಿದ್ದಲ್ಲಿ, ಅವನು ಯಾವ ಪ್ರಕಾರ ಉದ್ಧಾರ ಆಗಬೇಕು. ಆತ ಬ್ಯಾಂಕ್ ಲೋನ್ ಪಡೆದು ಪೌಡರ್, ಕೆಮಿಕಲ್ಸ್ ಹಾಕಿರುತ್ತಾನೆ. ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿರುತ್ತಾನೆ. ಅದೇ ಸಕಾಲದಲ್ಲಿ ಮಳೆ ಬಂದಿದ್ದರೆ. ಈ ರೀತಿ ಸಾಲ ಮಾಡಿ, ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡುವ ಪರಿಸ್ಥಿತಿ ಇರಲಿಲ್ಲ, ಈ ವಿಚಾರದಲ್ಲಿ ರಾಜ್ಯಪಾಲರು ಏನನ್ನೂ ಮಾತನಾಡಿಲ್ಲ. ಇಂತಹ ಪರಿಸ್ಥಿತಿ ಇದ್ದಾಗ ರಾಜ್ಯದ ರೈತನಿಗೆ ಸಹಾಯ ಮಾಡುತ್ತೇವೆ, ಡೆವಲಪ್‌ಮೆಂಟ್ ಮಾಡುತ್ತೇವೆ ಎನ್ನುವಂಥ ಮಾತನ್ನೂ ಹೇಳಿಲ್ಲ, ಇವತ್ತು ಜಿಲ್ಲಾ ಪರಿಷತ್ ಸದಸ್ಯರನ್ನು ಮಂತ್ರಿಗಳು

ಹೋಗಿ ಕೇಳಿ. ಇವತ್ತು ನಮ್ಮ ಪರಿಸ್ಥಿತಿ ಏನಾಗಿದೆ ಎಂಬುದನ್ನು ತಿಳಿದುಕೊಂಡು ಬನ್ನಿ. ಇಂತಹ ಪರಿಸ್ಥಿತಿಯಲ್ಲಿ ನಮಗೆ ಪರಿಹಾರ ಕೊಡಿ ಎಂದು ಕೇಳುತ್ತೇವೆ, ತಮ್ಮ ಹತ್ತಿರ ರೊಕ್ಕ ಇಲ್ಲ, ಹಣ ಇಲ್ಲ ಈ ಪರಿಸ್ಥಿಯಲ್ಲಿ ಸರ್ಕಾರ, ಈ ಜನರ ಅಭಿವೃದ್ಧಿಗೆ ಬಹಳ ಮಟ್ಟಿಗೆ ದುಡಿದಿದ್ದೇವೆ ಎಂದು ಹೇಳಿದ್ದಾರೆ. ನನಗನಿಸಿದ ಮಟ್ಟಿಗೆ ಇದು ತಮಗೆ ಅಷ್ಟೊಂದು ಶೋಭೆ ಕಾಣುವುದಿಲ್ಲ. ನಿಮ್ಮ ಬೆನ್ನನ್ನು ನೀವೇ ತಟ್ಟಿ ಕೊಳ್ಳುವ ಸ್ಥಿತಿ ಇಲ್ಲ.........

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ರೈತರು ಇವತ್ತು ಬಹಳ ಸಂತೋಷದಿಂದ ಇದ್ದಾರೆ.

ಶ್ರೀ ಯು. ಭೂಪತಿ —ಇವತ್ತು ನಿಮ್ಮ ಸರ್ಕಾರ ಬಂದಮೇಲೆ, ಬೆಳೆಗಳಿಗೆ ಬರತಕ್ಕ ರೋಗ ಗಳಿಗೆ ಸಿಂಪಡಿಸುವ ಔಷಧಿಗಳಿಗೆ ನೀರು ಬೆರಸದೇ ಹಾಕಿದರೂ ಕೂಡ ಕ್ರಿಮಿಗಳು ಸಾಯುವುದಿಲ್ಲ.

ಶ್ರೀ ಕೆ. ಬಿ. ಶಾಣಪ್ಪ.— ಇನ್ನು ಟೌನ್ ಮುನಿಸಿಪಾಲಿಟಿ ಪರಿಸ್ಥಿತಿ, ಫಾದರ್ ಜೇಕಬ್ ಕಮಿಟಿ ರಿಪೋರ್ಟ್ ಕೊಟ್ಟಿದೆ. ಇದು ಮಾನ್ಯ ರಾಮಕೃಷ್ಣ ಹೆಗಡೆಯವರ ಹತ್ತಿರ ಹಾಗೆಯೇ ಕೊಳೆತಿದೆ. ಟೌನ್ ಮುನಿಸಿಪಾಲಿಟಿಯವರ ಸ್ಥಿತಿ ನೋಡಿದರೆ ನಮ್ಮ ಸರ್ಕಾರದ ಪರಿಸ್ಥಿತಿ ಇದ್ದ ಹಾಗೆಯೇ ಇದೆ. ಟೌನ್ ಮುನಿಸಿಪಾಲಿಟಿಗಳಲಿ ಯಾವುದೇ ಖರ್ಚು ಕೊಡುವುದಕ್ಕೂ ಹಣ ಇಲ್ಲ. ಉದಾಹರಣೆಗೆ ಸಾಗರದಲ್ಲಿ ೫೦ ಸಾವಿರ ರೂಪಾಯಿ ಪೇಮೆಂಟ್ ಮಾಡಬೇಕಾಗಿದೆ. ಸರ್ಕಾರ ಈ ಗ್ರಾಂಟ್ ರೂಪದಲ್ಲಿ ಕೊಟ್ಟಿರುವುದು ಒಂದು ವರ್ಷದಲ್ಲಿ ೬೦ ಸಾವಿರ. ಇದನ್ನೂ ಎರಡು ವರ್ಷಗಳ ನಂತರ ಕೊಟ್ಟಿದ್ದಾರೆ. ಅಲ್ಲಿ ಕಲೆಕ್ಷನ್ ಇಲ್ಲ. ಸುಮಾರು ೫ ತಿಂಗಳಿಂದಲೂ ಪೇಮೆಂಟ್ ಇಲ್ಲ. ಇದೇ ಪ್ರಕಾರ ಸಿದ್ದಾಪುರದಲ್ಲೂ ಇದೆ. ಬ್ರಿಟೀಷ್‌ನವರು ರೆವಿನ್ಯೂ ತನ್ನ ಕೈಯಲ್ಲಿ ಇಟ್ಟುಕೊಂಡರು, ಡೆವಲಪ್‌ಮೆಂಟ್ ಮಾಡಿ ಎಂದು ಹೇಳಿದ ಪರಿಸ್ಥಿತಿ ಇವತ್ತು ಇದೆ. ನೀವು ಯಾವ ರೀತಿಯಲ್ಲಿ ಈ ಸಮಸ್ಯೆಗಳನ್ನು ಬಗೆಹರಿಸುತ್ತೀರಿ. ಶಹಬಾದ್ ಕೆ. ಇ. ಬಿ. ಯವರಿಗೆ ಅಲ್ಲಿನ ಮುನಿಸಿಪಾಲಿಟಿಯವರು ಒಂದು ಲಕ್ಷ ರೂಪಾಯಿ ಕೊಡಬೇಕಾಗಿದೆ. ನೀವು ಗ್ರಾಂಟ್ ಕೊಡಬೇಕಾದಾಗ, ಕೆ.ಇ.ಬಿ. ಲೋನ್ ಮುರಿದುಕೊಂಡು ಕೊಡುತ್ತೀರಿ. ಇನ್ನು ನಮ್ಮ ಊರಿನಲ್ಲಿ ೧೯೮೪ರ ಏಪ್ರಿಲ್‌ನಲ್ಲಿ ಒಂದು ವಾಟರ್ ಸಪ್ಲೈ ಸ್ಕೀಮ್ ಮಾಡಿದ್ದು, ಅದಕ್ಕೆ ಮಾನ್ಯ ಹೆಗಡೆಯವರೇ ಫೌಂಡೇಷನ್ ಹಾಕಿದರು. ಇಲ್ಲಿಗೆ ನಾಲ್ಕು ವರ್ಷಗಳು ಆಯಿತು. ಇದಕ್ಕೆ ಎಲ್. ಐ. ಸಿ.ನವರು ೨೨ ಲಕ್ಷ ರೂಪಾಯಿಗಳ ಲೋನ್ ಕೊಟ್ಟಿದ್ದಾರೆ. ಆ ಲೋನ್ ಮತ್ತು ಆ ಸ್ಕೀಮ್ ಎರಡೂ ಕಂಪ್ಲೀಟ್ ಆಗಿಲ್ಲ. ಪ್ರತಿ ತಿಂಗಳೂ ಆ ಲೋನ್ ಮೇಲೆ ಮುನಿಸಿಪಾಲಿಟಿಯವರು ಬಡ್ಡಿ ಕೊಡಬೇಕು ಎಲ್. ಐ. ಸಿ.ಗೆ ಇದಕ್ಕೆ ನಾವೇನು ಹೇಳುತ್ತೇವೆ ಎಂದರೆ ಎಲ್ಲಿಯವರೆಗೆ ಈ ಸ್ಕೀಮ್ ಕಂಪ್ಲೀಟ್ ಆಗುವುದಿಲ್ಲವೋ, ಎಲ್ಲಿಯವರೆಗೆ ಇದನ್ನು ಕಮಿಷನ್ ಮಾಡಿ ವಾಟರ್ ಸಪ್ಲೈ ಬೋರ್ಡ್‌ನವರು ಮುನಿಸಿಪಾಲಿಟಿಯವರಿಗೆ ಹ್ಯಾಂಡ್ ಓವರ್ ಮಾಡುವುದಿಲ್ಲವೋ ಅದುವರೆಗೆ ಈ ಲೋನ್ ಸರಕಾರದ ಮೇಲೆ ಇರಬೇಕು, ಮುನಿಸಿ ಪಾಲಿಟಿಯ ಮೇಲಿರಬಾರದು. ೧೯೮೪ ರಲ್ಲಿ ಇದೇ ಸದನದಲ್ಲಿ ಈ ವಿಚಾರದಲ್ಲಿ ಈ ವಿಚಾರ ಚರ್ಚೆ ಮಾಡಿದಾಗ. ಮಾನ್ಯ ಚಂದ್ರಶೇಖರ್‌ರವರು, ಇದರ ಬಗ್ಗೆ ಯೋಚನೆ ಮಾಡುತ್ತೇನೆ ಎಂದರು ಇದುವರೆಗೆ ಅವರು ಯೋಚನೆ ಮಾಡುವ ಮೂಡ್‌ನಲ್ಲೇ ಇದ್ದಾರೆ......still that scheme has not been completed. ಆ ೨೨ ಲಕ್ಷ ರೂಪಾಯಿಗೆ ೧೦ ಲಕ್ಷ ರೂಪಾಯಿ ಬಡ್ಡಿಯೇ ಆಗಿದೆ. ಇದಕ್ಕೆ ಯಾರು ಹೊಣೆ ? ಆ ಸ್ಕೀಮ್ ಇನ್ನೂ ಕಂಪ್ಲೀಟ್ ಮಾಡಿ ಹ್ಯಾಂಡ್ ಓವರ್ ಮಾಡಿಲ್ಲ, ಅದಕ್ಕೆ ಮುನಿಸಿಪಾಲಿಟಿಯವರು ಬಡ್ಡಿ ಕೊಡುತ್ತಿದ್ದಾರೆ. ಈಗಾಗಲೇ ಮುನಿಸಿಪಾಲಿಟಿಗಳು ಸೊರಗುವುದಕ್ಕೆ ಹತ್ತಿವೆ. ಅನೇಕ ಜನ ಮುನಿಸಿಪಾಲಿಟಿಗಳನ್ನು ಬಿಟ್ಟು ಹೋಗುತ್ತೇವೆ ಅನ್ನುತ್ತಿದ್ದಾರೆ Presidents and the Corporators are not prepared to run the Municipalities. ಅದಕ್ಕಾಗಿ ಮುನಿಸಿಪಾಲಿಟಿಗಳು ಉಳಿಯುವುದಕ್ಕೆ ಅವರಿಗೆ ಬೇಕಾದಂತಹ ಧನಸಹಾಯವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇವೆ. ಇದರ ಬಗ್ಗೆ ಒಂದು ಮಾತೂ ಕೂಡಾ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇಲ್ಲ.

ಇನ್ನು ಲಾ ಅಂಡ್ ಆರ್ಡರ್ ಪ್ರಾಬ್ಲಂ. ಲಾ ಅಂಡ್ ಆರ್ಡರ್ ಸಿಚುಯೇಷನ್ ಬಗ್ಗೆ ೧೯೮೩ ರಲ್ಲಿ ನಿಮ್ಮ ಸರಕಾರ ಅಧಿಕಾರಕ್ಕೆ ಬಂದ ನಂತರ ಒಂದೊಂದಾಗಿ ತೆಗೆದುಕೊಂಡು ಅನೇಕ ಜನರು ಇಲ್ಲಿ ಮಾತನಾಡಿದ್ದಾರೆ. ಸೊಸೈಟಿಯಲ್ಲಿ ಲಾ ಅಂಡ್ ಆರ್ಡರ್ ಒಂದೊಂದು ಸಲ ತಪ್ಪುತ್ತದೆ. ಅದನ್ನು ನೀವು ಬಂದರೂ ಸರಿಮಾಡುವುದಕ್ಕೆ ಆಗುವುದಿಲ್ಲ. ಆದರೆ ನಾವು ಬಂದನಂತರ ಕಮ್ಯೂನಲ್ ವಯಲೆನ್ಸ್ ಕಡಿಮೆಯಾಗಿದೆ ಎಂದು ನೀವು ಏನು ಹೇಳಿಕೊಂಡಿದ್ದೀರಿ ಅದನ್ನು ನಾನು ಒಪ್ಪುವುದಿಲ್ಲ. ನೀವುಅಂಸಿ

ಬಂದ ನಂತರ ೧೯೮೩ ರಲ್ಲಿ ವಿಜಾಪುರದಲ್ಲಿ ಆಗಲಿಲ್ಲವೇ, ಬಳ್ಳಾರಿಯಲ್ಲಿ ಆಗಲಿಲ್ಲವೇ. ಬೆಂಗಳೂರಿನಲ್ಲಿ ಆಗಲಿಲ್ಲವೇ, ಬೆಳಗಾಂನಲ್ಲಿ ಆಗಲಿಲ್ಲವೇ ಆಳಂದ್‌ನಲ್ಲಿ ಆಗಲಿಲ್ಲವೇ ? ಬೆಂಡಿಗೇರಿ ಪ್ರಕರಣ ಇನ್ನೂ ನಮ್ಮ ಕಣ್ಮುಂದೆ ಇದೆ ರಾಯಚೂರು ಜಿಲ್ಲೆಯ ಲಿಂಗಸುಗೂರು ಪ್ರಕರಣ ನಮ್ಮ ಕಣ್ಣುಮುಂದೆ ಇದೆ. ಎಸ್‌ಸಿ ಗಳ ಮೇಲೆ ನಡೆಯುವ ದಬ್ಬಾಳಿಕೆಗಳು ನಮ್ಮ ಕಣ್ಣು ಮುಂದೆ ಇದೆ. ಸಿ.ಆರ್‌.ಇ. ಸೆಲ್‌ನಲ್ಲಿ ಎಷ್ಟು ಕೇಸ್ ರಿಜಿಸ್ಟರ್ ಮಾಡಿದ್ದೀರಿ ? ಎಷ್ಟು ಜನಗಳಿಗೆ ಅರೆಸ್ಟ್ ಮಾಡಿದ್ದೀರಿ ? ಸಾವಿರಾರು ಜನ ಸುಳ್ಳು ಜಾತಿ ಸರ್ಟಿಫಿಕೇಟ್ ತೆಗೆದುಕೊಂಡು ಪ್ರಮೋಷನ್ ತೆಗೆದುಕೊಂಡು ಡ್ಯೂಟಿ ಮೇಲಿದ್ದಾರೆ. What action the Government has taken ? There is an open and naked violence of your law which you have made ಇದರಲ್ಲಿ ೧೨೫೦ ಕೇಸ್ ರಿಜಿಸ್ಟರ್ ಮಾಡಿದ್ದೀರಿ. What is the out come ? ಯಾರಿಗೆ ಪನಿಷ್‌ಮೆಂಟ್ ಮಾಡಿದ್ದೀರಿ ? ಸುಳ್ಳು ಸರ್ಟಿಫಿಕೇಟ್ ಕೊಟ್ಟಂಥ ತಹಸೀಲ್ದಾರರ ಮೇಲೆ ಏನು ಆಕ್ಷನ್ ತೆಗೆದುಕೊಂಡಿದ್ದೀರಿ. ಇವತ್ತೂ ಸಹ ಅವರು ಎಫ್.ಡಿ.ಸಿ. ಆಗಿದ್ದಾರೆ. ಕ್ಲಾಸ್ ೧, ಕ್ಲಾಸ್ ೨ ಆಗಿದ್ದಾರೆ Just you allowed them to do whatever they like. Is it the way of Government functioning here ? ಇದಕ್ಕಾಗಿ ನಿಮಗೆ ಶಹಬಾಸ್‌ಗಿರಿ ಕೊಡಬೇಕೇ ? ಎಸ್. ಸಿ. ಗಳಿಗೆ ಅನ್ಯಾಯ ಆಗಿಲ್ಲ ಎನ್ನುವುದಕ್ಕೆ ಎಷ್ಟು ಜನರ ಮೇಲೆ ನಾವು ಆಕ್ಷನ್ ತೆಗೆದುಕೊಂಡಿದ್ದೇವೆ ಎಂದು ತಾವು ಹೇಳಬೇಕಾಗುತ್ತದೆ ಅನೇಕ ಸಲ ಬೇರೆ ಬೇರೆ ಇಲಾಖೆಗಳಲ್ಲಿ ಯಾವುದೋ ಒಂದು ತಪ್ಪು ಕೆಲಸ ಮಾಡಿದ್ದಾರೆ ಎಂದು ಅಧಿಕಾರಿಗಳನ್ನು, ನೌಕರರನ್ನು ಸಸ್‌ಪೆಂಡ್ ಮಾಡುತ್ತೀರಿ. ಅನೇಕ ಜನ ಆಫೀಸರ್‍ಸ್ ಶಾಸಕರ ಹತ್ತಿರ ಬರುತ್ತಾರೆ. ನಾವು ಶಾಸಕರಾಗಿದ್ದೇವೆ ಎಂದು ಬರುತ್ತಾರೆ. ಇದು ಹಾರ್ಟಿಕಲ್ಚರಲ್ ಡಿಪಾರ್ಟ್‌ಮೆಂಟ್, ಇದು ಯೂತ್ ಸರ್ವೀಸ್ ಡಿಪಾರ್ಟ್‌ಮೆಂಟ್ ಎಂದು ಹೇಳಿಕೊಂಡು ಸಾವಿರಾರು ಜನ ಬರುತ್ತಾರೆ, ತಾವು ಅವರನ್ನು ಸಸ್ಪೆಂಡ್ ಮಾಡುತ್ತೀರಿ. ೬ ತಿಂಗಳ ಒಳಗೆ ಎನ್‌ಕ್ವೈರಿ ಮಾಡಿ ಪನಿಷ್‌ಮೆಂಟ್ ಕೊಡಬೇಕೆಂದು ರೂಲ್ಸ್ ಇದೆ. ಸಸ್ಪೆಂಡ್ ಆಗಿ ಎರಡು ವರ್ಷವಾದರೂ ಅವರು ನಿಮ್ಮ ನೆನಪಿಗೇ ಬರುವುದಿಲ್ಲ. ಏತಕ್ಕೆ ತಾವು ಈ ವಿಚಾರದಲ್ಲಿ ಚೌಕಾಸಿ ಮಾಡುತ್ತಿದ್ದೀರಿ. ಯಾವ ಅಧಿಕಾರಿ ತಪ್ಪು ಮಾಡಿರುತ್ತಾನೆ ಎಂದು ಸಸ್‌ಪೆಂಡ್ ಮಾಡುತ್ತೀರಿ ಎಂದರೆ, ಇಮ್ಮೀಡಿಯಟ್ ಆಗಿ ಅವನ ಮೇಲೆ ಚಾರ್ಜ್‌ಷೀಟ್ ಸರ್ವ್ ಮಾಡಿರಿ. prove that he is guilty and take suitable action, ಅದನ್ನು ಬಿಟ್ಟು just to avoid the situation. ಅವನನ್ನು ಸಸ್ಪೆಂಡ್ ಮಾಡಿ, ವರ್ಷ ಎರಡು ವರ್ಷ ಅದನಂತರ ಪುನಃ ಅವನಿಗೆ ಡ್ಯೂಟಿ ಮೇಲೆ ತೆಗೆದುಕೊಳ್ಳುತ್ತೀರಿ. ನಮ್ಮಂಥವರೇ ಬಂದು ಹೇಳುತ್ತೇವೆ, ಡ್ಯೂಟಿ ಮೇಲೆ ತೆಗೆದುಕೊಳ್ಳಿ ಎಂದು. ಇದರಿಂದ the purpose will not be served. ಒಂದು ಅಡ್ಮಿನಿಸ್ಟ್ರೇಷನ್ ಇಟ್ಟುಕೊಂಡು ನೀವು ಹೋಗುತ್ತಿದ್ದೀರಿ. ನನಗೆ ಅನ್ನಿಸಿದ ಮಟ್ಟಿಗೆ ನಿಮಗೂ ಕಾಂಗ್ರೆಸ್‌ನವರಿಗೂ ಯಾವುದೇ ಡಿಫರೆನ್ಸ್ ಇಲ್ಲ. Old wule in new bottle ನೀವೂ ಅದೇ ಮಂದಿ, ಇಂತಹ ಒಂದು ಪರಿಸ್ಥಿತಿಯನ್ನು ತೆಗೆಯಬೇಕು.

ಇನ್ನು ನೀರಿನ ಬಗ್ಗೆ ಇಷ್ಟು ಲಕ್ಷ ಬೋರ್‌ವೆಲ್ ಹಾಕಿದ್ದೇವಿ, ಇಷ್ಟು ಲಕ್ಷ ಖರ್ಚು ಮಾಡಿದ್ದೇವಿ ಎಂದು ನೀವು ಹೇಳಿಕೊಳ್ಳುತ್ತೀರಿ. ನಾನೂ ಕೂಡಾ ಈ ಒಂದು ನೀರಿನ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ನೀವು ಕೈಗೊಂಡಂತಹ ಹಾನೆಸ್ಟ್ ಆದ ಪ್ರಯತ್ನವನ್ನು ಒಪ್ಪುತ್ತೇನೆ. ಅದೇ ಸಮಯದಲ್ಲಿ ಏನಾಗಿದೆ ಎಂದರೆ, ೧೯೮೦ ಕ್ಕಿಂತ ಮುಂಚಿತವಾಗಿ, ಕಾಂಗ್ರೆಸ್ ಸರಕಾರ ಇದ್ದಾಗ ಏನು ರೂರಲ್ ವಾಟರ್ ಸಪ್ಲೈ ಸ್ಕೀಮ್‌ಗಳನ್ನು ಹಾಕಿದ್ದರು, ಆ ಅನೇಕ ಸ್ಕೀಮ್‌ಗಳು ೧೯೮೮ ಆದರೂ ಕೂಡಾ ಇನ್ನೂ ಮುಕ್ತಾಯವಾಗಿಲ್ಲ.

ನೀವು ಬಂದ ಮೇಲೆ ಮಿನಿ ವಾಟರ್ ಸಪ್ಲೈ ಸ್ಕೀಮ್ ತೆಗೆದುಕೊಂಡಿರಿ. ನ್ಯಾಶನಲ್ ವಾಟರ್ ಸಪ್ಲೈ ಸ್ಕೀಮ್‌ನಲ್ಲಿ ಅನೇಕ ದೊಡ್ಡ ದೊಡ್ಡ ಹಳ್ಳಿಗಳನ್ನು ಅಂದರೆ ಎರಡು ಸಾವಿರ ಮೂರು ಸಾವಿರ ಜನ ಸಂಖ್ಯೆ ಇರತಕ್ಕಂಥ ಹಳ್ಳಿಗಳನ್ನು ತೆಗೆದುಕೊಂಡಿರಿ, ಆದರೆ ಇದೇ ಸದನದಲ್ಲಿ ವಾಡಿ ವಾಟರ್ ಸಪ್ಲೈ ಯೋಜನೆ ಬಗ್ಗೆ ಮಾನ್ಯ ಅಬ್ದುಲ್ ನಜೀರ್ ಸಾಬ್‌ರವರು ೧೯೮೪ನೇ ಜೂನ್ ತಿಂಗಳಲ್ಲಿ ಈ ವಾಟರ್ ಸಪ್ಲೈ ಸ್ಕೀಮ್‌ನ್ನು ಚಾಲೂ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟರು. It was an assurance by the Minister for Rural Development To-day also he is a Minister. ಅವರು ಕೊಟ್ಟಂತಹ ಅಶ್ಯೂರೆನ್ಸ್ ಏನಾಯಿತು ಎಂದು ಅವರೇ

ಇವತ್ತು ಹೋಗಿ ನೋಡಲಿ. ಅವರು ಆಶ್ವಾಸನೆ ಕೊಟ್ಟು ೪ ವರ್ಷಗಳಾಯಿತು. ಇದುವರೆವಿಗೂ ಆ ಆಶ್ವಾಸನೆ ಇಂಪ್ಲಿಮೆಂಟ್ ಆಗಿಲ್ಲ ನಾನು ಅಲ್ಲಿ ಒಂದು ಹತ್ತು ಸಲ ಕೇಳಿದ್ದೇನೆ. ಈ ಬಗ್ಗೆ ಪ್ರಶ್ನೆಯನ್ನು ಸಹ ಹಾಕಿ ಕೇಳಿದ್ದೇನೆ, There is a defect to the tank. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಟ್ಯಾಂಕ್ ಕಟ್ಟಿಸಿದ್ದೀರಿ, ಸುಮಾರು ೨೫ ಸಾವಿರ ಜನ ಸಂಖ್ಯೆಗೆ ನೀರು ಕೊಡತಕ್ಕಂಥ ಒಂದು ಟ್ಯಾಂಕ್ ಅದು. ಅದರ ಪರಿಸ್ಥಿತಿ ಏನಿದೆ ? ಯಾರು ಆ ಕೆಲಸ ಮಾಡಿದರೆಂದು ನೀವು ಪತ್ತೆ ಹಚ್ಚಿದ್ದೀರಾ ? ಆ ಅಧಿಕಾರಿಗಳ ಮೇಲೆ ಚಾರ್ಜ್‌ಶೀಟ್ ಹಾಕಿದಿರಾ ? ಇನ್ನು ಯಾವುದೂ ತೀರ್ಮಾನವಾಗಿಲ್ಲ. ಪಾಡಿಗೆ ನೀರು ಸಪ್ಲೈ ಆಗಲಿಲ್ಲ. ಅಲ್ಲಿ ಇಂಡಸ್ಟ್ರೀಯಲಿ ವರ್ಕಿಂಗ್ ಕ್ಲಾಸ್ ಇದೆ. No body has asked about it. ನಾನು ಇಲ್ಲಿ ಒಂದು ಹತ್ತು ಸಲ ಕೇಳಿದ್ದೇನೆ. ನಾನು ಡಿ.ಡಿ.ಸಿ. ಮೀಟಿಂಗ್‌ಗೆ ಮಂತ್ರಿಗಳು ಬಂದಿದ್ದಾಗ ಕೇಳಿದೆ. ಆಗ ಅವರು ಹೇಳಿದರು ನಾನು ೧೯೮೪ರಲ್ಲಿ ಆಶ್ವಾಸನೆ ಕೊಟ್ಟಿದ್ದೇನೆ. ಇನ್ನು ಮುಗಿಯಲಿಲ್ಲವೇ ಎಂದು. ಇವರು ಬಂದಾಗ ಹೇಳುತ್ತಾರೆ, ಆ ಮೇಲೆ ಸುಮ್ಮನೆ ಆಗುತ್ತಾರೆ. ನಾನೆಷ್ಟು ಸಲ ನೆನಪು ಮಾಡಿದರೂ ಅಷ್ಟೇ. ಇಂತಹ ಕೆಲಸ ತಾವು ಇಟ್ಟುಕೊಂಡು ನಮ್ಮನ್ನು ಹೊಗಳಿ, ಎಂದು ಹೇಳಿದರೆ ಹೇಗೆ ? ದಯಮಾಡಿ ತಾವು ಹೊಗಳುವಂತಹ ಕೆಲಸ ಮಾಡಿ ಆಗ ನಾವು ನಿಮ್ಮನ್ನು ಹೊಗಳುತ್ತೇವೆ. ಅನೇಕ ಕಡೆಗಳಲ್ಲಿ, ಹಳ್ಳಿಗಳ, ಸಮಸ್ಯೆಗಳ ಬಗ್ಗೆ ನೀರಿನ ಸಮಸ್ಯೆಗಳ ಬಗ್ಗೆ ಶಾಲಾ ಕಟ್ಟಡಗಳ ಸಮಸ್ಯೆಗಳ ಬಗ್ಗೆ ಮಾತನಾಡಿಕೊಳ್ಳುತ್ತಿರುವುದು ತಮಗೆ ಗೊತ್ತಾಗಿರಬೇಕು ಇವತ್ತು ಪ್ರತಿಯೊಂದು ಮಂಡಲ ಪಂಚಾಯಿತಿಯವರು ರೆಜಲ್ಯೂಶನ್ ಮಾಡಿ ಜಿಲ್ಲಾ ಪರಿಷತ್ತಿಗೆ ಕಳುಹಿಸಿಕೊಡುತ್ತಿದ್ದಾರೆ. ಜಿಲ್ಲಾ ಪರಿಷತ್ತಿನ ಕಾನೂನಿನಲ್ಲಿ ಮಂಡಲ ಪಂಚಾಯಿತಿಯವರು ನೂರು ರೂಪಾಯಿಗಳಿಗಿಂತ ಮೇಲೆ ಖರ್ಚು ಮಾಡುವುದಕ್ಕೆ ಪ್ರಧಾನರಿಗೆ ಅವಕಾಶ ಇಲ್ಲ. ಈ ಶಾಲೆಗಳ ಬಾಡಿಗೆ ನೂರು ರೂಪಾಯಿಗಳಿಗಿಂತ ಮೇಲೆ ಕೊಡುವುದಕ್ಕೆ ಪ್ರಧಾನರಿಗೆ ಅವಕಾಶ ಇಲ್ಲ. ಆದ್ದರಿಂದ ಜಿಲ್ಲಾ ಪರಿಷತ್ತಿಗೆ ಕಳುಹಿಸಿ ಕೊಡುತ್ತಿದ್ದಾರೆ. ನಮ್ಮ ಕಡೆ ಕಳುಹಿಸಿಕೊಡುತ್ತಿದ್ದೇವೆ. ನಿಮ್ಮ ಕಡೆ ಹೇಗೋ ನನಗೆ ಗೊತ್ತಿಲ್ಲ. ನಮ್ಮಲ್ಲಿ ಸರ್ಕಾರಿ ಶಾಲಾ ಕಟ್ಟಡ ಒಂದೂ ಇಲ್ಲ. ಬಿಲ್ಡಿಂಗ್ ಸಲುವಾಗಿ ಬಾಡಿಗೆ ೩೦೦ ರೂಪಾಯಿಗಳು ಕೇಳುತ್ತಿದ್ದಾರೆ. ಕೊಡಬೇಕೆಂದು ಮಾಡಿದ್ದೇವೆ ದಯಮಾಡಿ ಲೋಕೋಪಯೋಗಿ ಇಲಾಖೆಯವರು ಈ ಬಿಲ್ಡಿಂಗ್‌ನ್ನು ವ್ಯಾಲ್ಯುಯೇಶನ್ ಮಾಡಿ ೩೦೦ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಪರವಾನಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಮಂಡಲ ಪಂಚಾಯಿತಿಯವರು ಈ ರೀತಿಯ ಪರವಾನಿಗೆಗೆ ಕಳುಹಿಸಿದ್ದಾರೆ ಇಂತಹ ಪರಿಸ್ಥಿತಿಯಲ್ಲಿ ಮಂಡಲ ಪಂಚಾಯಿತಿಗಳು ಇವೆ, ನಮ್ಮ ಮಂಡಲ್ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ ಸದಸ್ಯರಿಗೆ ಪೇಮೆಂಟ್ ಮಾಡುವ ಸಲುವಾಗಿ ಹಣ ಇಲ್ಲ. ಗುಲ್ಬರ್ಗ ಜಿಲ್ಲೆಯಲ್ಲಿ ಈ ಪರಿಸ್ಥಿತಿ ಇದೆ. ಹೋದ ಜಿಲ್ಲಾ ಪರಿಷತ್ತಿನ ಮೀಟಿಂಗ್‌ನಲ್ಲಿ ಈ ಬಗ್ಗೆ ಗಲಾಟೆಯಾಯಿತು. ಈ ಬಗ್ಗೆ ತಾವು ನನಗೆ ಕ್ಲಾರಿಫಿಕೇಷನ್ ಕೊಡಬೇಕು. ಬೇರೆ ಕಡೆ ತಾವು ಹಣ ಕೊಟ್ಟಿರಬಹುದು. ನಮಗ್ಯಾರಿಗೂ ಹಣ ಕೊಟ್ಟಿಲ್ಲ, ಹಣ ಎಲ್ಲಿದೆ ? ಜಿಲ್ಲಾ ಪರಿಷತ್ತಿನ ಸದಸ್ಯರಿಗೆ ಟಿ.ಎ.ಡಿ.ಎ. ಕೊಡುತ್ತಿಲ್ಲ. ಈ ಪರಿಸ್ಥಿತಿಯಲ್ಲಿ ಸರ್ಕಾರ ತನ್ನ ೫ ವರ್ಷಗಳ ಜನೋತ್ಸವ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ, ಮೈಸೂರಿನಲ್ಲಿ, ಗುಲ್ಬರ್ಗ ಜಿಲ್ಲೆಗಳಲ್ಲಿ ಮಾಡಿತು, ಹಣ ಇಲ್ಲದೆ ಇರುವಂತಹ ಸಂದರ್ಭದಲ್ಲಿ ಏತಕ್ಕೆ ಇದನ್ನು ಮಾಡಬೇಕಾಗಿತ್ತು. You have no moral right to Celebrate Janotsava of Janata Party Government ರಾಜ್ಯಕ್ಕೆ ಬೇಕಾದಷ್ಟು ಇನ್‌ಜಸ್ಟೀಸ್ ಆಗುತ್ತಿದೆ. ಆ ಮೇಲೆ ನೀರಾವರಿಗೆ ೩೦೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಆ ಬಗ್ಗೆ ದೇವೇಗೌಡರು ನಿನ್ನೆ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಸಮಯ ಬಂದಾಗ ಸರಿಯಾದಂತಹ ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ ಅವರಿಗೆ ಕಮಿಟ್‌ಮೆಂಟ್ ಇದೆ. I dont want to criticise him. ಹಣ ಕೊಡುವಂತಹ ಹೆಗಡೆಯವರು ಹಣ ಕೊಡಬೇಕಲ್ಲ ಪಾಪ. ನಿಮ್ಮ ಸಂಪನ್ಮೂಲಗಳು ಏನಿವೆ ? ಆ ಬಗ್ಗೆ ರಾಜ್ಯದ ಜನ ಮಾತನಾಡಿಕೊಳ್ಳುತ್ತಿದ್ದಾರೆ. ನೀವು ಈ ಸಾರಿ ಎಲ್ಲಾ ವಸ್ತುಗಳ ಮೇಲೂ ಜಾಸ್ತಿ ತೆರಿಗೆ ಹಾಕುವವರಿದ್ದೀರಿ. ನಿಮಗೆ ಎಕ್ಸೈಜ್‌ನಲ್ಲಿ ತುಂಬಾ ಟ್ಯಾಕ್ಸ್ ಬರಬಹುದು. ಸಿಎಲ್ ಟೂ, ಸಿಎಲ್ ತ್ರಿ ಮತ್ತು ಸಿಎಲ್ ಫೋರ್ ನಿಲ್ಲಿಸುತ್ತೀರಿ. ೪೦, ೫೦, ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಬಹುದು. ಐ.ಆರ್.ಡಿ.ಪಿ. ಸ್ಕೀಮ್ ಮೇಲೆ ಲೋನ್ ಕೊಡಲಾಗಿದೆ. ಮಾನ್ಯ ಅಧ್ಯಕ್ಷಿಣಿಯವರೇ ತಮ್ಮ ಜಿಲ್ಲೆಯಲ್ಲಿ ಈ ಸಾಲದ ಬಗ್ಗೆ ಏನಾಗಿದೆಯೋ ನನಗೆ ಗೊತ್ತಿಲ್ಲ. ಅನೇಕ ತರಹ ಸ್ಕೀಮ್‌ಗಳನ್ನು ಮಾಡಿ ಎಲ್ಲಾ ಜನರಿಗೆ ಸಾಲಗಳನ್ನು ಕೊಟ್ಟು ರಾಜ್ಯದ ಜನರುಗಳನ್ನು ಮೈಗಳ್ಳರನ್ನಾಗಿ ಮಾಡುವುದಕ್ಕೆ ಇವರು ಹತ್ತಿದ್ದಾರೆ.

I oppose this arrengement of loom by IRDP. ಇವರು ಮಾಡಿರುವ ಸ್ಕೀಮ್‌ಗಳು ಸಾಲದು ಎಂದು ಇದರ ಜೊತೆಗೆ ಸಾಲ ಮೇಳ ಮಾಡಿ ಜನರುಗಳಿಗೆ ಸಾಲವನ್ನು ಹಂಚುತ್ತಿದ್ದಾರೆ. ನನ್ನ ಹತ್ತಿರವೂ ಅನೇಕ ಜನರು ಬಂದು ನಮಗೆ ಯಾವುದಾದರೂ ಸ್ಕೀಮ್‌ನಲ್ಲಿ ಲೋನ್ ಕೊಡಿಸಬೇಕೆಂದು ಕೇಳುತ್ತಾರೆ. ನಾನು ಏನು ಕೆಲಸ ಮಾಡುವುದಕ್ಕೆ ಲೋನ್ ಬೇಕಪ್ಪಾ, ಬಡಿಗೆ ಕೆಲಸ ಮಾಡುತ್ತೀಯಾ, ಕುಂಬಾರ ಕೆಲಸ ಮಾಡುತ್ತೀಯಾ, ಎಮ್ಮೆಗಳನ್ನು ಕಟ್ಟುತ್ತೀಯ ಎಂದರೆ, ನಾನು ಯಾವುದ ದರು ಸರಿ ಮಾಡುತ್ತೇನೆ, ನಮಗೆ ಯಾವುದಾದರು ಸ್ಕೀಮ್‌ನಲ್ಲಾದರೂ ಲೋನ್ ಕೊಡಿಸಿ ಕೊಡಬೇಕೆಂದು ಕೇಳುತ್ತಾರೆ. ಎಮ್ಮೆ ಸಾಕುವುದಕ್ಕೆ ಲೋನ್ ಕೊಟ್ಟರೆ ಒಂದೆರಡು ತಿಂಗಳು ಆದ ಮೇಲೆ ಎಮ್ಮೆ ಸತ್ತುಹೋಯಿತು ಲೋನ್‌ನ್ನು ಮನ್ನಾ ಮಾಡಿ ಎಂದು ತಿರುಗುತ್ತಾರೆ. ಜನಗಳು ಕಷ್ಟಪಟ್ಟು ಕೆಲಸ ಮಾಡುವುದನ್ನು ನಾವು ಕಲಿಸುತ್ತಿಲ್ಲ, ಅವರುಗಳಿಗೆ ನಾನಾ ತರಹ ಸ್ಕೀಮುಗಳ ಮೂಲಕ ಹಣವನ್ನು ಸಾಲವಾಗಿ ಕೊಟ್ಟು ಅವರು ಕೆಲಸ ಮಾಡದ ಹಾಗೆ ಸರ್ಕಾರ ಮಾಡಿಟ್ಟಿದೆ. ಸರ್ಕಾರ ಸಾಲ ಕೊಟ್ಟಿತು ಎಂದಿಟ್ಟುಕೊಳ್ಳೋಣ, ಕೊಟ್ಟ ಸಾಲವನ್ನು ಅವನು ಸರಿಯಾಗಿ ಉಪಯೋಗಿಸಿಕೊಂಡಿದ್ದಾನೆಯೋ ಇಲ್ಲವೇ ಎಂಬುದನ್ನು ಚೆಕ್ ಮಾಡುವುದಕ್ಕೆ ಯಾರೂ ಹೋಗುವುದಿಲ್ಲ. ಈ ರೀತಿ ಸಾವಿರಾರು ಕೋಟಿ ರೂಪಾಯಿಗಳನ್ನು ಸಾಲವಾಗಿ ಕೊಟ್ಟಿದ್ದಾರೆ, ಯಾರಾದರೂ ಇದನ್ನು ಸರಿಯಾಗಿ ಉಪಯೋಗ ಮಾಡಿಕೊಂಡಿದ್ದಾರೆಯೋ ? ನಾವು ಕೊಟ್ಟ ಹಣದಲ್ಲಿ ಎಷ್ಟು ಜನ ಉದ್ಧಾರವಾಗಿದ್ದಾರೆ. ಎಷ್ಟು ಜನ ಹಣವನ್ನು ದುರುಪಯೋಗ ಮಾಡಿಕೊಂಡಿದ್ದಾರೆ ಎಂಬುದನ್ನು ನೋಡುವುದು ಸರ್ಕಾರದ ಕರ್ತವ್ಯವನ್ನು ಸರ್ಕಾರ ಸರಿಯಾಗಿ ಮಾಡಿದೆಯೋ ? ಆ ಮೇಲೆ ಸರ್ಕಾರ ಮಾಡಿರುವ ಆರ್.ಡಿ.ಸ್ಕೀಮ ಬಹಳ ಚೆನ್ನಾಗಿದೆ (ರೂರಲ್‌ಡೆವಲಪ್‌ಮೆಂಟ್ ಸ್ಕೀಮ) ಆದರೆ ಈ ಆರ್.ಡಿ ಸ್ಕೀಮನಲ್ಲಿ ಜನರಿಗೆ ಸರಿಯಾಗಿ ಅನುಕೂಲಗಳು ಸಿಕ್ಕುತ್ತಿಲ್ಲ. ಎಲ್ಲಾ ಬಡ ಜನರಿಗೆ ದವಸ ಧಾನ್ಯಗಳನ್ನು ಕೊಡಬೇಕೆಂದು ಈ ಸ್ಕೀಮ್‌ನಲ್ಲಿ ಹೇಳಿದ್ದೀರಿ. ಎಲ್ಲಾ ದವಸ ಧಾನ್ಯಗಳು ಬಿ.ಡಿ.ಎ ಕಛೇರಿಗಳಿಗೆ ಬರುತ್ತಿವೆ. ಆದರೆ, ಎಲ್ಲಾ ಹಳ್ಳಿಗಳವರು ತಾಲ್ಲೂಕು ಕೇಂದ್ರದ ಬಿ.ಡಿ.ಓ.ಕಛೇರಿಗಳಿಗೆ ಬಂದು ದವಸಧಾನ್ಯಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ, ಈ ಆರ್.ಡಿ. ಸ್ಕೀಮ್‌ನ್ನು ವಿಕೇಂದ್ರಿಕರಣ ಮಾಡಿದರೆ ಒಳ್ಳೆಯದಾಗುತ್ತದೆ ಒಂದೇ ಜಾಗದಲ್ಲಿ ಆಹಾರ ದವಸಗಳನ್ನು ಕೊಡುವ ಬದಲು ಎಲ್ಲಾ ಹಳ್ಳಿಗಳಲ್ಲೂ ಫೇರ್‌ಪ್ರೈಸ್ ಡಿಪೋಗಳನ್ನು ತೆಗೆಯಬೇಕು. ಸರ್ಕಾರದವರು ಹಳ್ಳಿ ಜನರಿಗೆ ಪಾಮೋಲಿನ್ ಎಣ್ಣೆಯನ್ನು ಸಪ್ಲೈ ಮಾಡುತ್ತಾರೆ. ಆದರೆ, ಹಳ್ಳಿಯ ಜನರಿಗೆ ಈ ಎಣ್ಣೆ ಸಿಕ್ಕುವುದೇ ಇಲ್ಲ. ಆಹಾರ ಧಾನ್ಯಗಳು ಸರಿಯಾಗಿ ಹಳ್ಳಿ ಜನರಿಗೆ ಮುಟ್ಟುತ್ತಿದೆಯೋ ಎಂಬುದನ್ನು ನೋಡಿಕೊಳ್ಳುವುದಕ್ಕೆ ಯಾರಾದರೂ ಇದ್ದಾರೆಯೋ ? ಸ್ಕೀಮುಗಳನ್ನು ಮಾಡುವುದು ದೊಡ್ಡದಲ್ಲ ಮಾಡಿರುವ ಸ್ಕೀಮುಗಳಲ್ಲಿ ಸರಿಯಾಗಿ ಜನರಿಗೆ ಅನುಕೂಲ ಸಿಗುತಿದೆಯೋ ಇಲ್ಲವೇ ಎಂಬುದನ್ನು ಆಗಾಗ್ಗೆ ನೋಡುತ್ತಿರಬೇಕು. ಆಮೇಲೆ, ಕೊನೆಯದಾಗಿ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಬಗ್ಗೆ ಒಂದೆರಡು ಮಾತುಗಳನ್ನು ಆಡುತ್ತೇನೆ, ಇವತ್ತು ರೀಜನಲ್ ಇಂಬ್ಯಾಲೆನ್ಸ್ ಕಮಿಟಿಯ ಬಗ್ಗೆ ಮಾತನಾಡುವಾಗ ಈ ವಿಷಯ ಬಂದಿತ್ತು. ೧೯೮೩ನೇ ಇಸವಿಯಲ್ಲಿ ಹೈದರಾಬಾದ್ ಕರ್ನಾಟಕದ ಜನರು ಮಾನ್ಯ ಮುಖ್ಯಮಂತ್ರಿಯವರನ್ನು ಬಸವ ಭವನಕ್ಕೆ ಆಹ್ವಾನಿಸಿ ಸನ್ಮಾನಿಸಿದ್ದರು ಆಗ ಮಾನ್ಯ ರಾಮಕೃಷ್ಣ ಹೆಗಡೆಯವರು ಹೈದರಾಬಾದ್ ಕರ್ನಾಟಕದ ಡೆವಲಪ್‌ಮೆಂಟ್ ಬೋರ್ಡ್ ಆಗಬೇಕು. ಆ ಕಡೆಯ ಜನರು ಪ್ರತಿಯೊಂದು ರಂಗದಲ್ಲೂ ಅಂದರೆ ಶಿಕ್ಷಣ ರಂಗದಲ್ಲಿ ಕೈಗಾರಿಕಾ ರಂಗದಲ್ಲಿ ಸಾಮಾಜಿಕ ರಂಗದಲ್ಲಿ ಮುಂದೆ ಬರಬೇಕು, ಹೈದರಾಬಾದ್ ಕರ್ನಾಟಕವನ್ನು ನೋಡಿದಾಗ, ಇದು ಹೈದರಾಬಾದ್ ಕರ್ನಾಟಕವಲ್ಲ, ಇದು ಬರೀ ಕರ್ನಾಟಕ ಎಂದು ಜನರಿಗೆ ಅನಿಸಬೇಕು, ಆರೀತಿ ಅಭಿವೃದ್ಧಿಯಾಗಬೇಕು ಎಂದು ಹೇಳಿದ್ದರು ಆಗ ನಾವೆಲ್ಲಾ ರಾಮಕೃಷ್ಣ ಹೆಗಡೆಯವರ ಮಾತಿಗೆ ಅಟ್ರ್ಯಾಕ್ಟ್ ಆಗಿದ್ದೆವು. ಕಾಂಗ್ರೆಸ್ ಸರ್ಕಾರ ಇದ್ದಾಗಲೂ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ನ್ನು ಸ್ಥಾಪನೆ ಮಾಡಬೇಕೆಂದು ಈ ಸದನದಲ್ಲಿ ಅನೇಕ ಸಾರಿ ಚರ್ಚೆಯಾಗಿತ್ತು. ಜನತಾ ಸರ್ಕಾರ ಬಂದ ಮೇಲೆ ರಾಮಕೃಷ್ಣ ಹೆಗಡೆಯವರು ಈ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ನ್ನು ಮಾಡುತ್ತಾರೆ ಎಂದು ನಾವು ತಿಳಿದುಕೊಂಡಿದ್ದೆವು. ಆದರೆ, ಇದುವರೆಗೂ ಈ ಡೆವಲಪ್‌ಮೆಂಟ್ ಬೋರ್ಡ್‌ನ್ನು ಏಕೆ ಮಾಡಲಿಲ್ಲ ?

ಇಂತಹ ಹಲವಾರು ಸಮಸ್ಯೆಗಳ ಬಗ್ಗೆ ನಾನು ನೂರಾರು ಸಲ ಹೇಳಿದ್ದೇನೆ. ಬಹುಶಃ ಇಲ್ಲಿ ಹೇಳಿದ್ದೇನೆ, ಭಾಷಣ ಮಾಡಿದ್ದೇನೆ ಎಂದು ಹೇಳುವ ಬದಲು ಹೊಯ್ದುಕೊಂಡಿದ್ದೇನೆ ಎಂದು ಹೇಳಿದರೆ ಸರಿಯಾಗುತ್ತದೆಯೇ ಏನೋ ಎಂದೆನಿಸುತ್ತದೆ.

ಜಿಲ್ಲಾ ಪರಿಷತ್ತಿಗೆಂದು ೧೯೮೮-೮೯ರಲ್ಲಿ ೩೫ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. ಅದು ರಸ್ತೆಗಾಗಿ ಇರಬೇಕು. ನೀವು ಕೊಟ್ಟ ೨೮ ಕೋಟಿ ರೂಪಾಯಿಗಳಲ್ಲಿ ರೋಡ್ ಡೆವಲಪ್‌ಮೆಂಟ್‌ಗೆ ೩೫ ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟರೆ ಅದು ಎಲ್ಲಿಗೆ ಸಾಕಾದೀತು. ಒಂದು ಕಿ.ಮೀ. ರೋಡ್ ಕೆಲಸಕ್ಕೆ ಒಂದು ಲಕ್ಷದ ೨೦ ಸಾವಿರ ರೂಪಾಯಿಗಳು ಬೇಕಾಗುತ್ತವೆ. ಇದರಲ್ಲಿ ಒಂದು ವರ್ಷದಲ್ಲಿ ಜಿಲ್ಲಾ ಪರಿಷತ್‌ನವರು ೨೦ ಕಿ.ಮೀ. ಉದ್ದದ ರಸ್ತೆಯನ್ನು ಮಾತ್ರ ಮಾಡಲಾಗಿದೆ. ಗುಲ್ಬರ್ಗ ಜಿಲ್ಲೆಯಲ್ಲಿ ರಸ್ತೆ ಕೆಲಸವನ್ನು ಮಾಡಬೇಕಾಗಿದೆ. ರಾಯಚೂರು ಗುಲ್ಬರ್ಗ ರಸ್ತೆ ೧೪೦ ಕಿ.ಮೀಟರ್ ಉದ್ದದಷ್ಟು ಇದೆ. ಅಂದರೆ, ಈ ಒಂದೇ ಒಂದು ರೋಡನ್ನು ಪೂರ್ಣಗೊಳಿಸಲು ಮೂರು ಜಿಲ್ಲಾಪರಿಷತ್‌ಗಳ ಅವಧಿ ಮುಗಿಯಬೇಕಾಗುತ್ತದೆ. ಎಂಥ ಪ್ಲಾನ್ ನಿಮ್ಮದು? ಹೀಗೆಲ್ಲಾ ಪ್ಲಾನ್‌ಗಳಿಗೆ ಎಲ್ಲಿಂದ ಹಣವನ್ನು ಕೊಡುತ್ತೀರಿ? ಕೆಲಸ ಇದೆ, ಬಂಡವಾಳ ಇಲ್ಲದ ಪರಿಸ್ಥಿತಿಯಾಗಿದೆ. ಯಾವ ಕೆಲಸವನ್ನೂ ಕೂಡ ತೆಗೆದುಕೊಳ್ಳಲಿಕ್ಕೆ ನಿಮ್ಮಲ್ಲಿ ಹಣ ಇಲ್ಲದ ಒಂದು ಸಂದರ್ಭ ಬಂದಿದೆ.

ಮಾನ್ಯ ಸಚಿವರಾದ ಕಾಂತಾರವರು ಇಲ್ಲಿದ್ದಾರೆ. ಅವರ ಕ್ಷೇತ್ರಕ್ಕೆ ಸಮೀಪದ ಒಂದು ಹಳ್ಳಿ ಹೀರಾಪುರ ಎಂದು ಇದೆ. ಅಸೆಂಬ್ಲಿ ಕ್ಷೇತ್ರದಲ್ಲಿ ನನ್ನ ಕ್ಷೇತ್ರಕ್ಕೆ ಅದು ಬರುತ್ತದೆ. ಗುಲ್ಬರ್ಗದ ಪಕ್ಕದಲ್ಲಿರುವ ಹಳ್ಳಿಯದು. ಅದು ಜಿಲ್ಲಾಪರಿಷತ್‌ಗೂ ಸೇರಿಸಲ್ಪಟ್ಟಿಲ್ಲ ಮುನ್ಸಿಪಲ್ ಕೌನ್ಸಿಲ್‌ಗೂ ಸೇರಿಸಲ್ಪಟ್ಟಿಲ್ಲ. ಅಲ್ಲಿ ಸುಮಾರು ನಾಲ್ಕು ಸಾವಿರ ಜನಸಂಖ್ಯೆ ಇದೆ. ಅವರಿಗೆ ಒಂದು ಸ್ಕೂಲ್ ಬಿಲ್ಡಿಂಗ್ ಕಟ್ಟಬೇಕಾಗಿದೆ ಎಂದು ಬಂದಿದೆ. ಜಿಲ್ಲಾಪರಿಷತ್‌ನವರನ್ನು ಕೇಳಿದರೆ ಅವರು ನಮಗೆ ಇದು ಬರುವುದಿಲ್ಲ ಎಂದು ಹೇಳುತ್ತಾರೆ. ಕಾರ್ಪೊರೇಷನ್‌ನವರು ನಮ್ಮಲ್ಲಿ ಹಣ ಇಲ್ಲ ಎಂದು ಹೇಳುತ್ತಾರೆ. ಇದೇ ಸಮಸ್ಯೆಯು ಕುಡಿಯುವ ನೀರಿನ ವಿಚಾರದಲ್ಲಿಯೂ ಬಂದಿದೆ. ಆಗಲೂ ಹೀಗೆ ಇಬ್ಬರೂ ನಮಗೆ ಸಂಬಂಧಪಟ್ಟಿಲ್ಲ ಎಂದು ಜಾರಿಕೊಳ್ಳುತ್ತಿದ್ದಾರೆ. ಈ ವಿಚಾರವನ್ನು ಮಾನ್ಯ ಕಾಂತಾರವರಿಗೆ ಕೂಡ ತಿಳಿಸಿದ್ದೇನೆ. ಅವರು ಮಾನ್ಯ ಮಂತ್ರಿಯವರಿಗೆ ಒಂದು ಲೆಟರ್ ಬರೆದರು. ಇದನ್ನು ಗೆಜೆಟ್ ನೋಟಿಫಿಕೇಶನ್ ಮಾಡಿ ರೂರಲ್‌ಗೆ ಅಥವಾ ಮುನ್ಸಿಪಲ್ ಕಾರ್ಪೊರೇಶನ್‌ಗೆ ಅಟ್ಯಾಚ್ ಮಾಡಿ ಎಂದು ಹೇಳಿದರು. ಹೀಗೆ ಅನೇಕ ಸಮಸ್ಯೆಗಳು ನಮ್ಮ ಎದುರು ಇವೆ. ಇವೆಲ್ಲವನ್ನೂ ನೋಡಿದಾಗ ನನಗನಿಸುತ್ತದೆ ತಮ್ಮ ಜನತಾ ಸರ್ಕಾರ ಈ ರಾಜ್ಯದಲ್ಲಿ ಆಡಳಿತಕ್ಕೆ ಬಂದನಂತರ "ಹೊಸ ವಾತಾವರಣ ಬಂದಿದೆ. ಆಶಾಕಿರಣ ಮೂಡಿದೆ, ಕಾರ್ಮಿಕರ ರಂಗದಲ್ಲಿ ಸುಧಾರಣೆ ಆಗಿದೆ, ಕನ್ನಡದ ವಿಚಾರದಲ್ಲಿ ಬಹಳ ಮುನ್ನಡೆದಿದ್ದೇವೆ, ಇತ್ಯಾದಿಯಾಗಿ ಹೇಳಿಕೊಂಡಿದ್ದೀರಿ. ಆದರೆ ನನಗಂತೂ ಅದಾವುದೂ ಕಾಣುತ್ತಿಲ್ಲ. ಅಷ್ಟೇ ಅಲ್ಲ ನನಗೆ ಒಂದು ರೀತಿಯ ಅನುಮಾನವೂ ಉಂಟಾಗಿದೆ. ಆದ್ದರಿಂದ ಹೀಗೆ ನಿಮ್ಮ ಬೆನ್ನನ್ನು ನೀವೇ ತಟ್ಟಿಕೊಳ್ಳುವುದು ಸರಿಯಲ್ಲ.

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ನಾವು ನಮ್ಮ ಪರಿಷತ್ ಮುಖಾಂತರ ಒಂದು ಸಾವಿರ ಸ್ಕೂಲ್ ಬಿಲ್ಡಿಂಗನ್ನು ಮಾಡುತ್ತಾ ಇದ್ದೇವೆ. ಮುನ್ಸಿಪಾಲಿಟಿಗಳಿಗೆ ಅದನ್ನು ಕೊಡುತ್ತಾ ಇದ್ದೇವೆ.

ಶ್ರೀ ಕೆ.ಬಿ. ಶಾಣಪ್ಪ.—ನನಗೆ ಸರಿಯಾಗಿ ಜ್ಞಾಪಕ ಇದೆ. ೧೯೮೫ರಲ್ಲಿಯೂ ಕೂಡ ಇಲ್ಲಿ ಹೇಳಿದ್ದೇನೆ. ಮಾನ್ಯ ಉಗ್ರನರಸಿಂಹಪ್ಪನವರು ಪಕ್ಷಾಂತರ ಮಾಡಿದಾಗ ಅವರ ಕ್ಷೇತ್ರದಲ್ಲಿ ಆರು ಕೋಟಿ ರೂಪಾಯಿಗಳ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ ಎಂದು ಹೇಳಿದ್ದೇನೆ.

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ನನ್ನ ಕ್ಷೇತ್ರದಲ್ಲಿ ೩೦ ಕೋಟಿ ರೂಪಾಯಿಗಳ ಕೆಲಸಕಾರ್ಯಗಳನ್ನು ಮಾಡಿದ್ದಾರೆ.

ಶ್ರೀ ಕೆ. ಬಿ. ಶಾಣಪ್ಪ.—ಜನತಾ ಸದಸ್ಯರ ಕ್ಷೇತ್ರದಲ್ಲಿ ಆಗಿರಬಹುದು. ನಿಮ್ಮನ್ನು ಹೆಗಡೆಯವರು ತಮ್ಮ ಸಂಗಡ ಹಿಡಿದಿಟ್ಟುಕೊಳ್ಳಬೇಕೆನ್ನುವ ಉದ್ದೇಶದಿಂದ ಹಣವನ್ನು ಖರ್ಚು ಮಾಡಿರಬಹುದು. ಇದೆಲ್ಲಾ ಒಂದು ತರಹದಲ್ಲಿ ರಾಜಕೀಯದಲ್ಲಿ ಗಿಮಿಕ್ಸ್ ಎಂದು ಹೇಳಬಹುದು. ನಮ್ಮ ಕ್ಷೇತ್ರದಲ್ಲಿಯೂ ಕೂಡ ೧೯೮೩-೮೪ರಲ್ಲಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಈಗ ಎತ್ತು ಏರಿಗೆ ಎಳೆದರೆ, ಕೋಣ ಕೆರೆಗೆ ಎಳೆಯಿತು ಎನ್ನುವ ಪರಿಸ್ಥಿತಿ ಇದೆ. ಅದನ್ನು ಸುಧಾರಿಸಿಕೊಂಡು ಇನ್ನಾದರೂ ೧೯೮೮-೮೯ರ ಬಜೆಟ್‌ನ ಹೊತ್ತಿಗೆ ಸರಿಯಾದ ಬಜೆಟ್ ಮಾಡುವ ವ್ಯವಸ್ಥೆ ಮಾಡಿಕೊಳ್ಳಿ. ಅದೂ ಒಂದು

ವೇಳೆ ನೀವೇ ಅಧಿಕಾರದಲ್ಲಿ ಇದ್ದರೆ ಮಾತ್ರ. ಒಟ್ಟಿನಲ್ಲಿ ರಾಜ್ಯದ ಜನತೆಯ ಹಿತದೃಷ್ಟಿಯನ್ನು ಮುಖ್ಯ ಎನ್ನುವುದನ್ನು ತಾವು ಮನಗಾಣಬೇಕು.

ಈ ಎಲ್ಲಾ ವಿಷಯಗಳನ್ನು ತಮ್ಮ ಗಮನದಲ್ಲಿಟ್ಟುಕೊಂಡು, ರಾಜ್ಯಪಾಲರ ಭಾಷಣದ ಮೇಲೆ ನಾನು ಏನು ಮಾತನಾಡಿದ್ದೇನೆ, ಅದರಲ್ಲಿಯೂ ನನಗೆ ಕೊಟ್ಟ ಅಧಿಕಾರದ ಸಮಯದ ಬಗ್ಗೆ ತಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ನಮ್ಮ ಮಾನ್ಯ ವಿರೋಧ ಪಕ್ಷದ ಸದಸ್ಯರು ಇದ್ದಿದ್ದರೆ ನನಗೆ ೫ ನಿಮಿಷಗಳ ಕಾಲಾವಕಾಶ ಮಾತ್ರ ಸಿಗುತ್ತಾ ಇತ್ತು, ಆದರೆ ಕಾಲಾವಕಾಶ ಸಿಕ್ಕಿದ್ದರಲ್ಲಿ ನಾನು ಆಡಿದ ಅಂಶಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯವರ ಗಮನಕ್ಕೆ ತಂದು ಲೋಪದೋಷಗಳನ್ನು ನಿವಾರಿಸಿದಲ್ಲಿ ನಮ್ಮ ರಾಜ್ಯದ ಜನತೆಗೆ ಉಪಕಾರ ಮಾಡಿದ ಹಾಗೆ ಆಗುತ್ತದೆ ಎಂದು ಹೇಳಬಯಸುತ್ತೇನೆ.

೨-೩೦ ಪಿ.ಎಂ.

† ಶ್ರೀ ಸಿ. ಎನ್. ಭಾಸ್ಕರಪ್ಪ (ಬೆಳ್ಳಾವಿ).—ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನು ಉದ್ದೇಶಿಸಿ ಏನು ಭಾಷಣ ಮಾಡಿದ್ದಾರೆ ಅದನ್ನು ಸ್ವಾಗತಿಸುತ್ತೇನೆ ಮತ್ತು ಅವರನ್ನು ನಾನು ಅಭಿನಂದಿಸುತ್ತೇನೆ. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡುತ್ತಾ ನಾವು ೪೦ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತಿದ್ದೇವೆಂದು ಹೇಳುತ್ತಾ ಆ ಸಂದರ್ಭದಲ್ಲಿ ನಮ್ಮ ಜವಾಬ್ದಾರಿಯನ್ನು ನೆನಪು ಮಾಡಿಕೊಟ್ಟಿದ್ದಾರೆ. ೧೯೪೭ರಲ್ಲಿ ನಾವು ಸ್ವಾತಂತ್ರ್ಯವನ್ನು ಪಡೆದೆವು ಸ್ವಾತಂತ್ರ್ಯವನ್ನು ಪಡೆದು ೪೦ ವರ್ಷ ಕಳೆದರೂ ಕೂಡ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂತಹ ಜನತೆಯ ಬವಣೆಯನ್ನು ಹಾಗೂ ಗ್ರಾಮಂದಲ್ಲಿ ಆಗಬೇಕಾದಂತಹ ಅಭಿವೃದ್ಧಿ ಕಾರ್ಯಗಳನ್ನು ನಾವು ನಮ್ಮ ನಿರೀಕ್ಷಣೆಯ ಮಟ್ಟಕ್ಕೆ ಮಾಡಿಲ್ಲ. ಇದಕ್ಕೆ ಸಾರ್ವಜನಿಕ ಕ್ಷೇತ್ರದಲ್ಲಿರತಕ್ಕಂತಹ ರಾಜಕಾರಣಿಗಳು ಜವಾಬ್ದಾರರೆಂದು ನಾನು ತಿಳಿದುಕೊಂಡಿದ್ದೇನೆ. ಗ್ರಾಮಾಂತರ ಪ್ರದೇಶವನ್ನು ಅಭಿವೃದ್ಧಿಗೆ ತರುವುದಕ್ಕೆ ಸರಿಯಾದ ಪ್ರಯತ್ನ ಮಾಡದೇ ಇದ್ದುದರಿಂದಾಗಿ ಇವತ್ತು ಆ ಜನತೆ ಕತ್ತಲಿನಲ್ಲಿದ್ದಾರೆಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ೧೯೮೩ರಲ್ಲಿ ಕರ್ನಾಟಕ ರಾಜ್ಯದಲ್ಲಿ ಹೊಸ ಪಕ್ಷ ಒಂದು ಹೆಗಡೆಯವರ ನೇತೃತ್ವದಲ್ಲಿ ಅಧಿಕಾರಕ್ಕೆ ಬಂತು. ಆ ಕೂಡಲೇ ನಮ್ಮ ಆದ್ಯತೆಯನ್ನು ಗ್ರಾಮಾಂತರ ಪ್ರದೇಶದಲ್ಲಿರತಕ್ಕಂತಹ ಜನರಿಗೆ ಉದಾರವಾಗಿ ಸಹಾಯ ಮಾಡತಕ್ಕಂಥಾದ್ದರ ಬಗ್ಗೆ ನೇರವಾದ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿದ್ದರು. ಇದರಿಂದಾಗಿ ಜನತೆಯ ಸಮಸ್ಯೆಯ ಕಡೆಗೆ ನಾವು ಗಮನವನ್ನು ಕೊಟ್ಟಿದ್ದೇವೆಂದು ನಾನಾದರೂ ಕೂಡ ಭಾವಿಸಿಕೊಂಡಿದ್ದೇನೆ. ಯಾವುದೇ ಪಕ್ಷ, ಯಾವುದೇ ರಾಜಕಾರಣಿಗಳು ಮಾತನಾಡುವಾಗ ರೈತನನ್ನು ಬಂಡವಾಳವನ್ನಾಗಿಟ್ಟುಕೊಂಡು ನಮ್ಮ ಭಾಷಣಗಳನ್ನು ಮಾಡುತ್ತಿದ್ದೇವೆ. ರೈತ ಇವತ್ತು ಭಾಷಣದ ವಸ್ತುವಾಗಿದ್ದಾನೆ ಎಂದು ಹೇಳಿದರೆ ತಪ್ಪಾಗಲಾರದು ಎಂದು ನನಗನಿಸುತ್ತದೆ ಅಂತಹ ಪರಿಸ್ಥಿತಿಗೆ ರೈತನನ್ನು ಇವತ್ತು ನಾವು ತಂದಿದ್ದೇವೆ. ಹಿಂದೆ ಇದ್ದಂತಹ ಗುಂಡೂರಾಯರ ಸರ್ಕಾರ ರೈತರ ಸಮಸ್ಯೆಗಳನ್ನು ಬಗೆಹರಿಸುತ್ತೇವೆಂದು ಹೇಳಿ, ರೈತರ ಮೇಲಿನ ಎಲ್ಲಾ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿ ಅರ್ಜಿಗಳನ್ನು ಕರೆದರು, ಇಡೀ ರಾಜ್ಯದಲ್ಲಿ ಲಕ್ಷಾಂತರ ಅರ್ಜಿಗಳು ಬಂದವು. ತುಮಕೂರು ಜಿಲ್ಲೆಯಿಂದ ೫೦-೬೫ ಸಾವಿರ ಅರ್ಜಿಗಳು ಬಂದವು ಆದರೆ ಒಂದು ಜಿಲ್ಲೆಯಲ್ಲಿ ೫-೧೦ ಅರ್ಜಿಗಳಿಗೂ ಕೂಡ ಅವರು ಸಹಾಯ ಮಾಡುವುದಕ್ಕೆ ಆಗಲಿಲ್ಲ. ಆದರೆ ಜನತಾ ಸರಕಾರ ಬಂದ ಮೇಲೆ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಮಾನ್ಯ ಜಾಲಪ್ಪನವರು ಸಹಕಾರ ಸಚಿವರಾಗಿದ್ದಾಗ ಒಂದೇ ದಿನದಲ್ಲಿ ಯಾವುದೇ ಅರ್ಜಿಯನ್ನು ಕರೆಯದೆ ರೈತ ತೆಗೆದುಕೊಂಡಿದ್ದಂತಹ ಸಾಲಕ್ಕೆ ಆದಂತಹ ಬಡ್ಡಿ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿದ್ದಾರೆ, ೩ ಕೋಟಿ ರೂಪಾಯಿಗಳಷ್ಟು ಸಾಲವನ್ನು ಮನ್ನಾ ಮಾಡಿ ರೈತರ ವಿಶ್ವಾಸವನ್ನು ನಾವು ಗಳಿಸಿಕೊಂಡಿದ್ದೇವೆ. ರೈತನಿಗೆ ಅನುಕೂಲ ಮಾಡಿಕೊಡಬೇಕು ಆತನ ಹೊರೆಯನ್ನು ಕಡಿಮೆ ಮಾಡಬೇಕೆಂಬ ದೃಷ್ಟಿಯಿಂದ ಅದನ್ನು ವಜಾ ಮಾಡಿದ್ದೇವೆ. ಆದರೆ ರೈತನಿಗೆ ಕೇವಲ ಸಾಲವನ್ನು ಮನ್ನಾ ಮಾಡುವುದರ ಮುಖಾಂತರ ಬಡ್ಡಿಯನ್ನು ಮನ್ನಾ ಮಾಡುವುದರ ಮುಖಾಂತರ ರೈತನ ಅಭ್ಯುದಯ ಸಾಧ್ಯವೇ ಎಂಬುದನ್ನು ಆಲೋಚನೆ ಮಾಡಬೇಕು. ಇವತ್ತು ಏನು ಸಹಕಾರ ಸಂಘಗಳು ರಾಜ್ಯದಲ್ಲಿ ಇವೆ ಆ ಸಂಘಗಳಲ್ಲಿ ಹಿಂದೆ ನೂರಕ್ಕೆ ೨೦-೩೦ ರಷ್ಟು ಜನ ಸದಸ್ಯರಿಗೆ ಸಾಲ ಕೊಡುವ ಸ್ಥಿತಿಯಲ್ಲಿ ಇರಲಿಲ್ಲ. ಆದರೆ ಇವತ್ತು ಅದನ್ನು ಹೋಗಲಾಡಿಸಿ ನಮ್ಮ ರೈತರನ್ನು ಸಹಕಾರ ಸಂಘದ ಕಕ್ಷೆಯೊಳಗೆ ತೆಗೆದುಕೊಂಡು ಬಂದು ನೂರಕ್ಕೆ ೮೦ರಷ್ಟು ರೈತರಿಗೆ ಬೇಕಾದಂತಹ ಎಲ್ಲಾ ರೀತಿಯ ಸಾಲವನ್ನು ಕೊಡತಕ್ಕಂತಹ ವ್ಯವಸ್ಥೆ

ಯನ್ನು ಮಾಡಬೇಕಾಗಿದೆ. ಕೇವಲ ಸಾಲವನ್ನು ವಜಾ ಮಾಡುವುದರಿಂದ, ಬಡ್ಡಿಯನ್ನು ವಜಾ ಮಾಡುವುದರಿಂದ ರೈತರಿಗೆ ಪೂರ್ಣ ಸೌಲಭ್ಯ ಸಿಗುವುದಿಲ್ಲ. ಸಣ್ಣ ರೈತ ತೆಗೆದುಕೊಂಡ ಸಾಲವನ್ನು ಮರು ಪಾವತಿ ಮಾಡಿದ್ದಾನೆ ಆದರೆ ಬಡ್ಡಿಯನ್ನು ಕೂಡ ಮರುಪಾವತಿ ಮಾಡಿದ್ದಾನೆ. ಆದರೆ ಹೆಚ್ಚು ಸಾಲ ವನ್ನು ಪಡೆದ ಶ್ರೀಮಂತ ರೈತರು ಯಾರಿದ್ದಾರೆ ಅವರು ಸಾಲವನ್ನು ಮರುಪಾವತಿ ಮಾಡಿಲ್ಲ, ಬಡ್ಡಿ ಯನ್ನು ಕೂಡ ಮರುಪಾವತಿ ಮಾಡಿಲ್ಲ. ಈ ರೀತಿ ರೈತರಿಗೆ ಬೇಕಾದಂಥ ರೈತರ ಅಭ್ಯುದಯಕ್ಕೆ ಸೌಲಭ್ಯ ಗಳನ್ನು ಕೊಡತಕ್ಕಂತಹ ವಿಚಾರವನ್ನು ಇನ್ನು ಮುಂದೆಯೂ ಕೂಡ ಈ ಸರ್ಕಾರ ಇಟ್ಟುಕೊಳ್ಳಬೇಕು ಇದನ್ನು ಪೂರ್ಣವಾಗಿ ವಜಾ ಮಾಡಿದಾಗ ಕೇವಲ ಕೆಲವು ರೈತರಿಗೆ ಮಾತ್ರ ಅನುಕೂಲವಾಗುತ್ತದೆ. ೧೦೦ಕ್ಕೆ ೨೦–೨೫ರಷ್ಟು ರೈತರಿಗೆ ಅನುಕೂಲವಾಗಬಹುದು. ೮೦ರಷ್ಟು ರೈತರಿಗೆ ಸಹಾಯ ಲಭ್ಯ ವಾಗುವುದಿಲ್ಲ. ಅದಕ್ಕೋಸ್ಕರ ಸಾಲ ಮತು ಬಡ್ಡಿ, ಸುಸ್ತಿ ಬಡ್ಡಿಯನ್ನು ಏನು ಮನ್ನಾ ಮಾಡ ಬೇಕೆಂದಿದ್ದೀರಿ ಅದನ್ನು ಮಾರ್ಚ್ ಒಳಗೆ ಮಾಡಿದರೆ ರೈತನು ಅಸಲನ್ನು ಕಟ್ಟುವುದಕ್ಕೆ ಅನುಕೂಲ ವಾಗುತ್ತದೆ.

ಸಹಕಾರ ಸಂಘಕ್ಕೆ ಮರು ಪಾವತಿಯಾಗುವುದಕ್ಕೂ ಸಹಾ ಈ ಸಂದರ್ಭದಲ್ಲಿ ಅನುಕೂಲವಾಗುತ್ತದೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಈ ಅನುಕೂಲವನ್ನು ರಾಷ್ಟ್ರದಲ್ಲೇ ಪ್ರಥಮವಾಗಿ ತಂದದ್ದು ಎಂದರೆ ಕರ್ನಾಟಕದವರು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಕರ್ನಾಟಕ ರಾಜ್ಯದಲ್ಲಿರ ತಕ್ಕಂಥ ಜನರಿಗೆ ನಮ್ಮ ಸರ್ಕಾರ ಕೊಟ್ಟಂಥ ಸೌಲಭ್ಯ ಈ ರಾಷ್ಟ್ರದಲ್ಲಿ ಇನ್ನಾವುದೇ ಸರ್ಕಾರ ಕೊಟ್ಟಿಲ್ಲ ಎಂದು ಹೇಳಿದರೆ ತಪ್ಪೆನಿಸುವುದಿಲ್ಲ. ರೈತನಿಗೆ ಕೊಡತಕ್ಕಂಥ ಸಾಲ ಏನು ಇದೆ. ಆ ಸಾಲಕ್ಕೆ ನಾವು ವಿಧಿಸತಕ್ಕಂಥದ್ದು ಕೇವಲ ಏಳು ರೂಪಾಯಿ ಬಡ್ಡಿ ಮಾತ್ರ. ಇಷ್ಟು ಕಡಿಮೆ ಬಡ್ಡಿ ಈ ರಾಷ್ಟ್ರದಲ್ಲಿ ಎಲ್ಲೂ ಸಿಗುವುದಿಲ್ಲ.

ಶ್ರೀ ಕೆ.ಬಿ. ಶಾಣಪ್ಪ.—ಅಧ್ಯಕ್ಷಿಣಿಯವರೇ, ಕೋರಂ ಇಲ್ಲ, ದಯಮಾಡಿ ಸಭೆಯನ್ನು ಅಡ್ಜರ್ನ್ ಮಾಡಿಬಿಡಿ. There is no charm is discussing the subject when there is no quorum. How can we conduct the business ?

ಶ್ರೀ ಯು. ಭೂಪತಿ.—ಈ ಚರ್ಚೆ ನಡೆಯತಕ್ಕಂಥದ್ದು ಬಹಳ ಪ್ರಾಮುಖ್ಯವಾದುದು. ಇದು ಬಹಳ ಪ್ರಾಮುಖ್ಯವಾದಂಥ ವಿಷಯ. ಇಷ್ಟೊಂದು ಮಹತ್ವದಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯಬೇಕಾದರೆ ಸಭೆಯನ್ನು ತಾವು ದಯಮಾಡಿ ಮುಂದಕ್ಕೆ ಹಾಕಿ ಮಾನ್ಯ ಮಂತ್ರಿಗಳ ಕತ್ತು ಹಿಡಿದು ಕೂಡಿಸಿ ನಾವು ಭಾಷಣ ಮಾಡುವುದಕ್ಕಾಗುವುದಿಲ್ಲ. ಇದು ಚೆನ್ನಾಗಿರುವುದಿಲ್ಲ. ೩೪ ಜನ ಮಂತ್ರಿಗಳು ಇದ್ದಾರೆ, ಅವರಿಗೆ ಅಂಥ ಕೆಲಸ ಏನು ಇದೆ. ಆದ್ದರಿಂದ ನಿಮಿಷ ಸಭೆಯನ್ನು ಮುಂದೂಡಿ ಮತ್ತೆ ಕರೆಯಿರಿ.

ಛೇರ್ಮನ್.—ಅವರುಗಳು ಊಟಕ್ಕೆ ಹೋಗಿದ್ದಾರೆ, ಬಂದುಬಿಡುತ್ತಾರೆ...

ಶ್ರೀ ಯು. ಭೂಪತಿ.—೩೪ ಜನರೂ ಒಂದೇ ಸಾರಿಗೆ ಊಟಕ್ಕೆ ಹೋಗಿದ್ದಾರೆಯೇ ?

ಶ್ರೀ ಕೆ.ಬಿ. ಶಾಣಪ್ಪ.—ಅಧ್ಯಕ್ಷಿಣಿಯವರೇ, ಹತ್ತು ನಿಮಿಷ ಸಭೆಯನ್ನು ಮುಂದೂಡಿ. ಕೋರಂ ಇಲ್ಲದೇ ಹೌಸ್ ನಡೆಯುವುದು ಚೆನ್ನಾಗಿರುವುದಿಲ್ಲ. ಕೋರಂ ಇಲ್ಲದೇ ಈ ಮನೆ ನಡೆಯಕೂಡದು. ೨೩ ಜನ ಸದಸ್ಯರಾದರೂ ಬೇಕು. Thaq is left to you It is our sincere request to you

ಛೇರ್ಮನ್.—ಕೌನ್ಸಿಲ್‌ಗೆ ಹೋಗಿದ್ದಾರೆ, ಬರುತ್ತಾರೆ,

ಶ್ರೀ ಯು. ಭೂಪತಿ.—ದಯಮಾಡಿ ಹತ್ತು ನಿಮಿಷ ಸಭೆಯನ್ನು ಅಡ್ಜರ್ನ್ ಮಾಡಿ

ಛೇರ್ಮನ್,—ಈಗ ಬಂದಿದ್ದಾರೆ, ತಾವು ಕುಳಿತುಕೊಳ್ಳಿ ಈಗ ಕೋರಂ ಇದೆ, ಭಾಸ್ಕರಪ್ಪ ನವರೇ ತಾವು ಮಾತನಾಡಿ.

ಶ್ರೀ ಸಿ.ಎನ್. ಭಾಸ್ಕರಪ್ಪ —ಈ ರಾಜ್ಯದಲ್ಲಿರತಕ್ಕಂಥ ರೈತರಿಗೆ ವ್ಯವಸಾಯದ ಅಭಿವೃದ್ಧಿಗೆ ಕೊಡತಕ್ಕಂಥ ಸಾಲಕ್ಕೆ ಕೇವಲ ಏಳು ರೂಪಾಯಿ ಬಡ್ಡಿ. ಇಡೀ ರಾಷ್ಟ್ರದಲ್ಲಿ ಇಷ್ಟು ಕಡಿಮೆ ಬಡ್ಡಿಯಲ್ಲಿ ಯಾರೂ ಸಾಲ ಕೊಡುವುದಿಲ್ಲ. ರೈತ ಈ ರೀತಿ ಸಾಲ ಪಡೆದುಕೊಂಡು ಅವನಿಗೆ ಬರತಕ್ಕಂಥ ಉತ್ಪನ್ನ ಏನು ಇದೆ, ಅದು ಕಡಲೆಕಾಯಿ ಇರಬಹುದು, ಅದನ್ನು ಅವನು ಸಹಕಾರ ಸಂಘದಲ್ಲಿ ಮಾರಿದಾಗ ಅವರು

ಸರ್ಕಾರ ೫ ರೂಪಾಯಿ ಪ್ರೋತ್ಸಾಹ ಧನವನ್ನು ಅವರಿಗೆ ಕೊಡುತ್ತಿದ್ದಾರೆ. ನಾವು ಈ ರೀತಿ ರೈತರಿಗೆ ಹೆಚ್ಚಿನ ಸೌಲಭ್ಯವನ್ನು ಕೊಡುತ್ತಿದ್ದೇವೆ ಎಂದರೆ ತಪ್ಪಾಗಲಾರದು. ಅದಕ್ಕಾಗಿ ನಾವು ಹೆಚ್ಚು ಹೆಚ್ಚು ರೈತರನ್ನು ಸಹಕಾರ ಸಂಘದ ಕಕ್ಷೆಯೊಳಗೆ ತಂದು ಅವರಿಗೆ ಇನ್ನೂ ಹೆಚ್ಚು ಹೆಚ್ಚು ಸಹಾಯವನ್ನು ನೀಡಿದಾಗ ಮಾತ್ರ ಪ್ರಾಮಾಣಿಕವಾಗಿ ಸಹಾಯ ಮಾಡಿದಂತಾಗುತ್ತದೆ ಎಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಇನ್ನು ರೈತರಿಗೆ ಇರತಕ್ಕಂಥ ಅನೇಕ ಸಮಸ್ಯೆಗಳನ್ನು ಬಗೆಹರಿಸುವ ದಿಕ್ಕಿನಲ್ಲಿ ಪ್ರಾಮಾಣಿಕವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇವತ್ತು ಹೆಚ್ಚಿನ ಸಮಸ್ಯೆ ಗ್ರಾಮಾಂತರ ಪ್ರದೇಶದಲ್ಲಿರುವ ರೈತರಿಗೆ ವ್ಯವಸಾಯ ಮಾಡಬೇಕಾದರೆ ಬಾವಿಯಲ್ಲಿ ನೀರನ್ನು ತೆಗೆಯಬೇಕಾದರೆ ಅವನಿಗೆ ವಿದ್ಯುತ್ ಅವಶ್ಯಕವಾಗಿ ಬೇಕಾಗುತ್ತದೆ, ಆದ್ದರಿಂದ ಇದರ ಕಡೆ ಮಾನ್ಯ ಸಚಿವರು ಗಮನವನ್ನು ಕೊಡಬೇಕು ಎಂದು ನಾನು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ. ಈ ಸಹಕಾರ ಸಂಘಗಳಲ್ಲಿರತಕ್ಕಂಥಹ ಸಮಸ್ಯೆಗಳನ್ನು ಬಗೆ ಹರಿಸುವ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಸರ್ಕಾರದಿಂದ ನಡೆದಿದೆ. ಯಾವುದೇ ರೀತಿಯ ಸಾಲವನ್ನು ಸಹಾ ಇವೊತ್ತು ಸಹಕಾರ ಸಂಘಗಳ ಮೂಲಕ ಕೊಡತಕ್ಕಂಥ ವ್ಯವಸ್ಥೆ ಇದೆ. ನನ್ನ ವಿರೋಧಿ ಮಿತ್ರರು ಹಿಂದೆ ಅಧಿಕಾರದಲ್ಲಿದ್ದವರು ಹಿಂದೆ ಕಾಂಗ್ರೆಸ್‌ನವರು ಅನೇಕ ವಿಷಯಗಳನ್ನು ರೈತರ ಬಗ್ಗೆ ಮಾತನಾಡಿ, ಅನೇಕ ಸಾಲಮೇಳಗಳನ್ನು ನಡೆಸಿದರು. ಸಾಲಮೇಳಗಳನ್ನು ನಡೆಸಿದರೂ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರ ಸಮಸ್ಯೆಗಳನ್ನು ಬಗೆಹರಿಸಿಲ್ಲ. ಒಂದು ಉದಾಹರಣೆ ಹೇಳುವುದಾದರೆ ಅವರಿಗೆ ರೈತರ ಬಗ್ಗೆ ಕಳಕಳಿ ಇದ್ದರೂ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತನ ಸಮಸ್ಯೆಯನ್ನು ಬಗೆಹರಿಸಿಲ್ಲ. ನನ್ನ ಜಿಲ್ಲೆಯಲ್ಲಿ ೭೩ ಸಹಕಾರ ಸಂಘಗಳು ಇದ್ದು ಉತ್ತಮ ಸ್ಥಿತಿಯಲ್ಲಿ ಕೆಲಸ ಮಾಡುತ್ತಿವೆ ಈ ೭೩ ಸಹಕಾರ ಸಂಘಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳೂ ತೆಗೆದುಕೊಂಡು ಅಲ್ಲಿ ಯಾವ ಒಂದು ಪರಿಸ್ಥಿತಿ ಬಂದಿದೆ ಎಂದರೆ ಅದನ್ನು ಹೇಳಲಾಗುವುದಿಲ್ಲ. ರೈತರ ಸೇವೆ ಮಾಡುತ್ತೇವೆಂದು ಹೇಳುತ್ತಿದ್ದಂಥ ಸಹಕಾರ ಸಂಘಗಳು ರೈತರಿಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳುತ್ತಿದ್ದಂಥ ಸಂಘಗಳು ಇವೊತ್ತು ಆ ಬಾಗಿಲು ಹಾಕುವ ಪರಿಸ್ಥಿತಿಗೆ ಬಂದಿವೆ ಅವರುಗಳು ಸಾಲದ ಹಣವನ್ನು ವಸೂಲು ಮಾಡಲು ವಿಮುಖರಾಗಿದ್ದಾರೆ. ಈ ೭೩ ಸಹಕಾರ ಸಂಘಗಳು ರಾಷ್ಟ್ರೀಕೃತ ಬ್ಯಾಂಕುಗಳತೆ ಆಶ್ರಯದೊಂದಿಗೆ ಇವೊತ್ತು ರೈತನಿಗೆ ಸಹಾಯ ಮಾಡದೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಿಂದ ಸಹಾಯಧನ ಪಡೆಯುವಂತಹ ಪರಿಸ್ಥಿತಿ ಬಂದಿದೆ. ಸರ್ಕಾರದವರು ಸಹಕಾರ ಸಂಘಗಳ ಮೂಲಕ ರೈತರಿಗೆ ಸಾಲ ಕೊಡಿಸುವ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ ಕೇಂದ್ರ ಸರ್ಕಾರದಲ್ಲಿ ನಮ್ಮ ವಿರೋಧಿ ಮಿತ್ರರ ಸರಕಾರ ಇದೆ. ಇವೊತ್ತು ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ರೈತರಿಗೆ ಸಹಾಯ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಅನೇಕ ರೈತರುಗಳಿಗೆ ಸಹಾಯ ಕೊಡಬೇಕು ಎಂದು ಎಲ್ಲಾ ಯೋಜನೆಗಳನ್ನು ಸಹಕಾರ ಸಂಘಗಳಲ್ಲಿ ವ್ಯವಸ್ಥೆ ಮಾಡಿದ್ದೇವೆ. ಇವೊತ್ತು ಸಹಕಾರ ಸಂಘಗಳಲ್ಲಿ ನಡೆಯುತಕ್ಕ ವ್ಯವಸ್ಥೆ ಚೆನ್ನಾಗಿ ಇದೆ. ನಮ್ಮ ಸರ್ಕಾರ ೨ ರೂಪಾಯಿಗೆ ಒಂದು ಕೆ.ಜಿ. ಅಕ್ಕಿ. ಬಟ್ಟೆ ಇತ್ಯಾದಿಗಳನ್ನು ರೈತರುಗಳಿಗೆ ಒದಗಿಸುವ ವ್ಯವಸ್ಥೆ ಮಾಡಿದೆ ನಾನು ತಮ್ಮ ಮೂಲಕ ಒಂದು ಒತ್ತಾಯವನ್ನು ಸರ್ಕಾರಕ್ಕೆ ಮಾಡಬಯಸುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು ಪ್ರಸ್ತಾಪವನ್ನು ಮಾಡಲಾಗಿದೆ ಅದು ಏನು ಎಂದರೆ ನಾವು ಹೆಚ್ಚು ಹೆಚ್ಚು ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯುತೇವೆಂದು ದಯವಿಟ್ಟು ಆ ಒಂದು ಬೇಡಿಕೆಯನ್ನು ವಾಪಸ್ ತೆಗೆದುಕೊಳ್ಳಬೇಕು. ಕಾರಣ ಸಹಕಾರ ಸಂಘಗಳ ಮೂಲಕ ಪಡಿತರವನ್ನು ವಿತರಣೆ ಮಾಡುವ ವ್ಯವಸ್ಥೆ ಮೊದಲಿನಿಂದಲೂ ಚೆನ್ನಾಗಿದೆ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಈ ಒಂದು ವ್ಯವಸ್ಥೆಯನ್ನು ಬದಲಾಯಿಸಿ ನ್ಯಾಯ ಬೆಲೆ ಅಂಗಡಿಗಳ ಮೂಲಕ ಕೊಟ್ಟರೆ ಅನ್ಯಾಯವಾಗುತ್ತದೆ ಅದರಿಂದ ರೈತರಿಗೆ ದೊರೆಯಬಹುದಾದ ನ್ಯಾಯ ಬೆಲೆ ವಸ್ತುಗಳು ದೊರೆಯುವುದರಲ್ಲಿ ಕಷ್ಟವಾಗುತ್ತದೆ. ಈ ನ್ಯಾಯ ಬೆಲೆ ಅಂಗಡಿಗಳಿಗೆ ಕಡಿವಾಣ ಹಾಕಿ ಸಹಕಾರ ಸಂಘಗಳ ಮುಖಾಂತರ ಪಡಿತರ ವಸ್ತುಗಳನ್ನು ಮಾರಾಟ ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕು. ೪೦ ವರ್ಷಗಳಿಂದ ಯಾವುದೇ ಶಾಸಕರಿಗಾಗಲೀ ಅಧಿಕಾರಿಗಳಿಗಾಗಲೀ ಗ್ರಾಮಾಂತರ ಪ್ರದೇಶದಲ್ಲಿ ಅನೇಕ ಜನರು ಅರ್ಜಿಗಳನ್ನು ಕೊಡುತ್ತಾರೆ. ನಿವೇಶನಗಳಿಗಾಗಿ ಕೊಡತಕ್ಕಂಥ ಅರ್ಜಿ, ಮನೆಗಳಿಗಾಗಿ ಕೊಡತಕ್ಕಂಥ ಅರ್ಜಿ ಉದ್ಯೋಗ ಕೊಡಬೇಕೆಂದು ಅರ್ಜಿ ಇಂತಹ ಸಮಸ್ಯೆಗಳನ್ನು ಬಗಹರಿಸಲು ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್ ಮಾಡಿ ಸ್ಥಳೀಯ ಮುಖಂಡರಿಗೆ ಈ ಜವಾಬ್ದಾರಿಯನ್ನು ಕೊಟ್ಟು ಪ್ರಾಮಾಣಿಕತೆಯಿಂದ ಕೆಲಸ ಮಾಡತಕ್ಕಂಥ ವಾತಾವರಣವನ್ನು ನಾವು ಇಂದು ನಿರ್ಮಾಣ ಮಾಡಿದ್ದೇವೆ. ಪ್ರಜಾಪ್ರಭುತ್ವದಲ್ಲಿ ನಮ್ಮ ಮೂಲ ಉದ್ದೇಶ

ಏನಿತ್ತು ಎಂದರೆ ಗ್ರಾಮಾಂತರ ಜನರ ಅಭಿವೃದ್ಧಿ ಆಗಬೇಕು, ಸಾಮಾಜಿಕವಾಗಿ, ಆರ್ಥಿಕವಾಗಲೀ, ಶೈಕ್ಷಣಿಕವಾಗಲೀ ಬದಲಾವಣೆ ಆಗುವ ದಿಕ್ಕಿನಲ್ಲಿ ಈ ಒಂದು ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ನಮ್ಮ ಸರ್ಕಾರ ಏನು ತಂದಿದೆ, ಇದನ್ನು ನಿಜವಾಗಿಯೂ ಮೆಚ್ಚತಕ್ಕದ್ದೆಂದು ನಾನು ಹೇಳ ಬಯಸುತ್ತೇನೆ.

ಇನ್ನು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹಸಿರು ಕಾರ್ಡುಗಳನ್ನು ಬಡ ಜನರಿಗೆ ವಿತರಣೆ ಮಾಡುವುದರ ಮೂಲಕ ಎರಡು ರೂಪಾಯಿಗಳಿಗೆ ಒಂದು ಕೆ.ಜಿ.ಯಂತೆ ಅಕ್ಕಿ ವಿತರಣೆ ಮಾಡುತ್ತಿರುವುದಾಗಿ ಮತ್ತು ಇದರ ಪ್ರಯೋಜನವನ್ನು ಸುಮಾರು ೩೧ ಲಕ್ಷ ಕುಟುಂಬಗಳು ಪಡೆಯುತ್ತಿವೆ ಎಂದು ಹೇಳಿದ್ದಾರೆ. ಬೇರೆ ಕಾರ್ಯಕ್ರಮಗಳನ್ನು ಕಡಿಮೆ ಮಾಡಿಯಾದರೂ ಈ ಕಾರ್ಯಕ್ರಮವನ್ನು ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರುವಂತಹ ಎಲ್ಲಾ ಬಡವರಿಗೂ ವಿಸ್ತರಿಸಬೇಕು ಎಂದು ಹೇಳುತ್ತೇನೆ. ಈ ಹಿಂದೆ ಕೆಂಪುಜೋಳವನ್ನು ವಿತರಣೆ ಮಾಡಿದಾಗ ಅದನ್ನು ಜನರು ಬಹಳ ಕಾಲದವರೆಗೆ ನೆನೆಸಿಕೊಳ್ಳುತ್ತಿದ್ದರು ಈ ಮೊದಲು ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಬಡ ಜನರಿಗೆ ಅಕ್ಕಿ ಕೊಳ್ಳುವ ಶಕ್ತಿ ಸಹ ಇರಲಿಲ್ಲ. ಆದರೆ ಈಗ ಹಸಿರು ಕಾರ್ಡು ಯೋಜನೆ ಮೂಲಕ ಅವರಿಗೂ ಕೊಳ್ಳುವ ಶಕ್ತಿ ಬಂದಿದೆ. ಆದ್ದರಿಂದ ಈ ಯೋಜನೆ ಸಫಲವಾಗಲಿ ಎಂದು ನಾನು ಹಾರೈಸುತ್ತೇನೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಮೊದಲು ಹಳ್ಳಿಯ ಜನರು ಸಣ್ಣಪುಟ್ಟ ಕೆರೆಕಟ್ಟೆಗಳಲ್ಲಿ ನಿಲ್ಲುತ್ತಿದ್ದ ನೀರನ್ನೇ ಅಂದರೆ ನಾಯಿ ನರಿಗಳು ಕುಡಿಯುತ್ತಿದ್ದ ನೀರನ್ನೇ ಕುಡಿಯುತ್ತಿದ್ದರು. ಆದರೆ ನಮ್ಮ ಸರ್ಕಾರ ಈಗ ಎಲ್ಲಾ ಹಳ್ಳಿಗಳಿಗೂ ಶುದ್ಧವಾದ ಮತ್ತು ಯೋಗ್ಯವಾದ ನೀರನ್ನು ಒದಗಿಸುವಂತಹ ಯೋಜನೆಯನ್ನು ಹಾಕಿಕೊಂಡಿದೆ. ಎಲ್ಲಾ ಕಡೆಯೂ ಇದು ಜಾರಿಯಲ್ಲಿ ಬಂದಿದೆ. ಇದರಿಂದ ಇವೊತ್ತು ಉತ್ತಮವಾದ ಕುಡಿಯುವ ನೀರು ಸಿಗದಿರುವ ಹಳ್ಳಿಗಳೇ ಇಲ್ಲ ಎಂದು ಹೇಳಬಹುದು. ಈ ಮೊದಲು ಅಶುದ್ಧವಾದ ನೀರನ್ನು ಕುಡಿದು ಜನರು ಸಣ್ಣಪುಟ್ಟ ಖಾಯಿಲೆಗಳಿಗೆ ಗುರಿಯಾಗುತ್ತಿದ್ದರು ಆದರೆ ಈಗ ಇದು ಕಡಿಮೆ ಆಗಿದೆ, ಆಸ್ಪತ್ರೆಗಳಿಗೆ ಬರುವವರ ಸಂಖ್ಯೆ ಕಡಿಮೆ ಆಗಿದೆ ಎಂದು ಹೇಳಿದರೆ ತಪ್ಪಾಗಲಾರದು.

ಇನ್ನು ನಮ್ಮ ನಾಯಕರಾಗಿದ್ದ ದಿವಂಗತ ದೇವರಾಜರಾಜ ಅರಸ್ ಅವರ ಸರ್ಕಾರ ಅಧಿಕಾರದಲ್ಲಿದ್ದಾಗ ಗ್ರಾಮಾಂತರ ಪ್ರದೇಶಗಳಲ್ಲಿ ಯಾರಿಗೆ ವಾಸಕ್ಕೆ ಮನೆ ಇಲ್ಲವೋ ಅಂತಹವರಿಗೆ ಜನತಾ ಮನೆಗಳನ್ನು ಕಟ್ಟಿಸಿಕೊಡುವಂತಹ ಕಾರ್ಯಕ್ರಮ ಪ್ರಾರಂಭವಾಯಿತು ಸೂರು ಇಲ್ಲದವರಿಗೆ ಸೂರನ್ನು ಒದಗಿಸುವ, ನೆರಳನ್ನು ಒದಗಿಸುವ ಕೆಲಸ ಅವರ ಕಾಲದಲ್ಲಿ ಪ್ರಾರಂಭವಾಯಿತು. ಅವರ ಕಾಲದಲ್ಲಿ ಒಂದೊಂದು ೧೨೦೦ರಿಂದ ೧೫೦೦ ಜನತಾ ಮನೆಗಳನ್ನು ನಿರ್ಮಾಣ ಮಾಡಿ ಬಡವರಿಗೆ ಕೊಡಲಾಗುತ್ತಿತ್ತು. ಆದರೆ ನಮ್ಮ ಸರ್ಕಾರ ಈ ದಿಸೆಯಲ್ಲಿ ಸ್ವಲ್ಪ ಹಿಂದೆ ಬಿದ್ದಿದೆ. ಈಗ ಪ್ರತಿ ತಾಲ್ಲೂಕಿನಲ್ಲಿ ೧೫೦ರಿಂದ ೨೦೦ ಜನತಾ ಮನೆಗಳ ನಿರ್ಮಾಣವಾಗುತ್ತಿದೆ. ಇದಕ್ಕೆ ಕಾರಣವೇನು ? ಆದಷ್ಟೂ ಕಡಿಮೆ ಖರ್ಚಿನಲ್ಲಿ ಆಯಾ ಜಾಗಗಳಲ್ಲಿ ಸಿಗುವಂತಹ ಮರ, ಹೆಂಚು ಇಟ್ಟಿಗೆ ಮುಂತಾದವುಗಳನ್ನು ಉಪಯೋಗಿಸಿ ಜನತಾ ಮನೆಗಳನ್ನು ನಿರ್ಮಿಸಬೇಕೆಂಬುದೇ ಈ ಯೋಜನೆಯ ಮುಖ್ಯ ಉದ್ದೇಶವಾಗಿತ್ತು. ಆದರೆ ಮಾನ್ಯ ನಜೀರ್‌ಸಾಬ್ ಅವರ ಕಾಲದಲ್ಲಿ ಈ ಕೆಲಸ ನಿಧಾನವಾಗಿದೆ. ಇವರು ಮಹಾತ್ಮಾಗಾಂಧೀಜಿ ಅವರು ಕಂಡಂತಹ ಕನಸನ್ನು ಕಂಡವರು ಮತ್ತು ಗ್ರಾಮಾಂತರ ಪ್ರದೇಶಗಳ ಅಭ್ಯುದಯಕ್ಕಾಗಿ ಅನೇಕ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡವರು ಈ ಜನತಾ ಮನೆಗಳ ನಿರ್ಮಾಣದ ಬಗ್ಗೆ ಏಕೆ ಇವರು ಹಿಂದೆ ಬಿದ್ದಿದ್ದಾರೆ ? ಜನತಾ ಮನೆಗಳ ಕೆಲಸವನ್ನು ಭೂ ಸೇನಾ ನಿಗಮಕ್ಕೆ ವಹಿಸಿದ್ದಾರೆ, ಅವರು ಆಸ್ಬೆಸ್ಟಾಸ್ ಶೀಟ್‌ಗಳನ್ನು ಜನತಾ ಮನೆಗಳಿಗೆ ಹಾಕುತ್ತಿದ್ದಾರೆ. ಇದು ಜನರ ಆರೋಗ್ಯಕ್ಕೆ ಒಳ್ಳೆಯದಲ್ಲ. ಇದನ್ನು ಹಾಕುವಾಗ ಅಥವಾ ಅದರ ನಂತರ ಸ್ವಲ್ಪ ಡ್ಯಾಮೇಜ್ ಆದರೆ ಇನ್ನೂರು ರೂಪಾಯಿಗಳಷ್ಟು ನಷ್ಟವಾಗುತ್ತದೆ. ಇಷ್ಟೊಂದು ಹೆಚ್ಚಿನ ಹಣ ಖರ್ಚು ಮಾಡುವ ಶಕ್ತಿ ಬಡವರಿಗೆ ಇರುವುದಿಲ್ಲ. ಆದ್ದರಿಂದ ಈ ಜನತಾ ಮನೆಗಳಿಗೆ ಸ್ಥಳೀಯವಾಗಿ ತಯಾರಾಗತಕ್ಕಂಥ ಮಂಗಳೂರು ಹೆಂಚುಗಳನ್ನು ಹೆಚ್ಚು ಹೆಚ್ಚು ಉಪಯೋಗ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಇನು ನಮ್ಮ ರಾಜ್ಯದಲ್ಲಿ ಅನೇಕ ವಿಶ್ವವಿದ್ಯಾನಿಲಯಗಳು ಪ್ರಾರಂಭವಾಗಿವೆ. ಇವುಗಳ ಸಂಖ್ಯೆ ಜಾಸ್ತಿಯಾದರೆ ನಮ್ಮ ರಾಜ್ಯದ ಕೀರ್ತಿ ಜಾಸ್ತಿಯಾಗುತ್ತದೆ. ಅದು ನಮ್ಮ ರಾಜ್ಯದ ಮುನ್ನಡೆಯ ಸಂಕೇತ ಎಂದು ನಮ್ಮ ನಾಯಕರುಗಳು ತಿಳಿದುಕೊಂಡಿರಬಹುದು. ಆದರೆ ನನ್ನ ಮಟ್ಟಿಗೆ ಹೇಳಬೇಕಾದರೆ

ವಿಶ್ವವಿದ್ಯಾನಿಲಯಗಳ ಸಂಖ್ಯೆ ಜಾಸ್ತಿ ಆದಂತೆ, ಅಷ್ಟೇವಂಟ್ಟಿಗೆ ವಿದ್ಯಾಭ್ಯಾಸದ ತಳಪಾಯವನ್ನು ಭದ್ರ ಮಾಡಬೇಕಾಗಿದೆ. ಅಂದರೆ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ನಾವು ಹೆಚ್ಚು ಗಮನ ಕೊಡಬೇಕಾಗಿದೆ. ಇವೊತ್ತು ಸರ್ಕಾರದವರು ಹಾಗೂ ಸಾರ್ವಜನಿಕರೂ ದೊಡ್ಡ ದೊಡ್ಡ ಕಾಲೇಜುಗಳನ್ನು ಪ್ರಾರಂಭ ಮಾಡಲು ಆಸಕ್ತಿ ವಹಿಸುತ್ತಿದ್ದಾರೆಯೇ ಹೊರತು ಪ್ರಾಥಮಿಕ ಶಾಲೆಗಳನ್ನು ಉತ್ತಮ ಮಟ್ಟದಲ್ಲಿ ನಡೆಸಲು ಹಾಗೂ ಈ ಶಾಲೆಗಳಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸುವ ದಿಕ್ಕಿನಲ್ಲಿ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡುತ್ತಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇದು ಸರಿಯಲ್ಲ. ಪ್ರಾಥಮಿಕ ಶಿಕ್ಷಣವನ್ನು ಸರಿಯಾದ ರೀತಿಯಲ್ಲಿ ಬೆಳೆಸದಿದ್ದರೆ ನಮ್ಮ ಈ ವಿಶ್ವವಿದ್ಯಾನಿಲಯಗಳಿಗೆ ಗಂಗಾರಾಮ್ ಕಟ್ಟಡದ ಪರಿಸ್ಥಿತಿ ಬರುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇವತ್ತಿನ ದಿವಸ ನಾವು ಹೆಚ್ಚು ಹೆಚ್ಚು ವಿದ್ಯಾವಂತರನ್ನು ಮಾಡಬೇಕಾದರೆ ಕೆಳಹಂತದಲ್ಲಿ ಶಿಕ್ಷಣಕ್ಕೆ ಆದ್ಯತೆಯನ್ನು ಕೊಡಬೇಕು, ಉತ್ತಮವಾದ ಕಟ್ಟಡಗಳು ಇರಬೇಕು. ಉತ್ತಮ ಉಪಾಧ್ಯಾಯರಿಂದ ಶಿಕ್ಷಣವನ್ನು ಮಕ್ಕಳಿಗೆ ಕೊಡಿಸಬೇಕು, ಉತ್ತಮವಾದ ಪರಿಸರದ ಕಡೆಗೆ ಗಮನಕೊಡಬೇಕು. ಆಗ ಮಾತ್ರ ನಾವು ಈ ಶಿಕ್ಷಣಕ್ಕೆ ಆದ್ಯತೆ ಕೊಟ್ಟಹಾಗೆ ಆಗುತ್ತದೆ. ಇವತ್ತು ನಾವು ಪ್ರಾಥಮಿಕ ಶಿಕ್ಷಣದಿಂದ ವಿಶ್ವವಿದ್ಯಾನಿಲಯದವರೆಗೆ ಶಿಕ್ಷಣವನ್ನು ಕೊಡುವಾಗ ವಿಶ್ವವಿದ್ಯಾನಿಲಯದ ಶಿಕ್ಷಣವನ್ನು ಹೆಚ್ಚು ಮಾಡುವುದಕ್ಕೆ ಕೆಳಹಂತದಲ್ಲಿ ಮಕ್ಕಳನ್ನು ಬೆಳೆಸಬೇಕು. ಏಕೆಂದರೆ ಈ ಬಗ್ಗೆ ಕರ್ನಾಟಕದ ಅಂಕಿಸಂಖ್ಯೆಯನ್ನು ತೆಗೆದುಕೊಂಡರೆ ನಾವು ತಲೆ ತಗ್ಗಿಸಬೇಕಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ೨೦ರಿಂದ ೨೧ ಲಕ್ಷ ಮಕ್ಕಳು ಪ್ರಾಥಮಿಕ ಶಾಲೆಗಳಲ್ಲಿ ಸೇರುತ್ತಾರೆ. ಈ ಮಕ್ಕಳಲ್ಲಿ ೫ ಲಕ್ಷ ಮಕ್ಕಳು ಪ್ರೌಢ ಶಿಕ್ಷಣಕ್ಕೆ ಬರುತ್ತಾರೆ. ಪ್ರೌಢ ಶಿಕ್ಷಣದ ನಂತರ ವಿಶ್ವವಿದ್ಯಾನಿಲಯಕ್ಕೆ ಬರತಕ್ಕಂಥ ಮಕ್ಕಳ ಸಂಖ್ಯೆ ಕೇವಲ ಒಂದು ಲಕ್ಷದ ಒಳಗೆ, ಪ್ರಾಥಮಿಕ ಹಂತದಲ್ಲಿ ೨೧ ಲಕ್ಷ ಮಕ್ಕಳು ಸೇರಿದ್ದರೆ ಕಾಲೇಜು ಶಿಕ್ಷಣಕ್ಕೆ ಬರುವುದರೊಳಗೆ ಅವರ ಸಂಖ್ಯೆ ಒಂದು ಲಕ್ಷಕ್ಕೆ ಬಂದಿರುತ್ತದೆ. ಈ ರೀತಿ ಒಂದು ಲಕ್ಷ ಸಂಖ್ಯೆಗೆ ಬರತಕ್ಕಂಥ ಮಕ್ಕಳಿಗೋಸ್ಕರ ಅನೇಕ ವಿಶ್ವವಿದ್ಯಾನಿಲಯಗಳನ್ನು ನಾವು ಪ್ರಾರಂಭ ಮಾಡಿದ್ದೇವೆ. ಪ್ರಾಥಮಿಕ ಹಂತದಲ್ಲಿ ಶಾಲೆಗೆ ಸೇರಿದಂಥ ೨೧ ಲಕ್ಷ ಮಕ್ಕಳು ಎಲ್ಲಿ ಹೋದರೂ, ಅವರು ಯಾವ ಹಂತದಲಿ ಬಿಟ್ಟರು ಎಂದು ಯೋಚನೆ ಮಾಡಬೇಕಾಗುತ್ತದೆ. ಇದು ಪ್ರಜಾಪ್ರಭುತ್ವ ಪದ್ಧತಿಯನ್ನು ಅಳವಡಿಸಿಕೊಂಡಿರತಕ್ಕಂಥ ದೇಶ. ಇಲ್ಲಿ ಶಿಕ್ಷಣ ಬೆಳೆಯದೇ ಹೋದರೆ ಪ್ರಜಾಪ್ರಭುತ್ವ ಉಳಿಯುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸತಕ್ಕಂಥ ಪೋಷಕರು ಏನಿದ್ದರೆ ದುಡಿಯುವಂಥ ಅವರ ಕೈಗೆ ಉದ್ಯೋಗ ಕೊಟ್ಟಿಲ್ಲ, ಅವರ ಸ್ಥಿತಿಗತಿಯನ್ನು ನಾವು ಸುಧಾರಿಸಿಲ್ಲ. ಈ ಎಲ್ಲಾ ದೃಷ್ಟಿಯಿಂದ ಈ ಹೊಸ ಸರ್ಕಾರ ಬಂದಮೇಲೆ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಇರತಕ್ಕಂಥ ಎಲ್ಲಾ ಮಕ್ಕಳಿಗೆ ಉಚಿತವಾಗಿ ಪುಸ್ತಕಗಳನ್ನು, ಬಟ್ಟೆಗಳನ್ನು ನಾವು ಕೊಟ್ಟಿದ್ದೇವೆ. ಇದಕ್ಕಿಂತ ಮೊದಲು ಶಾಲೆಗೆ ಹೋದಾಗ ಕೇವಲ ೨೦-೩೦ ಮಕ್ಕಳ ಹಾಜರಾತಿ ಇರುತ್ತಿತ್ತು. ಇದನ್ನು ಕೊಟ್ಟಮೇಲೆ ೭೦-೮೦ ಮಕ್ಕಳು ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡತಕ್ಕಂಥ ಪರಿಸ್ಥಿತಿಯನ್ನು ನಾವು ಉಂಟು ಮಾಡಿದ್ದೇವೆ. ಇಷ್ಟು ದೊಡ್ಡ ಪ್ರಜಾಪ್ರಭುತ್ವದ ರಾಷ್ಟ್ರದಲ್ಲಿ ನಾವು ವೈಜ್ಞಾನಿಕ ಯುಗದಲ್ಲಿದ್ದೇವೆ. ವಿಜ್ಞಾನವನ್ನು ಮುಂದುವರಿಸಿಕೊಂಡು ಹೋಗುತ್ತಾ ಇದ್ದೇವೆ. ೨೧ನೇ ಶತಮಾನಕ್ಕೆ ಹೋಗಬೇಕು ಎಂದು ರಾಷ್ಟ್ರ ನಾಯಕರು ಹೇಳುತ್ತಾ ಇದ್ದಾರೆ. ಇವತ್ತಿನ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯತಕ್ಕ ಶಾಲೆಗಳನ್ನು ನೋಡಿದರೆ ನಾವೆಲ್ಲಾ ತಲೆ ತಗ್ಗಿಸಬೇಕಾಗುತ್ತದೆ. ಅನೇಕ ಶಾಲೆಗಳಲ್ಲಿ ಉಪಾಧ್ಯಾಯರಿಲ್ಲ, ಹಲಗೆ ಇಲ್ಲ. ಇಂತಹ ಪರಿಸ್ಥಿತಿ ಅನೇಕ ಗ್ರಾಮಗಳಲ್ಲಿ ಇದೆ. ಅದಕ್ಕೋಸ್ಕರ ಹೆಚ್ಚಿನ ಆದ್ಯತೆಯನ್ನು ಪ್ರಾಥಮಿಕ ಶಾಲೆಗಳಿಗೆ, ಮಾಧ್ಯಮಿಕ ಶಾಲೆಗಳಿಗೆ ಕೊಡಬೇಕು ಮತ್ತು ಎಲ್ಲಾ ಕಡೆ ಉಪಾಧ್ಯಾಯರು ಇಲ್ಲದೇ ಇರತಕ್ಕ ಶಾಲೆ ಇರಬಾರದು, ಕಟ್ಟಡ ಇಲ್ಲದೆ ಇರತಕ್ಕ ಶಾಲೆ ಇರಬಾರದು ಮಕ್ಕಳನ್ನು ಕೆಳಹಂತದಲ್ಲಿ ಒಳ್ಳೆಯ ವಾತಾವರಣದಲ್ಲಿ ಬೆಳೆಸಿದರೆ ಎಷ್ಟೇ ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭ ಮಾಡಿದರೂ ಗೌರವ ಬರುತ್ತದೆ, ನಮ್ಮ ಮಕ್ಕಳು ವಿದ್ಯಾವಂತರಾಗುವುದಕ್ಕೆ ಅವಕಾಶವಾಗುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಈ ವಿಷಯವನ್ನು ತಮ್ಮ ಮುಂದೆ ಇಡುತ್ತಾ ಇದ್ದೇನೆ.

ಇವತ್ತು ಈ ರಾಜ್ಯದಲ್ಲಿ ಒಣ ಭೂಮಿ ಜಾಸ್ತಿ ಇದೆ. ಈ ಭೂಮಿಗೆ ನೀರನ್ನು ಕೊಡತಕ್ಕಂಥ ಶಕ್ತಿ ನಮಗೆ ಇಲ್ಲ. ಸ್ವಾತಂತ್ರ್ಯ ಬಂದು ೪೦ ವರ್ಷಗಳಾದರೂ ಒಣ ಭೂಮಿಗೆ ನೀರನ್ನು ಹರಿಸತಕ್ಕಂಥ ಕಾಂತಿಯನ್ನು ಉಂಟುಮಾಡಿ ರೈತ ಹೆಚ್ಚು ಫಸಲನ್ನು ಬೆಳೆದು ತನ್ನ ಸಂಸಾರದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸತಕ್ಕಂಥ ವಾತಾವರಣವನ್ನು ಕಲ್ಪನೆ ಮಾಡಿಲ್ಲ. ಮುಖ್ಯವಾಗಿ ಈ ನೀರಾವರಿಗೆ ಎಷ್ಟು ಆದ್ಯತೆ ಕೊಡಬೇಕೋ ಅಷ್ಟು ಆದ್ಯತೆಯನ್ನು ಕೊಡಬೇಕು. ಬೇರೆ ಅನೇಕ

ಕಾರ್ಯಕ್ರಮಗಳನ್ನು ಕಡಿಮೆ ಮಾಡಿ ನೀರಾವರಿಗೆ ಆದ್ಯತೆ ಕೊಟ್ಟು ರೈತನಿಗೆ ನೇರವಾಗಿ ಸಹಾಯ ಮಾಡಬೇಕು. ಬರೀ ವೆಚ್ಚ ಮಾಡುವುದರ ಮೂಲಕ ರೈತರ ಉತ್ಪನ್ನ ಆಗುವುದಿಲ್ಲ. ಈ ನೀರಾವರಿಗೆ ಹೆಚ್ಚಿನ ಆದ್ಯತೆ ಕೊಟ್ಟು ರೈತ ಹೆಚ್ಚು ಬೆಳೆ ಬೆಳೆದಾಗ ಅವನ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ಅತ್ತ ಕಡೆ ತಾವು ಗಮನ ಕೊಡಬೇಕು ಎಂದು ಈ ಸಂದರ್ಭದಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈ ರಾಜ್ಯದಲ್ಲಿ ೨೫ ರಿಂದ ೩೦ ಸಾವಿರ ದೇವಸ್ಥಾನಗಳು ಇವೆ. ಈ ದೇವಸ್ಥಾನಗಳಿಗೆ ಸಂಬಂಧಪಟ್ಟಂತೆ ಏಕರೀತಿಯ ಕಾನೂನು ಇಲ್ಲ. ಇವತ್ತು ಅನೇಕ ದೇವಸ್ಥಾನಗಳಿಗೆ ಸೇರಿದ ಆಸ್ತಿಪಾಸ್ತಿಯನ್ನು ಸಾರ್ವಜನಿಕರು ತಿಂದು ಮುಗಿಸಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ತಾವು ಕೂಡಲೇ ಎಲ್ಲಾ ದೇವಸ್ಥಾನಗಳನ್ನು ಒಂದೇ ಕಾನೂನಿನ ಅಡಿಯಲ್ಲಿ ಒಂದು ಕಕ್ಷೆಯಲ್ಲಿ ತಂದು, ದೇವಸ್ಥಾನಗಳ ಆಸ್ತಿಪಾಸ್ತಿಯನ್ನು ರಿಜಿಸ್ಟರ್ ಮಾಡಿಸಬೇಕು. ಹಾಗೆ ಮಾಡಿದರೆ ಮಾತ್ರ ಧಾರ್ಮಿಕ ಶಕ್ತಿ ಉಳಿಯುತ್ತದೆ. ಸಾರ್ವಜನಿಕರ ಆಸ್ತಿ ಉಳಿಯುತ್ತದೆಂದು ಹೇಳುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ೨ನೇ ಹಿಂದುಳಿದ ವರ್ಗಗಳ ಆಯೋಗವನ್ನು ರಚನೆ ಮಾಡಿದ್ದೆವು, ಅದು ಕೊಟ್ಟಂಥ ವರದಿ ಸಫಲವಾಗದ ಕಾರಣದಿಂದ ೩ನೇ ಹಿಂದುಳಿದ ವರ್ಗಗಳ ಆಯೋಗವನ್ನು ರಚನೆ ಮಾಡುತ್ತೇವೆಂದು ಹೇಳಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ. ೩ನೇ ಹಿಂದುಳಿದ ವರ್ಗಗಳ ಆಯೋಗವನ್ನು ರಚನೆ ಮಾಡುವುದರಲ್ಲಿ ತುಂಬಾ ತಡವಾಗಿದೆ. ಈಗಾಗಲೇ ನಾವು ಮೂರು ವರ್ಷ ಕಳೆದಿದ್ದೇವೆ. ಇನ್ನು ಇರತಕ್ಕ ಎರಡು ವರ್ಷಗಳಲ್ಲಿ ಇದಕ್ಕೆ ಪ್ರಾಮಾಣಿಕವಾಗಿರತಕ್ಕ ಪಕ್ಷಪಾತ ಹೊಂದದ ವ್ಯಕ್ತಿಯೊಬ್ಬರನ್ನು ಆಯ್ಕೆ ಮಾಡಬೇಕು. ಆ ವ್ಯಕ್ತಿ ಕೊಟ್ಟ ವರದಿಯನ್ನು ಈ ಸದನ ಒಪ್ಪಬೇಕು, ಮಂತ್ರಿ ಮಂಡಲ ಒಪ್ಪಬೇಕು. ನಂತರ ಅದು ಕಾನೂನಾಗಿ ಬರಬೇಕು. ಬರೀ ಆಯೋಗಗಳನ್ನು ಮಾಡುವುದರಿಂದ ಹಿಂದುಳಿದವರ ವಿಶ್ವಾಸವನ್ನು ಗಳಿಸುವುದಕ್ಕಾಗುವುದಿಲ್ಲ. ಹಿಂದುಳಿದ ವರ್ಗಗಳ ವಿಶ್ವಾಸಗಳಿಸಬೇಕಾದರೆ ೩ನೇ ಆಯೋಗವನ್ನು ನೇಮಕ ಮಾಡಬೇಕು, ಅದು ಆರು ತಿಂಗಳಲ್ಲಿ ವರದಿಯನ್ನು ಕೊಡಬೇಕು. ಆಯೋಗ ಕೊಟ್ಟಂಥ ವರದಿಯನ್ನು ಬೇಷರತ್ತಾಗಿ ಒಪ್ಪತಕ್ಕ ನಿಲುವು ಮತ್ತು ಮನಸ್ಸು ಇದ್ದರೆ ಮಾತ್ರ ಆಯೋಗವನ್ನು ಮಾಡಿ, ಬರೀ ಕಣ್ಣೊರೆಸುವ ದೃಷ್ಟಿಯಿಂದ ಆಯೋಗವನ್ನು ರಚನೆ ಮಾಡಿದರೆ ಅದರಿಂದ ಏನೂ ಪ್ರಯೋಜನ ಆಗುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ರಾಜ್ಯದಲ್ಲಿ ಕೈಗಾರಿಕೆಗಳು ಚನ್ನಾಗಿ ಬೆಳೆದಿವೆ. ಸರ್ಕಾರ ಇನ್ನು ಒಂದು ಸಾವಿರ ಕೈಗಾರಿಕೆಗಳನ್ನು ಮಾಡಬೇಕೆಂಬ ಆಸೆಯನ್ನು ಇಟ್ಟುಕೊಂಡಿದೆ. ಈ ಕೈಗಾರಿಕೆಗಳನ್ನು ನಡೆಸತಕ್ಕವರ ಪರಿಸ್ಥಿತಿ ತುಂಬಾ ಶೋಚನೀಯವಾಗಿದೆ. ಇವತ್ತು ಹಣಕಾಸಿನ ನಿಗಮಗಳು ಕೂಡ ಕೈ ತುಂಬಾ ಸಹಾಯ ಮಾಡುವುದಕ್ಕೆ ಮುಂದೆ ಬಂದಿವೆ. ಆದರೆ, ಕೈಗಾರಿಕೆಗಳಿಗೆ ಬೇಕಾದ ವಿದ್ಯುತ್ ಸಿಗುತ್ತಿಲ್ಲ, ಕಚ್ಚಾ ವಸ್ತುಗಳು ಸಿಗುತ್ತಿಲ್ಲ. ಸಣ್ಣ ಕೈಗಾರಿಕೆಗಳು ತಯಾರು ಮಾಡಿದಂಥ ವಸ್ತುಗಳನ್ನು ಮಾರಾಟ ಮಾಡತಕ್ಕ ವ್ಯವಸ್ಥೆ ಪರಿಪೂರ್ಣವಾಗಿಲ್ಲ. ಅಂಥ ವಸ್ತುಗಳನ್ನು ತೆಗೆದುಕೊಳ್ಳತಕ್ಕ ವ್ಯವಸ್ಥೆ ಕಡಿಮೆ ಇದೆ ಒಂದು ಉದಾಹರಣೆಯನ್ನು ಕೊಡುತ್ತೇನೆ ಗ್ರಾಮೀಣ ಪ್ರದೇಶಗಳಲ್ಲಿ ಹೆಂಚು ತಯಾರು ಮಾಡತಕ್ಕ ಕಾರ್ಖಾನೆಗಳು ಇವೆ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಇವತ್ತು ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರದವರು ಕಟ್ಟತಕ್ಕ ಜನತಾ ಮನೆಗಳಿಗೆ ಈ ಹೆಂಚನ್ನು ಬಳಸಬಹುದು. ಇದಕ್ಕೆ ಸರ್ಕಾರ ಏರ್ಪಾಡು ಮಾಡಿದರೆ ಒಳ್ಳೆಯದು, ಆದರೆ, ಇವತ್ತು ಏನಾಗಿದೆ, ಕೋಟ್ಯಾಧೀಶ್ವರರು ತಯಾರು ಮಾಡತಕ್ಕ ಆಸ್‌ಬೆಸ್ಟಾಸ್ ಷೀಟುಗಳನ್ನು ಬಡವರಿಗೆ ಕೊಟ್ಟಿದ್ದಾರೆ. ಇದರಿಂದ ಬಡವರು ತೊಂದರೆಗೆ ಒಳಗಾಗುತ್ತಾರೆ. ಷೀಟುಗಳು ಹೋದರೆ ಮತ್ತೆ ಬಡವರು ಹಾಕಿಸಿಕೊಳ್ಳುವಂಥ ಸ್ಥಿತಿಯಲ್ಲಿರುವುದಿಲ್ಲ. ಆದುದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಖಾನೆಗಳು ತಯಾರು ಮಾಡತಕ್ಕ ಉತ್ಪನ್ನಗಳನ್ನು ಸರ್ಕಾರದ ಯೋಜನೆಗಳಿಗೆ ಉಪಯೋಗಿಸಿಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಶ್ರೀ ವೀರಣ್ಣ.— ಮಾನ್ಯ ಸದಸ್ಯರು ಹೇಳಿದಂತೆ ಆಸ್‌ಬೆಸ್ಟಾಸ್ ಷೀಟುಗಳನ್ನು ಹಾಕುವುದರಿಂದ ತೊಂದರೆಯಾಗುವುದಿಲ್ಲ. ಇವರದ್ದು ಹೆಂಚಿನ ಕಾರ್ಖಾನೆ ಇದೆ, ಹೆಂಚುಗಳನ್ನು ಕೊಳ್ಳಿ ಎಂದು ಹೇಳುತ್ತಿದ್ದಾರೆ.

ಶ್ರೀ ಸಿ. ಎನ್. ಭಾಸ್ಕರಪ್ಪ.— ಕೈಗಾರಿಕೆಗಳನ್ನು ಪ್ರಾರಂಭ ಮಾಡಬೇಕಾದರೆ, ಅನೇಕ ಸಮಸ್ಯೆಗಳನ್ನು ಬಿಡುಗಡೆಮಾಡಬೇಕಾಗಿದೆ. ಹೊಸದಾಗಿ ಕೈಗಾರಿಕೆಗಳನ್ನು ಮಾಡತಕ್ಕವರಿಗೆ ಯಾವುದೇರೀತಿಯ ಸಬ್ಸಿಡಿ ಮತ್ತು ಡೆವಲಪ್‌ಮೆಂಟ್ ಲೋನ್ ಕೊಡತಕ್ಕ ಯೋಜನೆ ಇತ್ತು. ಕೇಂದ್ರ ಸರ್ಕಾರ ಅದನ್ನು ನಿಲ್ಲಿಸತಕ್ಕ ಆಲೋಚನೆ ಮಾಡಿದೆ.

೩-೦೦ ಪಿ. ಎಂ.

ಆದರೆ, ರಾಜ್ಯಸರ್ಕಾರದವರು ಕೊಡತಕ್ಕಂಥ ಸಬ್ಸಿಡಿ ಎಂದರೆ ಕಳೆದ ವರ್ಷ ಮಾರ್ಚಿಯಲ್ಲಿ ಕೊಡಬೇಕಾದ ಸಬ್ಸಿಡಿ ಇದುವರೆಗೂ ದೊರೆತಿಲ್ಲ. ಡೆವಲಪ್‌ಮೆಂಟ್ ಲೋನುಗಳ ಯೋಜನೆಯಲ್ಲಿ ಅಳವಡಿಸಿಕೊಂಡು ಮಾಡಿದಂಥ ಕೈಗಾರಿಕೆಗಳು ಅರ್ಧದಲ್ಲಿಯೇ ನಿಂತಿವೆ. ಇವೊತ್ತು ಹಣಕಾಸು ನಿಗಮದವರು ಅವರ ಮೇಲೆ ಕ್ರಮ ತೆಗೆದುಕೊಳ್ಳುವಂಥ ಪರಿಸ್ಥಿತಿ ಬಂದಿದೆ.

ಶ್ರೀ ಬಿ. ಎ. ಜೀವಿಜಯ.— ಮಾನ್ಯ ಸದಸ್ಯರು ಕೇಂದ್ರಸರ್ಕಾರದ ಸಬ್ಸಿಡಿಯನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿಲ್ಲ ಎಂದು ಹೇಳಿದ್ದಾರೆ. ಈ ಮಾತು ವಾಸ್ತವಾಂಶಕ್ಕೆ ದೂರವಾದುದು. ಕೇಂದ್ರಸರ್ಕಾರ ಬಿಡುಗಡೆ ಮಾಡಿದಂಥ ಎಲ್ಲಾ ಹಣವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರ ಕೊಡಬೇಕಾದ ಸಬ್ಸಿಡಿ ಏನು ಇದೆ, ಅದು ಮಾತ್ರ ಆರ್ಥಿಕ ಪರಿಸ್ಥಿತಿಯಿಂದ ತೊಂದರೆಯಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಸದಸ್ಯರು ಕೇಂದ್ರಸರ್ಕಾರದ ಸಬ್ಸಿಡಿಯನ್ನು ಇವರು ಇನ್ನೂ ಕೊಟ್ಟಿಲ್ಲ ಎಂದು ಹೇಳಿದರು.

ಶ್ರೀ ಸಿ. ಎನ್. ಭಾಸ್ಕರಪ್ಪ.— ಹೊಸ ಕೈಗಾರಿಕೆಗಳಿಗೆ ರಾಜ್ಯಸರ್ಕಾರದ ಸಬ್ಸಿಡಿ ಸಹ ಬಂದಿಲ್ಲ. ಡೆವಲಪ್‌ಮೆಂಟ್ ಲೋನ್ ಎಂದು ಏನು ಕೊಡುತ್ತೀರಿ ಅದು ಕೂಡ ಬಂದಿಲ್ಲ.

ಶ್ರೀ ಬಿ. ಎ. ಜೀವಿಜಯ.— ೧೯೮೩ನೇ ಇಸವಿ ಪೂರ್ವದಲ್ಲಿ ಕೋಟ್ಯಾಂತರ ರೂಪಾಯಿ ಡೆವಲಪ್‌ಮೆಂಟ್ ಲೋನ್ ಕೊಡಬೇಕಾಗಿತ್ತು. ನಮ್ಮ ಸರ್ಕಾರ ಬಂದಮೇಲೆ ಅದನ್ನು ಕೊಟ್ಟಿದ್ದಾಗಿದೆ, ಆದರೆ ಇನ್ನೂ ಸ್ವಲ್ಪ ಡೆವಲಪ ಮೆಂಟ್ ಲೋನ್ ಕೊಡಬೇಕಾಗಿದೆ. ಅದನ್ನು ಮುಂದುವರಿಸಬೇಕೇ ಅಥವಾ ಬೆಡವೇ ಎನ್ನುವ ಬಗ್ಗೆ ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಸಿ. ಎನ್. ಭಾಸ್ಕರಪ್ಪ.— ಯಾವುದೇ ಹೊಸ ಕೈಗಾರಿಕೆಗೆ ಡೆವಲಪ್‌ಮೆಂಟಲ್ ಲೋನ್, ಸಬ್ಸಿಡಿ ಕೊಡತಕ್ಕದ್ದನ್ನು ನಿಲ್ಲಿಸಿ. ಸಬ್ಸಿಡಿಗೋಸ್ಕರ ಕೈಗಾರಿಕೆ ಮಾಡತಕ್ಕದ್ದು ಸರಿಯಲ್ಲ. ಇವೊತ್ತು ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಬೇಕೆಂದು ಹೇಳಿದಾಗ, ಆ ಕೈಗಾರಿಕೆಗಳಿಗೆ ಬೇಕಾಗುವಷ್ಟು ವಿದ್ಯುಚ್ಛಕ್ತಿಯನ್ನು ಕೊಡಬೇಕು, ನೀರನ್ನು ಕೊಡಬೇಕು. ಇವೊತ್ತು ಇಂಡಸ್ಟ್ರಿಯಲ್ ಷೆಡ್ ಎಂದು ಇಂಡಸ್ಟ್ರಿಯಲ್ ಏರಿಯಾದವರು ಜಮೀನನ್ನು ಏನು ಮಂಗಡಿಸುತ್ತಿದ್ದಾರೆ, ಅದರ ಬೆಲೆ ಬಹಳ ಜಾಸ್ತಿ ಎಂದು ಹೇಳಿದರೆ ತಪ್ಪಾಗಲಾರದು. ರೈತನಿಂದ ಜಮೀನನ್ನು ಪಡೆದುಕೊಳ್ಳುವಾಗ ಎಕರೆಗೆ ೧೫-೨೦ ಸಾವಿರ ರೂಪಾಯಿಯಂತೆ ಪಡೆದುಕೊಳ್ಳುತ್ತಾರೆ. ಅನಂತರ ಮತ್ತೆ ಕೈಗಾರಿಕೋದ್ಯಮಿಗಳಿಗೆ ಕೊಡಬೇಕಾದರೆ ಒಂದೂಕಾಲು ಲಕ್ಷ ರೂಪಾಯಿಗೆ ಅದನ್ನು ಕೊಡುತ್ತಾರೆ. ರೈತರು ಇಪ್ಪತ್ತು ಸಾವಿರ ರೂಪಾಯಿಗೆ ಕೊಟ್ಟಿರತಕ್ಕ ಜಮೀನನ್ನು ಕೈಗಾರಿಕೋದ್ಯಮಿಗಳಿಗೆ ಐವತ್ತು ಸಾವಿರ ರೂಪಾಯಿಗಳಿಗೆ ಕೊಟ್ಟರೆ, ಡೆವಲಪ್‌ಮೆಂಟಲ್ ಲೋನ್, ಸಬ್ಸಿಡಿ ಎಲ್ಲವನ್ನೂ ಕೊಟ್ಟಹಾಗೆ ಆಗುತ್ತದೆ. ಆ ರೀತಿ ನಾವು ಕೊಡಲಿಕ್ಕೆ ಸಾಧ್ಯವಿಲ್ಲ ಅಂದರೆ ಕಡೆಯಪಕ್ಷ ಹೊಸದಾಗಿ ಕೈಗಾರಿಕೆ ಪ್ರಾರಂಭ ಮಾಡತಕ್ಕವರಿಗೆ ಕನ್‌ಸ್ಟ್ರಕ್ಷನ್ ಸಮಯದಲ್ಲಿ ಮೊದಲು ಮೂರು ವರ್ಷಗಳ ಇಂಟರೆಸ್ಟ್ ಏನು ಬರುತ್ತದೆ ಅದನ್ನು ಮಜಾ ಮಾಡಿ. ಕೈಗಾರಿಕೆಯು ಪ್ರಾರಂಭದ ಮೊದಲು ಮೂರು ವರ್ಷಗಳ ಕಾಲ ಇಂಟರೆಸ್ಟ್ ತೆಗೆದುಕೊಳ್ಳದೆ, ಕೈಗಾರಿಕೆ ಪ್ರಾರಂಭವಾಗಿ ಮೂರು ವರ್ಷ ಕಳೆದ ಮೇಲೆ ಇಂಟರೆಸ್ಟ್ ಕ್ಯಾಲ್ಕ್ಯುಲೇಟ್ ಮಾಡಿ ತೆಗೆದುಕೊಳ್ಳುವುದು ಸೂಕ್ತ ಎಂದು ನನಗನಿಸುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಸದಸ್ಯರು ಬಹಳ ಗಹನವಾದ ವಿಷಯವನ್ನು ಹೇಳುತ್ತಿದ್ದಾರೆ. ಇವೊತ್ತು ಸಣ್ಣ ಕೈಗಾರಿಕೆಗಳಿಗೂ ಮತ್ತು ದೊಡ್ಡ ಕೈಗಾರಿಕೆಗಳಿಗೂ ಬಹಳ ವ್ಯತ್ಯಾಸ ಇದೆ. ತಮ್ಮ ಹೇಳಿಕೆಯ ಪ್ರಕಾರ ಸುಮಾರು ೬ ಸಾವಿರ ಸಣ್ಣ ಸಣ್ಣ ಕೈಗಾರಿಕೆಗಳು ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳು ಮುಚ್ಚಿವೆ.

ಶ್ರೀ ಬಿ. ಎ. ಜೀವಿಜಯ.—ಶೇಕಡ ೩೦ರಷ್ಟು ರೋಗಗ್ರಸ್ತವಾಗಿವೆ.

ಶ್ರೀ ಎಂ. ಎಸ್. ಕೃಷ್ಣನ್.—ಮುಚ್ಚಿಕೊಂಡಿವೆಯೋ ಅಥವಾ ಮುಚ್ಚಿಕೊಳ್ಳುವ ಸ್ಥಿತಿಗೆ ಬಂದಿವೆಯೋ.

ಶ್ರೀ ಬಿ. ಎ. ಜೀವಿಜಯ.—ತಾವು ಯಾವರೀತಿಯಾದರೂ ತಿಳಿದುಕೊಳ್ಳಬಹುದು. ಮುಚ್ಚಿವೆ ಅಂದರೆ ಮುಚ್ಚಿದ ಹಾಗೆ.

ಶ್ರೀ ಎಂ. ಎಸ್. ಕೃಷ್ಣನ್.—ಕೇಂದ್ರಸರ್ಕಾರದವರು ಮೊನ್ನೆಯ ದಿವಸ ಒಂದು ಹೇಳಿಕೆ ಕೊಟ್ಟಿರುವುದನ್ನು ನಾನು ಪತ್ರಿಕೆಯಲ್ಲಿ ನೋಡಿದೆ. ಸಣ್ಣ ಸಣ್ಣ ಕೈಗಾರಿಕೆಗಳು ನಮ್ಮ ದೇಶದಲ್ಲಿ ಏನು ಮುಚ್ಚಿವೆ, ಅವುಗಳ ಬಗ್ಗೆ ಗಮನಹರಿಸುವುದಕ್ಕೆ, ಅವುಗಳನ್ನು ಸರಿಮಾಡುವುದಕ್ಕೋಸ್ಕರ ರೀಹೆಬಿಲಿಟೇಷನ್ ಸ್ಕೀಮ್ ತರತಕ್ಕಂಥ ಯೋಚನೆ ಮಾಡುತ್ತಿದ್ದೇವೆ, ಅದಕ್ಕೆ ಸೆಪರೇಟ್ ಆರ್ಗನೈಜೇಷನ್ ಮಾಡಬೇಕೆಂದು ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಆ ತರಹ ನಮ್ಮ ರಾಜ್ಯದಲ್ಲಿ ಏನಾದರೂ ಯೋಚನೆ ಮಾಡುತ್ತಿದ್ದೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಉಪಾಧ್ಯಕ್ಷರೆ, ಕೇಂದ್ರ ಸರ್ಕಾರದವರೂ ಕೂಡ ಸಣ್ಣ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಈಗಾಗಲೇ ಈ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಪ್ರಶ್ನೆಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಶೇಕಡ ೧೦ ರಷ್ಟು ಅಥವಾ ಗರಿಷ್ಟ ೭೫ ಸಾವಿರ ರೂಪಾಯಿಗಳಷ್ಟು ಸಹಾಯ ಧನವನ್ನು ಕೊಡಬೇಕೆಂದು ಕೇಂದ್ರಸರ್ಕಾರದವರು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಆದರೆ ಈ ರೀತಿ ಪುನಶ್ಚೇತನಗೊಳಿಸುವಾಗ ಒಂದು ಸಾರಿ ಅಥವಾ ಎರಡು ಸಾರಿ ಸಹಾಯ ಮಾಡಬಹುದು. ಆದರೆ ಪದೇ ಪದೇ ಈ ರೀತಿ ಮುಚ್ಚುವ ಸ್ಥಿತಿಗೆ ಕೈಗಾರಿಕೆಗಳು ಬಂದರೆ ಸಹಾಯ ಮಾಡುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರು ಸಹಾಯ ಮಾಡುವಾಗ ನಮ್ಮ ರಾಜ್ಯಸರ್ಕಾರಕ್ಕೂ ಕೂಡ ಸ್ವಲ್ಪಮಟ್ಟಿಗೆ ಅನುಕೂಲವಾಗುತ್ತದೆ ನಮ್ಮ ಕರ್ನಾಟಕ ಫೈನಾನ್ಷಿಯಲ್ ಕಾರ್ಪೊರೇಷನ್ನವರು ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಅವರು ತಮ್ಮ ಯೋಜನೆಯ ಪ್ರಕಾರ ಈಗಾಗಲೇ ೭೫ ಸಣ್ಣ ಕೈಗಾರಿಕೆಗಳಿಗೆ ಸಹಾಯ ಮಾಡಿದ್ದಾರೆ. ಈಗ ನಮ್ಮ ಬೆಂಗಳೂರು ಒಂದರಲ್ಲೇ ಸುಮಾರು ೧,೧೭೫ ಸಣ್ಣ ಕೈಗಾರಿಕೆಗಳು ತೊಂದರೆಗೆ ಸಿಕ್ಕಿವೆ ಎನ್ನತಕ್ಕ ವಿಚಾರ ಇದೆ

ಶ್ರೀ ಸಿ. ಎನ್. ಭಾಸ್ಕರಪ್ಪ.—ಮಾನ್ಯ ಉಪಾಧ್ಯಕ್ಷರೆ, ಇನ್ನು ಆಡಳಿತದ ವಿಭಾಗದಲ್ಲಿ ಹೇಳುವುದಾದರೆ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ, ಕನ್ನಡವನ್ನು ಎಲ್ಲಾ ಹಂತದಲ್ಲೂ ಪರಿಪೂರ್ಣವಾಗಿ ಜಾರಿಗೆ ತಂದಿದ್ದೇವೆ ಎಂದು ಹೇಳಿದ್ದಾರೆ. ಆದರೆ ಎಲ್ಲಾ ಹಂತಗಳಲ್ಲೂ ಪರಿಪೂರ್ಣವಾಗಿ ಜಾರಿಗೆ ತಂದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಒಟ್ಟಿನಲ್ಲಿ ಕನ್ನಡವನ್ನು ಎಲ್ಲ ಹಂತಗಳಲ್ಲೂ ಜಾರಿಗೆತರತಕ್ಕ ವಿಚಾರದಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ, ಇದು ಇನ್ನೂ ಪರಿಪೂರ್ಣವಾಗಿ ಜಾರಿಗೆ ಬಂದಿಲ್ಲ. ಮಾನ್ಯ ಉಪಾಧ್ಯಕ್ಷರೆ ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ಹೇಳುವುದಾದರೆ ನಮ್ಮ ರಾಜ್ಯದಲ್ಲಿರತಕ್ಕ ಲೋಕ ಸೇವ ಆಯೋಗ ಏನಿದೆ ಅದರಲ್ಲಿ ನಡೆಸುತ್ತಿರುವ ಸಂದರ್ಶನಗಳಲ್ಲಿ ನಮ್ಮ ರಾಜ್ಯದ ಯುವಕರಿಗಿಂತಲೂ ಹೊರ ರಾಜ್ಯಗಳಿಂದ ಬಂದಂಥ ಯುವಕರು ಹೆಚ್ಚಿನ ರೀತಿಯಲ್ಲಿ ಆಯ್ಕೆ ಆಗುತ್ತಿದ್ದಾರೆ. ಇದಕ್ಕೆ ಕಾರಣ ಅಲ್ಲಿ ನಡೆಸತಕ್ಕ ಪರೀಕ್ಷೆಯ ವೈಖರಿ ಇರಬಹುದು ಅಥವಾ ಅವರು ಅನುಸರಿಸುತ್ತಿರುವ ಕಾನೂನು ಚೌಕಟ್ಟು ಆ ರೀತಿ ಇರಬಹುದು. ಅಲ್ಲಿ ೩ ಜನರಲ್ ಸಬ್ಜೆಕ್ಟ್ ಇರುತ್ತವೆ. ಅವುಗಳ ಪೈಕಿ ಜನರಲ್ ಇಂಗ್ಲಿಷ್ ಕೂಡ ಒಂದು, ಜನರಲ್ ಇಂಗ್ಲೀಷ್ ಕಷ್ಟವಾದ್ದರಿಂದ ನಮ್ಮ ರಾಜ್ಯದ ಯುವಕರಿಗಿಂತಲೂ ಹೊರರಾಜ್ಯದವರಿಗೆ ಇದು ಅನುಕೂಲವಾಗಿ ಅವರು ಹೆಚ್ಚು ಹೆಚ್ಚು ಆಯ್ಕೆ ಆಗುತ್ತಿದ್ದಾರೆ ಇದು ಆಗಬಾರದು ನಾನು ತಮ್ಮಲ್ಲಿ ಕೇಳಿಕೊಳ್ಳುವುದು ಏನೆಂದರೆ ನಮ್ಮ ರಾಜ್ಯದಲ್ಲಿರತಕ್ಕ ಲೋಕ ಸೇವಾ ಆಯೋಗ ಏನಿದೆ ಇದರಲ್ಲಿ ನಡೆಸತಕ್ಕ ಪರೀಕ್ಷೆಗಳು ಕನ್ನಡದಲ್ಲಿ ನಡೆಯಬೇಕು ನಮ್ಮ ರಾಜ್ಯದ ಯುವಕರು ಹೆಚ್ಚು ಹೆಚ್ಚು ಆಯ್ಕೆ ಆಗಬೇಕು, ನಮ್ಮ ಜನರ ಕಷ್ಟ ಸುಖಗಳನ್ನು ಅರಿತವರು ಅಧಿಕಾರಿಗಳಾಗಿ ಆಯ್ಕೆ ಆಗಬೇಕು. ಇದಾಗಬೇಕಾದರೆ ೧೦೦-೧೫೦ ಅಂಕಗಳನ್ನು ಒಳಗೊಂಡಂತೆ ಕನ್ನಡ ಭಾಷೆಯನ್ನು ಒಂದು ವಿಶೇಷ ವಿಷಯವಾಗಿ ಇಟ್ಟು ಅದರಲ್ಲಿ ಪ್ರತಿಯೊಬ್ಬರೂ ಕಡ್ಡಾಯವಾಗಿ ಭಾಗವಹಿಸುವಂತೆ ಮಾಡಿದರೆ ಮಾತ್ರ ನಮ್ಮ ಕನ್ನಡ

ಯುವಕರಿಗೆ ಹೆಚ್ಚು ಹೆಚ್ಚು ಅವಕಾಶಗಳು ಸಿಕ್ಕಿ ಆಯ್ಕೆಯಾಗಲು ಅನುಕೂಲವಾಗುತ್ತದೆ. ಸರ್ಕಾರ ಈ ಬಗ್ಗೆ ಒಂದು ದಿಟ್ಟ ನಿಲುವನ್ನು ತೆಗೆದುಕೊಳ್ಳಬೇಕು. ಲೋಕ ಸೇವಾ ಆಯೋಗದಲ್ಲಿ ಕಡ್ಡಾಯ ವಿಷಯಗಳನ್ನು ಏನು ಇಟ್ಟಿದ್ದಾರೆ ಅವುಗಳ ಪೈಕಿ ಕನ್ನಡ ಭಾಷೆಯನ್ನೂ ಕಡ್ಡಾಯವಾಗಿ ಮಾಡಬೇಕು. ಹಾಗೆ ಮಾಡಿದರೆ ಮಾತ್ರ ನಮ್ಮ ರಾಜ್ಯದ ಯುವಕರು ಈ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಥವಾ ಸಂದರ್ಶನದಲ್ಲಿ ಜಯಗಳಿಸುವುದಕ್ಕೆ ಅನುಕೂಲವಾಗುತ್ತದೆ. ಗ್ರಾಮಾಂತರ ಪ್ರದೇಶದಿಂದ ಬರತಕ್ಕ ರೈತರ ಮಕ್ಕಳು ತಮ್ಮ ಜೀವನದಲ್ಲಿ ಮುಂದೆ ಬರಬೇಕು, ಅವರಿಗೆ ಜಲ್ಲಾ ರೀತಿಯ ನೆರವೂ ಸಿಕ್ಕಬೇಕೆಂದು ನಾವೆಲ್ಲರೂ ಇಲ್ಲಿ ಭಾಷಣ ಮಾಡುತ್ತೇವೆ. ಶಾಲಾ ಕಾಲೇಜುಗಳಿಗೆ ಸೇರುವಾಗ ಗ್ರಾಮಾಂತರ ಪ್ರದೇಶದಿಂದ ಬರತಕ್ಕ ಮಕ್ಕಳಿಗೆ ಶೇಕಡ ೨೫ ರಷ್ಟು ರಿಸರ್ವೇಷನ್ ಇಡಬೇಕೆಂದು ನಾವು ಹೇಳುತ್ತಿದ್ದೇವೆ. ಆದರೆ ನಿಜವಾಗಿಯೂ ಅದು ಕಾರ್ಯರೂಪದಲ್ಲಿ ಬಂದಿಲ್ಲ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಗರ ಪ್ರದೇಶದ ಮಕ್ಕಳ ಜೊತೆ ಗ್ರಾಮಾಂತರ ಪ್ರದೇಶದಿಂದ ಬರತಕ್ಕ ಮಕ್ಕಳು ಸ್ಪರ್ಧಿಸುವುದಕ್ಕೆ ಸಾಧ್ಯವಿಲ್ಲ. ನಗರ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶದಿಂದ ಬರತಕ್ಕ ಎಲ್ಲಾ ವಿದ್ಯಾರ್ಥಿಗಳನ್ನೂ ಒಟ್ಟಿಗೆ ಪರೀಕ್ಷೆ ಮಾಡುವುದಾಗಲಿ, ಒಟ್ಟಿಗೇ ಸಂದರ್ಶನ ನಡೆಸುವುದಾಗಲಿ ಮಾಡಿದರೆ ಗ್ರಾಮಾಂತರ ಪ್ರದೇಶದಿಂದ ಬರತಕ್ಕ ಮಕ್ಕಳಿಗೆ ತುಂಬಾ ಕಷ್ಟವಾಗುತ್ತದೆ. ೧೦೦ಕ್ಕೆ ೮೦ರಷ್ಟು ಇರತಕ್ಕಂಥ ಗ್ರಾಮಾಂತರ ಪ್ರದೇಶದ ಮಕ್ಕಳ ಹಿತವನ್ನು ಕಾಪಾಡಬೇಕೆಂದರೆ ಅವರಿಗೆ ಶೇಕಡಾವಾರು ೨೦ ರಷ್ಟು ರಿಸರ್ವೇಷನ್ ಇಡಬೇಕೆಂದು ತಮ್ಮ ಮುಂದೆ ಈ ವಿಚಾರವನ್ನು ಇಡುತ್ತೇನೆ.

ಶ್ರೀ ಸಿ. ಬೈರೇಗೌಡ.—ನೇಮಕಾತಿಯಲ್ಲಿ ರಿಸರ್ವೇಷನ್ ಇಡಬೇಕೆಂದು ಹೇಳುತ್ತೀರೋ ಅಥವಾ ಶಾಲಾ ಕಾಲೇಜುಗಳಲ್ಲಿ ಸೀಟುಗಳನ್ನು ಕೊಡುವ ಬಗ್ಗೆ ರಿಸರ್ವೇಷನ್ ಇಡಬೇಕೆಂದು ಹೇಳುತ್ತೀರೋ ದಯವಿಟ್ಟು ಸ್ಪಷ್ಟವಾಗಿ ತಿಳಿಸಿ.

ಶ್ರೀ ಸಿ. ಎನ್. ಭಾಸ್ಕರಪ್ಪ.—ಉದ್ಯೋಗ ನೇಮಕಾತಿಯಲ್ಲಿ ರಿಸರ್ವೇಷನ್ ಇಡಬೇಕೆಂದು ಹೇಳುತ್ತೇನೆ. ಏಕೆಂದರೆ ೧೦ ಪರ್ಸೆಂಟ್ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳ ಪ್ರವೇಶಕ್ಕಾಗಿ ಗ್ರಾಮಾಂತರ ಪ್ರದೇಶಗಳ ಮಕ್ಕಳಿಗೆ ಸೀಟ್ ರಿಸರ್ವೇಷನ್ ಇಟ್ಟಹಾಗೆ, ಅದೇ ರೀತಿಯಲ್ಲಿ ಯಾವುದೇ ಉದ್ಯೋಗಕ್ಕೆ ರಾಜ್ಯಮಟ್ಟದಲ್ಲಿ ನಡೆಯತಕ್ಕಂಥ ಸಂದರ್ಭದಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕಂಥ ಅಭ್ಯರ್ಥಿಗಳಿಗೆ ಶೇಕಡ ೨೫ರಷ್ಟು ರೀಯಾಯಿತಿಯನ್ನು ಇಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಮಾನ್ಯ ರಾಜ್ಯಪಾಲರು ಈ ಸದನದಲ್ಲಿ ಮಾತನಾಡಿರುವುದನ್ನು ಸ್ವಾಗತಿಸಿ, ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದಕ್ಕೆ ತಮಗೂ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಐ. ಬಿ. ಶಂಕರ್ (ಚಿಕ್ಕಮಗಳೂರು).—ಸನ್ಮಾನ್ಯ ಉಪಾಧ್ಯಕ್ಷರೇ ಮಾನ್ಯ ರಾಜ್ಯಪಾಲರು ಮಾಡಿದಂಥ ಭಾಷಣವನ್ನು ನಾನು ಸ್ವಾಗತಿಸುತ್ತಾ ಕೆಲವೊಂದು ಅನಿಸಿಕೆಗಳನ್ನು ಸಭೆಯ ಮುಂದೆ ನಾನು ಅರ್ಪಿಸುತ್ತೇನೆ. ಮೊಟ್ಟಮೊದಲನೆಯದಾಗಿ ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತ್‌ಗಳನ್ನು ಸ್ಥಾಪಿಸಿ ಅದರಿಂದ ಅಧಿಕಾರ ವಿಕೇಂದ್ರೀಕರಣ ಮಾಡುವ ಒಂದು ದೃಢ ನಿರ್ಧಾರವನ್ನು ತೆಗೆದುಕೊಂಡದ್ದು ಸ್ವಾಗತಾರ್ಹವಾದುದಾಗಿದೆ. ಈ ಒಂದು ದಿಸೆಯಲ್ಲಿ ಎರಡು ಮಾತುಗಳನ್ನು ನಾನು ಹೇಳಬಯಸುತ್ತೇನೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತಿಗಳನ್ನು ರಚನೆ ಮಾಡಿ ಒಂದು ವರ್ಷ ಕಳೆಯುತ್ತಾ ಬಂದರೂ ಇದರಲ್ಲಿರುವ ಸಣ್ಣಪುಟ್ಟ ಲೋಪದೋಷಗಳನ್ನು ಸರಿಪಡಿಸುವಲ್ಲಿಯಾಗಲಿ, ಅವರ ಆಡಳಿತ ಏನು ಎನ್ನುವುದನ್ನು ನೋಡಿ ಸರ್ಕಾರದವರು ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲವೆಂದು ನಾನಾದರೂ ಹೇಳಲು ಇಚ್ಛೆ ಪಡುತ್ತೇನೆ. ಕಾರಣವಾದರೂ ಇಷ್ಟೇ. ಮೇಲಿನ ಅಧಿಕಾರಿಗಳನ್ನು ವಿಕೇಂದ್ರೀಕರಣ ಮಾಡಲು ಹೋಗಿ ಜಿಲ್ಲಾ ಪರಿಷತ್ ಅಧಿಕಾರಿಗಳನ್ನಾಗಿ ಮಾಡಿರತಕ್ಕಂಥ ಈ ಅಧಿಕಾರಿಗಳ ವರ್ತನೆಯನ್ನು ನೋಡಿದರೆ ಹೆದರಿಕೆಯಾಗುತ್ತದೆ. ಇದಕ್ಕೆ ಕಾರಣವಾದರೂ ಇಷ್ಟೇ. ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರು ಆದೇಶವನ್ನು ಕೊಟ್ಟರೂ ಸಹಿತ ಅಕೌಂಟ್ಸ್ ಆಫೀಸರ್ಸ್ ಮತ್ತು ಸಂಬಂಧಪಟ್ಟ ಅಧಿಕಾರಿಗಳು ಪ್ರತಿಯೊಂದು ಹಂತದಲ್ಲೂ ಕ್ವೆಯರಿಯನ್ನು ಹಾಕುತ್ತಿರುತ್ತಾರೆ. ಶ್ರೀಮಾನ್ ಬಚ್ಚೇಗೌಡರು ಹೇಳಿದಹಾಗೆ ಅಧಿಕಾರಿಗಳ ಸಂಖ್ಯೆ ಜಾಸ್ತಿಯಾಗಿದೆ. ಎಂದು, ಒಂದು ಬಿಲ್ ಪಾಸ್ ಮಾಡಬೇಕಾದರೆ, ಹದಿನೈದು ದಿವಸಗಳಾದರೂ ಬೇಕಾಗುತ್ತದೆ.

ಪ್ರತಿಯೊಂದು ಹಂತದಲ್ಲಿಯೂ ಕ್ವಯರಿ ಹಾಕತಕ್ಕಂಥ ಆಫೀಸರುಗಳ ಸಂಖ್ಯೆ ಜಾಸ್ತಿಯಾಗಿದೆ ಒಂದು ಬಿಲ್ ಕೊನೆಪಕ್ಷ ೮ ದಿವಸಗಳಲ್ಲಿ ಪ್ರತಿಯೊಂದು ಹಂತದಲ್ಲೂ ತೀರ್ಮಾನವಾಗಬೇಕೆಂದು ಒತ್ತಾಯ ಮಾಡುವಂತೆ ಸರ್ಕಾರದವರು ದಯವಿಟ್ಟು ಹೆಚ್ಚಿನ ಶಿಸ್ತನ್ನು ವಹಿಸಬೇಕೆಂದು ಹೇಳಬಯಸುತ್ತೇನೆ. ಇದೇ ಸಂದರ್ಭದಲ್ಲಿ ನನ್ನ ಪ್ರಾರ್ಥನೆ ಏನೆಂದರೆ ಮಲೆನಾಡು ಪ್ರದೇಶಗಳಿಗೆ ಬಹಳಷ್ಟು ಅನ್ಯಾಯ ಮಾಡಿದ್ದಾರೆ. ಬೋರ್‌ವೆಲ್‌ಗಳನ್ನು ತೆಗೆಯುವುದರ ಸಂಖ್ಯೆಯನ್ನು ಬಹಳಷ್ಟು ಸ್ಥಗಿತಗೊಳಿಸಿದ್ದಾರೆ, ಇದರಿಂದ ಅಲ್ಲಿ ನೀರಿನ ಅಭಾವ ಜಾಸ್ತಿಯಾಗಿದೆ. ಈ ಲೋಪದೋಷಗಳನ್ನು ಸರಿಪಡಿಸಬೇಕೆಂದು ಮಾನ್ಯ ಸಚಿವರಾದ ನಜೀರ್‌ಸಾಬ್‌ರವರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಜೊತೆಗೆ ಹಿಂದಿನ ಅಸೆಂಬ್ಲಿಯಲ್ಲಿ ಇನ್ನು ಮಾತನಾಡುತ್ತ ಮಲೆನಾಡು ಪ್ರದೇಶಗಳಿಗೆ ಹಾಕಿರತಕ್ಕಂಥ ಬೋರ್‌ವೆಲ್‌ಗಳು ಸಾಕಷ್ಟು ಪ್ರಮಾಣದಲ್ಲಿ ಕೆಟ್ಟುಹೋಗಿವೆ.

ನ್ಯಾಚುರಲ್ ವಾಟರ್ ಸೋರ್ಸ್ ಏನಿದೆ ಅದನ್ನು ಕೊಳವೆ ಮೂಲಕ ತರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿದಾಗ ನಜೀರ್‌ಸಾಬ್‌ರವರು ಒಪ್ಪಿಗೆ ಕೊಟ್ಟು ಅಧಿಕಾರಿಗಳಿಗೆ ಆದೇಶ ಕೊಡುತ್ತೇವೆಂದು ಹೇಳಿದರು. ಆದರೆ ಅದು ಇನ್ನೂ ಉತ್ತಮ ಮಟ್ಟದಲ್ಲಿ ನಡೆಯುತ್ತಿಲ್ಲ. ಪ್ರಯೋಗಾತ್ಮಕವಾಗಿ ನಡೆಸಿ ಅಲ್ಲಿಗೆ ನಿಲ್ಲಿಸಿದ್ದಾರೆ. ಬಯಲುಸೀಮೆಗಿಂತ ಮಲೆನಾಡು ಭಾಗಕ್ಕೆ ಹೆಚ್ಚಿಗೆ ಕೊಳವೆ ಬಾವಿಗಳನ್ನು ಹಾಕಬೇಕು. ಬಯಲುಸೀಮೆಗೂ ಮಲೆನಾಡಿಗೂ ಬಹಳ ವ್ಯತ್ಯಾಸ ಇದೆ. ಬಯಲುಸೀಮೆಯಲ್ಲಿ ಒಂದೊಂದು ಕಡೆ ನೂರಿನ್ನೂರು ಮನೆಗಳು ಇದ್ದರೆ ಮಲೆನಾಡಿನಲ್ಲಿ ೧೫–೨೦ ಮನೆಗಳು ಇದ್ದರೆ ಅದೇ ಜಾಸ್ತಿ. ಗುಡ್ಡಗಾಡು ಪ್ರದೇಶಗಳಲ್ಲಂತೂ ಒಟ್ಟಿಗೆ ಮನೆಗಳು ಇರುವುದು ಕಷ್ಟ. ಆದರೆ ಸರ್ಕಾರದವರು ಮಲೆನಾಡಿಗೂ ಮತ್ತು ಬಯಲುಸೀಮೆಗೂ ಒಂದೇ ನಾರ್ಮ್ಸ್ ಇಟ್ಟಿದ್ದಾರೆ. ಈ ರೀತಿ ಇಟ್ಟರೆ ಆಗುವುದಿಲ್ಲ. ಎನ್.ಆರ್.ಇ.ಪಿ. ಮತ್ತು ಮಿನಿವಾಟರ್ ಸ್ಕೀಂಗಳಲ್ಲಿ ಗೊತ್ತುಪಡಿಸಿರತಕ್ಕ ಜನಸಂಖ್ಯೆಯ ಆಧಾರದ ಪ್ರಮಾಣವನ್ನು ಕಡಿಮೆ ಮಾಡಬೇಕೆಂದು ಸಚಿವರಲ್ಲಿ ಪ್ರಾರ್ಥಿಸುತ್ತೇನೆ.

ಮಾನ್ಯ ಸಿಂಧ್ಯರವರು ಇಲ್ಲಿಯೇ ಇದ್ದಾರೆ. ಅವರ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ. ಎಸ್.ಸಿ. ಎಸ್.ಟಿ ಯವರಿಗೆ ೧೮ ಪರ್ಸೆಂಟ್ ರಿಸರ್ವೇಷನ್ ಏನು ಇಡುತ್ತಿದ್ದೀರಿ ಅದು ಪಟ್ಟಣ ವಾಸಿಗಳಿಗೆ ಮಾತ್ರ ಹೆಚ್ಚಾಗಿ ಲಭ್ಯವಾಗುತ್ತಿದೆ. ಪಟ್ಟಣ ವಾಸಿಗಳಲ್ಲ ದೊಡ್ಡ ಅಧಿಕಾರಿಗಳು, ಶಾಸಕರು, ಮಂತ್ರಿಗಳು ಇರಬಹುದು ಸರ್ಕಾರ ಏನು ಸೌಲಭ್ಯ ಕೊಡುತ್ತಿದೆ ಅದು ಇಲ್ಲಿಯೇ ಹಂಚಿಕೆಯಾಗುತ್ತಿದೆಯೇ ಹೊರತು ಮೂಲವಾಗಿ ತಲುಪಬೇಕಾದವರಿಗೆ ತಲುಪುತ್ತಿಲ್ಲ. ಮಾನ್ಯ ಸಿಂಧ್ಯರವರು ಈಗ ಆರ್.ಟಿ.ಒ.ಗಳಲ್ಲಿ ಆಟೋ ಓಡಿಸಲು ಲೈಸೆನ್ಸ್ ಕೊಡುವ ಪದ್ಧತಿ ಇದೆ. ಅಲ್ಲಿ ಪರಿಶಿಷ್ಟ ವರ್ಗದವರಿಗೆ ವಿಶೇಷ ಸವಲತ್ತು ಕೊಡುತ್ತಾರೆ. ಆದರೆ ನಾನು ಚಿಕ್ಕಮಗಳೂರಿನಲ್ಲಿ ನೋಡಿದ ಹಾಗೆ ಈ ಬಗ್ಗೆ ಅಲ್ಲಿ ಒಂದು ರೀತಿಯ ರ್‍ಯಾಕೆಟ್ ಇದೆ. ಅದೇ ರೀತಿ ಬೇರೆ ಜಿಲ್ಲೆಗಳಲ್ಲಿ ಕೂಡ ಇದೆ: ಹೊರಗಡೆಯಿಂದ ಬಂದು ಲೈಸನ್ಸಿಗೆ ಅರ್ಜಿ ಹಾಕಿಕೊಂಡು ೩–೪ ಸಾವಿರ ರೂಪಾಯಿಗಳ ದುಡ್ಡು ಮಾಡಿಕೊಂಡು ಹೋಗುವ ರ್‍ಯಾಕೆಟ್ ನಡೆಯುತ್ತಿದೆ. ದಯವಿಟ್ಟು ಇದಕ್ಕೆ ಅವಕಾಶ ಕೊಡದೆ ಸಿಂಧ್ಯರವರು ಇದನ್ನು ತಡೆಯುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ

ಶ್ರೀ ಬಿ.ಬಿ. ನಿಂಗಯ್ಯ.—ಮಾನ್ಯ ಸ್ನೇಹಿತರು ಹೇಳಿದ ವಿಚಾರದಲ್ಲಿ ಸತ್ಯ ಇದೆ ಎಂಬ ಮಾತನ್ನು ಹೇಳುತ್ತೇನೆ. ಆಟೋ ಪರ್ಮಿಟ್‌ಗಳನ್ನು ಕೊಡುವುದರಲ್ಲಿ ಮೀಸಲಾತಿ ಇಟ್ಟಿರುವುದರಿಂದ ಬಹುತೇಕ ಜನರು ಹರಿಜನರ ಹೆಸರಿನಲ್ಲಿ ಪರ್ಮಿಟ್‌ಗಳನ್ನು ತೆಗೆದುಕೊಂಡಿದ್ದಾರೆ. ಬಹುಶಃ ಇದು ಶಂಕರ್‌ರವರ ಗಮನಕ್ಕೆ ಬಂದು ಹೇಳಿದ್ದಾರೆಂದು ತಿಳಿದುಕೊಂಡಿದ್ದೇನೆ. ಯಾರು ನಿರುದ್ಯೋಗಿ ಪದವೀಧರರು ಮತ್ತು ವಿದ್ಯಾವಂತರು ಇದ್ದಾರೆ ಅಂಥವರಿಗೆ ಮಾತ್ರವಲ್ಲದೆ ಬೇರೆಯವರಿಗೆ ಪರ್ಮಿಟ್ ಕೊಡಬಾರದೆಂದು ಷರತ್ತುಹಾಕಿದರೆ ಅದನ್ನು ಮಿನಿಮೈಸ್ ಮಾಡಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮೊದಲನೆಯದಾಗಿ, ಸದಸ್ಯರು ಈ ಸದನದಲ್ಲಿ ಇವತ್ತು ಈ ವಿಚಾರವನ್ನು ತಂದಿರತಕ್ಕದ್ದು. ಇದು ನನ್ನ ಗಮನಕ್ಕೆ ಇದುವರೆಗೆ ಬಂದಿರಲಿಲ್ಲ. ಇಡೀ ರಾಜ್ಯದಲ್ಲಿ ಆಟೋಗಳಿಗ ಪರ್ಮಿಟ್ ಸಿಸ್ಟಂ ರದ್ದು ಮಾಡಿ ಎಲ್ಲರಿಗೂ ಪರ್ಮಿಟ್ ಕೊಡತಕ್ಕ ವಿಚಾರ ಸರ್ಕಾರದ ಮುಂದಿದೆ. ಆದ್ದರಿಂದ ಇನ್ನು ಮುಂದೆ ಆಟೋ ಪರ್ಮಿಟ್‌ಗಾಗಿ ಯಾರೂ ಸಹ ಒದ್ದಾಡತಕ್ಕ, ತೊಂದರೆ ಪಡತಕ್ಕ ಪರಿಸ್ಥಿತಿ ಬರುವುದಿಲ್ಲ.

ಶ್ರೀ ಐ.ಬಿ. ಶಂಕರ್.—ಇದರ ಜೊತೆಗೆ ಇನ್ನೊಂದು ಆಶ್ಚರ್ಯದ ಸಂಗತಿ ಏನೆಂದರೆ, ಪರಿಶಿಷ್ಟ ವರ್ಗದವರಲ್ಲಿ ಹೆಚ್ಚು ಕಡಿಮೆ ತಿಂಗಳಿಗೆ ೨೦-೩೦ ಸಾವಿರ ರೂಪಾಯಿಗಳ ವರಮಾನ ಇದ್ದಂಥವರು ಇದರ ಉಪಯೋಗವನ್ನು ಜಾಸ್ತಿ ಪಡೆಯುತ್ತಿದ್ದಾರೆ. ಆದ್ದರಿಂದ ಬೇರೆ ಕಡೆ ಇದಕ್ಕೆ ಹೇಗೆ ವರಮಾನದ ಮಿತಿ ಹಾಕಿದ್ದೀರೋ, ೪೮೦೦ ರೂಪಾಯಿ ಇದ್ದವರಿಗೆ ಆದ್ಯತೆ ಕೊಡಬೇಕೆಂದು ನಿಯಮ ಏನು ಇದೆಯೋ ಅದೇ ನಿಯಮ ಪರಿಶಿಷ್ಟ ವರ್ಗದವರಿಗೂ ಅನ್ವಯವಾಗುವಂತೆ ಮಾಡಬೇಕು. ಜೊತೆಗೆ ಹಳ್ಳಿಯಿಂದ ಬಂದಂತಹ ಪರಿಶಿಷ್ಟ ವರ್ಗದ ಯುವಕರಿಗೆ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕೊಟ್ಟ ಹಾಗೆ ಹೆಚ್ಚಿಗೆ ಅಂಕಗಳನ್ನು ಕೊಟ್ಟು ಅವರನ್ನು ಮುಂದೆ ತರಲು ಪ್ರಯತ್ನ ಮಾಡಬೇಕಾಗಿದೆಯೇ ಹೊರತು ಪರಿಶಿಷ್ಟ ವರ್ಗದವರ ಹೆಸರು ಹೇಳಿಕೊಂಡು ದುರುಪಯೋಗ ಮಾಡುವುದಕ್ಕೆ ಸರ್ಕಾರ ಅವಕಾಶ ಕೊಡಬಾರದೆಂದು ಹೇಳುತ್ತೇನೆ ಇದರ ಬಗ್ಗೆ ಸರ್ಕಾರ ತೀವ್ರ ಗಮನಹರಿಸಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ. ಈ ಟ್ರ್ಯಾಕ್ಟರುಗಳಿಗೆ ಮೂರು ವರ್ಷಕ್ಕೊಂದು ಸಾರಿ ಫಿಟ್‌ನೆಸ್ ಸರ್ಟಿಫಿಕೇಟ್ ಕೊಡುವ ಕ್ರಮ ಇಟ್ಟುಕೊಂಡಿದ್ದಾರೆ. ಟ್ರ್ಯಾಕ್ಟರ್ ಬಗ್ಗೆ ಇರುವ ಕಾನೂನನ್ನು ಬದಲಾವಣೆ ಮಾಡಬೇಕು. ಟ್ರ್ಯಾಕ್ಟರ್‌ನಲ್ಲಿ ಮನೆಯಿಂದ ಭತ್ತ ತೆಗೆದುಕೊಂಡು ಹೋಗಬಹುದು. ಆದರೆ ಅಕ್ಕಿಯನ್ನು ತರುವಹಾಗಿಲ್ಲ. ಅದು ಕಾನೂನಿನ ಪ್ರಕಾರ ಅಫೆನ್ಸ್ ಆಗುತ್ತದೆ. ಭತ್ತ ತೆಗೆದುಕೊಂಡು ಹೋಗಬಹುದು, ಅಕ್ಕಿ ತರುವುದಕ್ಕೆ ಆಗುವುದಿಲ್ಲ ಎಂದರೆ ಮಿಲ್‌ಗೆ ತೆಗೆದುಕೊಂಡು ಹೋಗಬಹುದು. ಅಕ್ಕಿ ತರುವುದಕ್ಕೆ ಆಗುವುದಿಲ್ಲ ಎಂದರೆ ಮಿಲ್‌ಗೆ ತೆಗೆದುಕೊಂಡು ಹೋಗಿದ್ದನ್ನು ತಲೆ ಮೇಲೆ ಹೊತ್ತಿಕೊಂಡು ಬರುವುದಕ್ಕಾಗುತ್ತದೆಯೆ ? ಟ್ರ್ಯಾಕ್ಟರುಗಳನ್ನು ಉಪಯೋಗ ಮಾಡುವಾಗ ನಾನಾ ಅಡಚಣೆಗಳಿವೆ. ಅಧಿಕಾರಿಗಳು ಇದರಲ್ಲಿ ದುರುಪಯೋಗಪಡಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಟ್ರ್ಯಾಕ್ಟರುಗಳಿಗೆ ಏನು ಕಾನೂನು ಮಾಡಿದ್ದೀರಿ ಅದನ್ನು ತಿದ್ದುಪಡಿ ಮಾಡಿ ಜನರಿಗೆ ಅನುಕೂಲ ಮಾಡಿಕೊಡಬೇಕು. ಏಕೆಂದರೆ ರೈತರಿಗೆ ಇದರಿಂದ ತೊಂದರೆ ಆಗುತ್ತಿದೆ. ಮಾನ್ಯ ಸಿಂಧ್ಯಾ ಅವರು ಬಸ್ ಟೈಮಿಂಗ್ಸ್ ಚೆನ್ನಾಗಿ ಮಾಡಿದ್ದಾರೆ, ಉತ್ತಮವಾದ ಸರ್ವಿಸ್ ಕೊಡುತ್ತಿದ್ದಾರೆ ಇದೇ ರೀತಿ ಟ್ರ್ಯಾಕ್ಟರ್ ಬಗ್ಗೆ ಇರುವ ಕಾನೂನನ್ನು ರೈತರಿಗೆ ಅನುಕೂಲವಾಗುವ ಹಾಗೆ ತಿದ್ದುಪಡಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೇ, ತಮಗೂ ಗೊತ್ತಿದೆ. ತಾವೂ ಕೂಡ ರೈತ ಸಂಘಟನೆ ಮಾಡಿರುವವರು. ರೈತರು ಅವರ ಟ್ರ್ಯಾಕ್ಟರುಗಳನ್ನು ವ್ಯವಸಾಯಕ್ಕೆ ಸಂಬಂಧಪಟ್ಟಹಾಗೆ ಉಪಯೋಗಿಸಿಕೊಳ್ಳುವುದರಲ್ಲಿ ತಕರಾರು ಇರಬಾರದು. ಆ ರೀತಿ ತೊಂದರೆ ಕೊಡುತ್ತಿಲ್ಲ. ಆದರೆ ಬಾಡಿಗೆಗೆ ಓಡಿಸತಕ್ಕ ಸಂದರ್ಭದಲ್ಲಿ ಮಾತ್ರ ಮೋಟಾರು ವಾಹನಗಳ ಅಧಿಕಾರಿಗಳ ಗಮನಕ್ಕೆ ಬಂದಾಗ ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡಿರತಕ್ಕ ಘಟನೆಗಳು ನನ್ನ ಗಮನಕ್ಕೆ ಬಂದಿವೆ. ಬೇರೆ ರೀತಿಯಲ್ಲಿಯೂ ತೊಂದರೆ ಕೊಟ್ಟಿದ್ದನ್ನು ನನ್ನ ಗಮನಕ್ಕೆ ತಂದರೆ ಖಂಡಿತವಾಗಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಎರಡನೆಯದಾಗಿ ಫಿಟ್‌ನೆಸ್ ಸರ್ಟಿಫಿಕೇಟ್ ಮೂರು ವರ್ಷಕ್ಕೊಂದು ಸಾರಿ ಕೊಡುತ್ತಿದ್ದೇವೆ. ಪ್ರತಿವರ್ಷ ಹೋಗಿ ತೆಗೆದುಕೊಳ್ಳುವುದಕ್ಕೆ ತೊಂದರೆಯಾಗುತ್ತಿತ್ತು ಎಂದು ಮೂರು ವರ್ಷಗಳಿಗೊಂದು ಸಾರಿ ಕೊಡುವಂತೆ ಮಾಡಿದ್ದೇವೆ. ಮೊದಲು ಜಿಲ್ಲಾ ಕೇಂದ್ರಗಳಿಗೆ, ಆರ್.ಟಿ.ಓ. ಆಫೀಸಿಗೆ ರೈತರು ಬರಬೇಕಾಗಿತ್ತು. ಈಗ ಅದರ ಅಗತ್ಯ ಇಲ್ಲ. ಮೋಟಾರು ವಾಹನಗಳ ಇಲಾಖೆ ಅಧಿಕಾರಿಗಳು ಪ್ರತಿ ತಾಲ್ಲೂಕಿನಲ್ಲಿ ಮುಂಚಿತವಾಗಿ ದಿನಾಂಕವನ್ನು ನಿಗದಿ ಮಾಡಿ ಹೋಗಿ ಕ್ಯಾಂಪುಗಳನ್ನು ಕಂಡಕ್ಟ್ ಮಾಡುತ್ತಿದ್ದಾರೆ. ಅಲ್ಲಿ ಟ್ಯಾಕ್ಸನ್ನು ಕಟ್ಟಬಹುದು, ಮತ್ತು ಫಿಟ್‌ನೆಸ್ ಸರ್ಟಿಫಿಕೇಟ್‌ನ್ನೂ ತೆಗೆದುಕೊಳ್ಳಬಹುದು. ಮಲೆನಾಡು ಪ್ರದೇಶದಲ್ಲಿ ಟ್ರ್ಯಾಕ್ಟರುಗಳಿಗೆ ಇಂಥವರು ತೊಂದರೆ ಕೊಡುತ್ತಾರೆ ಎಂದು ಸ್ಪೆಸಿಫಿಕ್ಕಾಗಿ ತಿಳಿಸಿದರೆ ಖಂಡಿತವಾಗಿಯೂ ಕಾನೂನು ಪ್ರಕಾರ ನಾನು ಕ್ರಮ ತೆಗೆದುಕೊಳ್ಳುತ್ತೇನೆ ಎಂಬ ಆಶ್ವಾಸನೆಯನ್ನು ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ಐ. ಬಿ. ಶಂಕರ್.—ಈಗ ಮುಂದುವರೆಯುತ್ತಾ, ಮಲೆನಾಡಿನ ಜನತೆ ಪರವಾಗಿ ಕುವೆಂಪು ವಿಶ್ವವಿದ್ಯಾನಿಲಯವನ್ನು ಮಾಡಿ ಮಲೆನಾಡಿನ ಜನಗಳಿಗೆ ಗೌರವವನ್ನು ಕೊಟ್ಟಿದ್ದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ. ಅಲ್ಲಿ ಕೆಲವು ಸಣ್ಣಪುಟ್ಟ ಲೋಪದೋಷಗಳಿವೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಿದ್ದಾಗ ಅವರ ಗಮನಕ್ಕೆ ತಂದಿದ್ದೇವೆ. ನೇರವಾಗಿ ವಿದ್ಯಾರ್ಥಿ ಸಂಘದ ಮುಖಾಂತರ ಮತ್ತು ಅಧ್ಯಾಪಕರುಗಳು ಮನವಿಯನ್ನು ಕೊಟ್ಟಿದ್ದಾರೆ, ಅದನ್ನು ಮಾನ್ಯ ವಿದ್ಯಾಮಂತ್ರಿಗಳಿಗೆ ಮತ್ತು ಮುಖ್ಯಮಂತ್ರಿಗಳಿಗೆ ತಲುಪಿಸುತ್ತೇನೆ. ಇದಕ್ಕೆ ತಾವು ಸಹಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರ ಇವೊತ್ತು ಪ್ರತಿಯೊಬ್ಬರಿಗೂ ನಿವೇಶನವನ್ನು ಕೊಡಬೇಕೆಂದು

ಉದ್ದೇಶ ಇಟ್ಟುಕೊಂಡಿರುವುದು ಸ್ವಾಗತಾರ್ಹ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ದೊಡ್ಡ ಕೋಲಾಹಲವೇ ಆಯಿತು. ಜಾಗ ಎಲ್ಲಿ ಸಿಗುತ್ತದೆ ಅಲ್ಲಿ ಕೆಲವರು ಗುಡಿಸಲುಗಳನ್ನು ಕಟ್ಟಿಕೊಂಡು ಆಮೇಲೆ ಆ ಜಾಗವನ್ನು ಇನ್ನೊಬ್ಬರಿಗೆ ಮಾರುತ್ತಿದ್ದಾರೆ. ಎಲ್ಲಾದರೂ ಸರ್ಕಾರದ ಜಾಗ ಇದ್ದರೆ ಗೋಮಾಳದ ಜಮೀನು ಇದ್ದರೆ ಅಲ್ಲಿ ಪೂರ್ತಿ ಗುಡಿಸಲುಗಳನ್ನು ಕಟ್ಟಿಕೊಂಡು ನಾವಿದ್ದೇವೆ ಎಂದು ಗುಂಪು ಕಟ್ಟಿಕೊಂಡು ಜಾಗವನ್ನು ಕಬಳಿಸುತ್ತಿದ್ದಾರೆ. ಆಮೇಲೆ ಇನ್ನೊಬ್ಬರಿಗೆ ಬಿಟ್ಟುಕೊಡುತ್ತಿದ್ದಾರೆ. ಈ ತರಹ ಸರ್ಕಾರದ ಜಾಗದಲ್ಲಿ ಮನೆಕಟ್ಟಿಕೊಂಡು ಹಣ ಮಾಡುವುದಕ್ಕೆ ಕೆಲವರು ಪ್ರಯತ್ನ ಮಾಡುತ್ತಿದ್ದಾರೆ. ಅಂಥವರ ಮೇಲೆ ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳಬೇಕು. ಸೈಟುಗಳನ್ನು ಕೊಡುವಾಗ ಮಂಡಲ ಪಂಚಾಯಿತಿಗಳ ಮೂಲಕ ಕೊಟ್ಟರೆ ನಿಜವಾಗಿ ಯಾರಿಗೆ ಅವಶ್ಯಕತೆ ಇದೆಯೋ ಅವರಿಗೆ ಕೊಡಬಹುದು. ಚಿಕ್ಕಮಗಳೂರಿನಲ್ಲಿ ಅಂಬೇಡ್ಕರ್ ಸಂಸ್ಥೆಗೆ ಸೇರಿದಂಥ ಒಂದು ಜಾಗ ಇದೆ. ಅದು ಕೊಳಗೇರಿ ಪ್ರದೇಶ ಎಂಬುದನ್ನು ಸರ್ಕಾರದ ಗಮನಕ್ಕೆ ತಂದಾಗ ಸರ್ಕಾರದವರು ನಾಲ್ಕೈದು ವರ್ಷಗಳ ಹಿಂದೆ ಬೇರೆ ಕಡೆ ಆದಿಶಕ್ತಿ ನಗರ ಎಂದು ಮಾಡಿ ಅಲ್ಲಿ ಸೈಟುಗಳನ್ನು ನೂರಾರು ಜನರಿಗೆ ಹಂಚಿದರು. ಪ್ರತಿಯೊಬ್ಬರೂ ಸೈಟುಗಳನ್ನು ಅಲ್ಲಿ ತೆಗೆದುಕೊಂಡು ಈಗ ಅಲ್ಲೂ ವಾಸ ಮಾಡುತ್ತಿದ್ದಾರೆ. ಇಲ್ಲೂ ಜಾಗ ಇಟ್ಟುಕೊಂಡಿದ್ದಾರೆ. ಈ ತರಹ ದುರುಪಯೋಗ ಆಗುತ್ತಾ ಇದೆ. ಈ ಕಡೆ ಈ ಸಂಸ್ಥೆಗೂ ಬಿಟ್ಟುಕೊಟ್ಟ ಹಾಗೆ ಆಗಲಿಲ್ಲ, ಆ ಕಡೆ ಆದಿಶಕ್ತಿ ನಗರದ ಜಾಗವೂ ಉಳಿಯಲಿಲ್ಲ. ಈ ರೀತಿ ದುರುಪಯೋಗ ಮಾಡುವ ಕಡೆ ದಯಾದಾಕ್ಷಿಣ್ಯ ಇಲ್ಲದೆ ದುಡಿಸಿದ್ದೇ ಆದರೆ ಇಂಥ ಸಣ್ಣಪುಟ್ಟ ಅವ್ಯವಹಾರಗಳಿಗೆ ಅವಕಾಶ ಆಗುವುದಿಲ್ಲವೆಂದು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಭೂಮಿ ವಿಷಯ ಬಹಳ ವಿಚಿತ್ರವಾದದ್ದು. ಈ ತುಂಡು ಭೂಮಿ ಕಾಯಿದೆ ಎಂಬುದಾಗಿ ಸರ್ಕಾರ ಮಾಡಿದೆ. ಕರ್ನಾಟಕ ರಾಜ್ಯದಲ್ಲಿ ಎರಡು ಜಿಲ್ಲೆಗಳನ್ನು ಬಿಟ್ಟು ಬಾಕಿ ಎಲ್ಲಾ ಜಿಲ್ಲೆಗಳಿಗೂ ಆ ತುಂಡು ಭೂಮಿ ಕಾಯಿದೆ ಅನ್ವಯವಾಗುತ್ತದೆ. ಮಲೆನಾಡಿನ ಎಲ್ಲಾ ಶಾಸಕರು ಸೇರಿಕೊಂಡು ಆ ಬಗ್ಗೆ ನಾಲ್ಕಾರು ಸಲ ವಿಧಾನ ಸೌಧದಲ್ಲಿ ಮಾನ್ಯ ಮಂತ್ರಿಗಳ ಹತ್ತಿರ ಚರ್ಚೆ ಮಾಡಿದ್ದೇವೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಲೇ ಬಂದಿದ್ದಾರೆ, ಆದರೆ ಇದುವರೆವಿಗೂ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ತುಂಡು ಭೂಮಿ ಎಂದರೆ, ಮೈದಾನ ಪ್ರದೇಶದಲ್ಲಿ ೫೦ ಎಕರೆ ಇದ್ದರೆ ಅದು ತುಂಡು ಭೂಮಿ ಕಾಯಿದೆಗೆ ಬರುತ್ತದೆ. ನಮ್ಮ ಮಲೆನಾಡಿನಲ್ಲಿ ೫-೧೦ ಎಕರೆ ಇದ್ದರೂ ಬಹಳ ದೊಡ್ಡ ಶ್ರೀಮಂತನೆಂದು ತಿಳಿದುಕೊಂಡಿರತಕ್ಕ ವ್ಯಕ್ತಿಗಳೇ ಜಾಸ್ತಿ ಇದ್ದಾರೆ. ಆ ಒಂದು ತುಂಡು ಭೂಮಿಯ ಕಾಯಿದೆಯಲ್ಲಿ ೫ ಎಕರೆ ಜಮೀನು ಇರತಕ್ಕವರೂ ಕೂಡ ಯಾವ ಸೊಸೈಟಿಯಲ್ಲೂ ಸಾಲಕ್ಕೆ ಹೋಗುವ ಹಾಗೆ ಇಲ್ಲ. ಈ ಜಮೀನಿಗೆ ಖಾತೆ ಇರುತ್ತದೆ. ಅಣ್ಣ ತಮ್ಮಂದಿರುಗಳ ಮಧ್ಯೆ ಕಿತಾಪತಿ ಬಂದಾಗಲೇ ಅವರು ಹಿಸ್ಸೆಯಾಗಿರುತ್ತಾರೆ. ಮನೆ ಕಟ್ಟಿಕೊಳ್ಳುವುದಕ್ಕೆ ಹೋದರೆ. ಅಣ್ಣ ತಮ್ಮನಿಗೆ ಅವಕಾಶ ಕೊಡುವುದಿಲ್ಲ, ತಮ್ಮ ಅಣ್ಣನಿಗೆ ಅವಕಾಶ ಕೊಡುವುದಿಲ್ಲ, ಈ ತರಹ ದೊಡ್ಡ ಲೋಪದೋಷಗಳು ಇರುತ್ತವೆ. ಆದ್ದರಿಂದ ಈ ತುಂಡು ಭೂಮಿ ಕಾಯಿದೆಯನ್ನು ಮಲೆನಾಡಿನ ಮಟ್ಟಿಗೆ ತಾವು ತೆಗೆದುಹಾಕಬೇಕು. ಇದರಿಂದ ಬಹಳ ಜನ ರೈತರಿಗೆ ಹಿಂಸೆಯಾಗುತ್ತಿದೆ, ಇದನ್ನು ಕೂಡಲೇ ತಪ್ಪಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಕಂದಾಯ ಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಂತರ ಅರಣ್ಯ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಶ್ರೀಮಾನ್ ಜೀವಿಜಯರವರು ಹಿಂದೆ ಅರಣ್ಯ ಮಂತ್ರಿಗಳಾಗಿದ್ದಾಗಲೂ ಸಾರ್ವಜನಿಕ ಸಭೆಯಲ್ಲಿ ಹೇಳಿದ್ದಾರೆ. ನಾವಂತೂ ವಿಚಿತ್ರವಾದ ನೋವನ್ನು ಅನುಭವಿಸುತ್ತಿದ್ದೇವೆ. ಇವತ್ತು ಬೆಳಿಗ್ಗೆ ಇದೇ ಸಭೆಯಲ್ಲಿ ಕೋಟ್ಯಾಂತರ ರೂಪಾಯಿಗಳ ಕಳ್ಳಸಾಗಾಣಿಕೆಯನ್ನು ಹಿಡಿದಿದ್ದೇವೆ., ಇದರಿಂದ ಉತ್ತಮವಾದ ಕಾರ್ಯಕ್ರಮಗಳನ್ನು ಇಲಾಖೆ ಹಾಕಿಕೊಂಡಿದೆ ಎಂಬುದಾಗಿ ಸಚಿವರು ಹೇಳಿದ್ದಾರೆ. ಇದರ ಬಗ್ಗೆ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ ೭-೮ ಲಾರಿಗಳನ್ನು ಹಾಗೂ ೮-೧೦ ಜೀಪ್‌ಗಳನ್ನು ಹಿಡಿದು ಅರಣ್ಯ ಇಲಾಖೆಯ ಕಛೇರಿಯ ಮುಂದೆ ನಿಲ್ಲಿಸಿದ್ದಾರೆ. ಆ ಜೀಪ್‌ನ ಬೆಲೆ ಹಿಡಿದಾಗ ೮೦ ಸಾವಿರ ಬೆಲೆ ಬಾಳುವಂತಿದ್ದರೆ, ಇವತ್ತು ಅದು ೫೦೦ ರೂಪಾಯಿಗಳಿಗೂ ಬೆಲೆ ಬಾಳದೆ ಇರುವ ಹೀನ ಪರಿಸ್ಥಿತಿಯಲ್ಲಿದೆ. ಇದರ ಬಗ್ಗೆ ಕಾನೂನು ಹಾಗೂ ಕೋರ್ಟಿನ ತೊಂದರೆ ಇದೆ ಎಂಬುದಾಗಿ ಮಾನ್ಯ ಮಂತ್ರಿಗಳು ಹೇಳುತ್ತಾರೆ. ಅದರ ಬಗ್ಗೆ ಸರಿಯಾಗಿ ನಿಗಾವಹಿಸಿ ಸೂಕ್ತ ರೀತಿಯಲ್ಲಿ ಸರ್ಕಾರದವರು ಅದನ್ನು ಮುಟ್ಟುಗೋಲು ಹಾಕಿಕೊಳ್ಳಲಿ. ಇಲ್ಲವಾದರೆ ಆರ್.ಟಿ.ಓ. ಮುಖಾಂತರ ಬೆಲೆಯನ್ನು ನಿಗದಿ ಮಾಡಿ

ಪಬ್ಲಿಕ್ ಆಕ್ಷನ್ ಹಾಕಿ. ಅದರಿಂದ ಬಂದಂತಹ ಹಣವನ್ನು ಡೆಪಾಜಿಟ್ ಮಾಡಿಕೊಳ್ಳಿ. ಕೋರ್ಟಿನಲ್ಲಿ ಪಾರ್ಟಿಯ ಪರವಾಗಿ ತೀರ್ಮಾನವಾದರೆ ಆ ಹಣವನ್ನು ಅವರಿಗೆ ಕೊಡಿ. ಇಲ್ಲವಾದರೆ ಆ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಿ. ಇಲ್ಲದಿದ್ದರೆ ಈ ರೀತಿ ವೆಹಿಕಲ್‌ಗಳನ್ನು ಹಿಡಿದುಕೊಂಡು ಬಂದು ಅಲ್ಲಿ ನಿಲ್ಲಿಸಿಕೊಳ್ಳುವುದು ನ್ಯಾಷನಲ್ ವೇಸ್ಟ್. ಕಳ್ಳಸಾಗಾಣಿಕೆದಾರರ ಜೀಪು ನಾವು ಉಪಯೋಗಿಸುವ ಜೀಪಿಗಿಂತಲೂ ಸಾವಿರ ಪಾಲು ಭದ್ರವಾಗಿರುತ್ತದೆ ನಾಲ್ಕು ಟೈರುಗಳೂ ಹೊಸದಾಗಿರುತ್ತವೆ. ಅಂಥವುಗಳನ್ನು ಅರಣ್ಯ ಇಲಾಖೆಯ ಮುಂದೆ ನಿಲ್ಲಿಸಿರುವುದನ್ನು ನೋಡಿದರೆ ಅವು ಕೆಟ್ಟುಹೋಗಿ ನಿಲ್ಲಿಸಿದ ವೆಹಿಕಲ್‌ಗಳಾಗಿವೆ. ಈ ವೆಹಿಕಲ್‌ಗಳನ್ನು ಅರಣ್ಯ ಇಲಾಖೆಯವರಾದರೂ ಉಪಯೋಗಿಸಿ, ಇಲ್ಲದಿದ್ದಾಗ ಪಬ್ಲಿಕ್ ಆಕ್ಷನ್ ಹಾಕಿಬಿಡಿ. ಅದನ್ನು ಬಿಟ್ಟು ಈ ರೀತಿ ನಿಲ್ಲಿಸಿರುವುದರಿಂದ, ಅವರ ಕಛೇರಿಯಲ್ಲಿರತಕ್ಕಂತಹ ಸರ್ಕಾರಿ ಜೀಪುಗಳ ಬೋಲ್ಟ್ ಹೋದರೆ, ಡೈನಮೋ ಹೋದರೆ, ಮೋಟಾರ್ ಹೋದರೆ ಅದರಲ್ಲಿ ಕಿತ್ತು ಇದಕ್ಕೆ ಹಾಕಿಕೊಳ್ಳತಕ್ಕ ಕೆಲಸ ನಡೆದಿದೆ. ಈಗ ಅವು ಇರುವಂತಹ ಸ್ಥಿತಿಯನ್ನು ಆ ಕಳ್ಳಸಾಗಾಣಿಕೆದಾರರ ನೋಡಿದರೆ ಇವು ನಾವು ಕಳ್ಳಸಾಗಾಣಿಕೆ ಮಾಡಿದಂತಹ ವೆಹಿಕಲ್‌ಗಳೇ ಎಂಬುದಾಗಿ ಆಶ್ಚರ್ಯ ಪಡುವಂತಹ ಸ್ಥಿತಿ ಇರುತ್ತದೆ. ಈ ವೆಹಿಕಲ್‌ಗಳನ್ನು ಯಾವಾಗ ಹಿಡಿಯುತ್ತಾರೋ ಕೂಡಲೇ ಆರ್.ಟಿ.ಓ ರವರಿಂದ ಆ ಬಗ್ಗೆ ಸರ್ಟಿಫಿಕೇಟ್ ಮಾಡಿಸಿ ಅದರ ಕಂಡೀಷನ್‌ನ್ನು ತೀರ್ಮಾನ ಮಾಡಿ, ಅದು ಎಷ್ಟು ಬೆಲೆ ಬಾಳುತ್ತದೆ ಎಂಬುದನ್ನು ಮಹಜರ್ ಮಾಡಿಸಿ ಆಫೀಸಿನಲ್ಲಿ ಇಟ್ಟುಕೊಳ್ಳಬೇಕು. ಆ ಕಛೇರಿಯಿಂದ ಹೊರಗೆ ಹೋದ ಅಧಿಕಾರಿ ತಿರುಗಿ ಬರುವಂತಹ ಅಧಿಕಾರಿಗೆ ಚಾರ್ಜ್ ಕೊಡುವಾಗಲೂ ಆ ಬಗ್ಗೆ ಈ ವೆಹಿಕಲ್‌ಗಳ ಸ್ಥಿತಿಯನ್ನು ನಮೂದು ಮಾಡುವಂಥ ವ್ಯವಸ್ಥೆಯನ್ನು ಜಾರಿಗೆ ತಂದಿದ್ದೇ ಆದರೆ, ಆ ವೆಹಿಕಲ್‌ಗಳಲ್ಲಿರತಕ್ಕಂತಹ ಒಂದು ಸಾಮಾನುಗಳು ಹೋಗುವುದಕ್ಕೆ ಅವಕಾಶವಾಗುವುದಿಲ್ಲ. ಒಂದು ಸಾಮಾನು ಹೋದರೂ ನನ್ನ ತಲೆಯ ಮೇಲೆ ಬರುತ್ತದೆಂಬ ಭಾವನೆಯಿಂದ ಅವುಗಳನ್ನು ವ್ಯವಸ್ಥಿತವಾಗಿ ನೋಡಿಕೊಳ್ಳುತ್ತಾರೆ. ಅದನ್ನು ಬಿಟ್ಟು ಈ ರೀತಿ ಮಾಡುವುದಾದರೆ, ಒಬ್ಬ ಕಳ್ಳನನ್ನು ಹಿಡಿದು ಇನ್ನೊಬ್ಬನನ್ನು ಕಳ್ಳತನ ಮಾಡುವುದಕ್ಕೆ ಬಿಟ್ಟ ಹಾಗೆ ಆಗುತ್ತದೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಆದಷ್ಟು ಎಚ್ಚರ ವಹಿಸಬೇಕು. ಮತ್ತೆ ಮಲೆನಾಡಿನಲ್ಲಿ ಇನ್ನೊಂದು ವಿಚಿತ್ರವಾದ ಪರಿಸ್ಥಿತಿ ಇದೆ. ಅದೇನೆಂದರೆ, ಸುತ್ತ ರೆವಿನ್ಯೂ ಜಾಗ ಇರುತ್ತದೆ. ಮಧ್ಯದಲ್ಲಿ ಅರಣ್ಯ ಭೂಮಿ ಇರುತ್ತದೆ, ಆ ಜಾಗದಲ್ಲಿ ಯಾರಾದರೂ ಬಡವ ವ್ಯವಸಾಯ ಮಾಡುವುದಕ್ಕೆ ಹೋದರೆ, ಅರಣ್ಯ ಇಲಾಖೆಯವರು ಇದು ಅರಣ್ಯ ಭೂಮಿ, ಇಲ್ಲಿ ವ್ಯವಸಾಯ ಮಾಡುವುದಕ್ಕೆ ಅವಕಾಶ ಇಲ್ಲವೆಂದು ಅಡೆತಡೆ ಒಡ್ಡುತ್ತಿದ್ದಾರೆ. ನಾವು ಅರಣ್ಯ ಜಮೀನಿನಲ್ಲಿ ವ್ಯವಸಾಯವನ್ನು ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಸುತ್ತಲೂ ರೆವಿನ್ಯೂ ಭೂಮಿ ಇದ್ದು ಮಧ್ಯದಲ್ಲಿ ೨೫ ಎಕರೆ ಅರಣ್ಯ ಜಮೀನು ಇದ್ದರೆ, ಅದನ್ನು ಅರಣ್ಯ ಇಲಾಖೆಯವರು ಉಪಯೋಗಿಸುವುದಕ್ಕಾಗುವುದಿಲ್ಲ. ಆದ್ದರಿಂದ ಅಂತಹ ಜಾಗಗಳನ್ನು ಆಯಾ ರೆವಿನ್ಯೂ ಇಲಾಖೆಗೆ ಬಿಟ್ಟು ಕೊಡಬೇಕು. ಜೊತೆಗೆ ನಮ್ಮ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಹಾಗೂ ನಾನೂ ನಿಮ್ಮ ಹತ್ತಿರ ಬಂದು ಒಂದು ವಿಷಯವನ್ನು ಪ್ರಾರ್ಥನೆ ಮಾಡಿಕೊಂಡಿದ್ದೇವೆ. ಅದೇನೆಂದರೆ, ಜಿಲ್ಲಾಪರಿಷತ್ತಿಗೆ ರೇಂಜ್ ಆಫೀಸರ್‌ಗಳನ್ನು ಬಹಳ ಕಡಿಮೆ ಕೊಟ್ಟಿದ್ದೀರಿ. ಇಲಾಖಾವತಿಯಿಂದ ಲಕ್ಷಾಂತರ ರೂಪಾಯಿಗಳ ಹಣವನ್ನು ಕೊಟ್ಟಿದ್ದೀರಿ. ಅದನ್ನು ಸದುಪಯೋಗ ಮಾಡಿಕೊಳ್ಳುವ ಸಲುವಾಗಿ ಸಾಕಷ್ಟು ರೇಂಜ್ ಆಫೀಸರ್‌ಗಳನ್ನು ಕೊಡಿ ಎಂಬುದಾಗಿ ಕೇಳಿಕೊಂಡಿದ್ದೆವು. ಆದರೆ ಇದುವರೆವಿಗೂ ಮಾನ್ಯ ಮಂತ್ರಿಗಳು ಆ ಬಗ್ಗೆ ಮನಸ್ಸು ಮಾಡೇ ಇಲ್ಲ.

೩-೩೦ ಪಿ.ಎಂ.

ಇದು ಏಕೆಂದು ನನಗೆ ಅರ್ಥವಾಗುತ್ತಿಲ್ಲ. ಮಲೆನಾಡಿನಲ್ಲಿ ಮರಗಳನ್ನು ಹೆಚ್ಚು ಪ್ರೀತಿಸುವ ಜನ ನಾವು. ಸಿಲ್ವರ್ ಓಕ್ ಮರವನ್ನು ಬೇರೆ ೧೧ ಜಾತಿಯ ಮರಗಳ ಜೊತೆ ಕಡಿಯುವುದಕ್ಕೆ ತಮ್ಮ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದ್ದು ಆ ಬಗ್ಗೆ ಸುತ್ತೋಲೆಯನ್ನು ಕೂಡಾ ಹೊರಡಿಸಿದ್ದೀರಿ. ಈ ಬಗ್ಗೆ ಅಧಿಕಾರಿಗಳಿಗೆ ಆದೇಶ ಹೋಗಿದ್ದರೂ ಸಹಾ ಕ್ಲಾರಿಫಿಕೇಷನ್‌ಗಾಗಿ ತಮಗೆ ಬರೆಯುತ್ತಾರೆ. ಇದರಿಂದಾಗಿ ನಮ್ಮ ಭಾಗದಲ್ಲಿ ಈ ಮರಗಳನ್ನು ಕಡಿಯಲಾಗಿದ್ದು ಅವನ್ನು ಸಾಗಿಸಲು ಪರವಾನಿಗೆ ಕೊಡುತ್ತಿಲ್ಲ. ಈ ಸಿಲ್ವರ್ ಮರ ಮೃದು ಮರವಾಗಿದ್ದು ೬ ತಿಂಗಳು ಒಂದೇ ಕಡೆ ಬಿದ್ದಿದ್ದರೆ ೧೦ ರೂಪಾಯಿ ಬೆಲೆಯ ಮರ ೨ ರೂಪಾಯಿ ಆಗುತ್ತದೆ. ನನ್ನ ಕ್ಷೇತ್ರದಲ್ಲಿ ಬೇಡದ

ಸಿಲ್ವರ್ ಮರಗಳನ್ನು ಹೆಚ್ಚು ಕಡಿದಿದ್ದು ಸಾಗಾಣಿಕೆಗೆ ಅನುಮತಿ ನೀಡಿಲ್ಲ, ಈ ಬಗ್ಗೆ ಸರ್ಕಾರ ಗಮನ ಹರಿಸಿ ಸೂಕ್ತ ನಿರ್ದೇಶನವನ್ನು ಆದಷ್ಟು ಜಾಗ್ರತೆ ಅಧಿಕಾರಿಗಳಿಗೆ ನೀಡಬೇಕು. ನಮ್ಮಲ್ಲಿ ಒಬ್ಬ ಅಧಿಕಾರಿ ತನ್ನ ಅಧಿಕಾರ ವ್ಯಾಪ್ತಿ ಮೀರಿ ಹೆಚ್ಚು ದಂಡವನ್ನು ಹಾಕುತ್ತಿರುವುದನ್ನು ನೋಡುತ್ತಿದ್ದೇವೆ. ೫ ಸಾವಿರ ರೂಪಾಯಿಗಳವರೆಗೆ ದಂಡ ಹಾಕುವ ವ್ಯಾಪ್ತಿ ಪಡೆದ ಅಧಿಕಾರಿ ೫೦ ಸಾವಿರ ರೂಪಾಯಿಗಳ ದಂಡ ಹಾಕಿದ್ದಾರೆ, ಈ ಬಗ್ಗೆ ಮಾನ್ಯ ಅರಣ್ಯ ಮಂತ್ರಿಗಳು ಗಮನಹರಿಸಬೇಕು. ಇನ್ನು ಸಿಲ್ವರ್ ಓಕ್ ಮರದ ಬಗ್ಗೆ ಕೂಡಾ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಬೇಕು. ಈ ಮರಗಳನ್ನು ಕಡಿಯುವುದು ಬೇಡ ಎನ್ನುವಹಾಗಿದ್ದರೆ ಅದನ್ನಾದರೂ ಹೇಳಿ. ನಾವು ಮರ ಕಡಿಯುವುದನ್ನು ಬಿಡುತ್ತೇವೆ. ಇವತ್ತು ಈ ಮರದ ಬಾಬತ್ತಿನಿಂದ ನಮ್ಮ ಚಿಕ್ಕಮಗಳೂರು ಕ್ಷೇತ್ರದಲ್ಲಿ ಹತ್ತಾರು ಲಕ್ಷ ರೂಪಾಯಿಗಳು ಹಾನಿಯಾಗಿದೆ. ಈ ಬಗ್ಗೆ ಆದಷ್ಟು ಬೇಗ ಸೂಕ್ತ ನಿರ್ದೇಶನ ನೀಡಿ ಮತ್ತೆ ಕಾಫಿ ತೋಟಗಳ ಬಗ್ಗೆ ಹೇಳಬೇಕೆಂದರೆ ನಾವು ಹೆತ್ತ ತಂದೆತಾಯಿಗಿಂತಲೂ ಕಾಫೀ ತೋಟವನ್ನು ಹೆಚ್ಚು ಪ್ರೀತಿಸುತ್ತೇವೆ. ಇವತ್ತು ಕಾಫೀ ತೋಟಗಳ ಬಗ್ಗೆ ಏನು ಫಾರೆಸ್ಟ್ ರಿಸ್ಟ್ರಿಕ್ಷನ್ಸ್ ಇದೆ ಅದನ್ನು ದಯಮಾಡಿ ಕಡಿಮೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ, ಕಾಫೀ ತೋಟದ ಮರಗಳ ಬಗ್ಗೆ ಏನು ಕಟ್ಟುನಿಟ್ಟು ಕ್ರಮ ಇದೆ ಅದನ್ನು ಸಡಿಲ ಮಾಡಿ, ಕಾನೂನು ರೀತ್ಯ ಈ ಬಗ್ಗೆ ಸರ್ಕಾರಕ್ಕೆ ಏನೇನು ಕೊಡಬೇಕೋ ಅವನ್ನೆಲ್ಲಾ ಕೊಡುತ್ತೇವೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯಮಂತ್ರಿಯವರು).—ಅಧ್ಯಕ್ಷರೇ, ಮಾನ್ಯ ಸದಸ್ಯರು ಮಹತ್ವವಾದ ಸೂಚನೆಗಳನ್ನು ಕೊಟ್ಟಿದ್ದಾರೆ, ಅರಣ್ಯದಲ್ಲಿ ಕಳ್ಳಸಾಗಾಣಿಕೆ ಮಾಡುತ್ತಿದ್ದ ಕಾರುಗಳು ಹಾಗೂ ಜೀಪ್‌ಗಳನ್ನು ಪೋಲೀಸ್ ಹಾಗೂ ಅರಣ್ಯ ಇಲಾಖೆಯವರು ಹಿಡಿದಿದ್ದಾರೆ. ಇವುಗಳ ಬಗ್ಗೆ ಜೆ. ಎಂ, ಎಫ್. ಸಿ. ಕೋರ್ಟ್‌ನಲ್ಲಿ ಕೇಸ್ ಇರುತ್ತವೆ, ಈ ಕೋರ್ಟುಗಳಲ್ಲಿ ವಾಹನಗಳನ್ನು ಮಾರುವುದಕ್ಕಾಗಲೀ ಅಥವಾ ಬಿಡುವುದಕ್ಕಾಗಲೀ ಯಾವುದೇ ಅವಕಾಶವನ್ನು ಕೊಟ್ಟಿಲ್ಲ. ಈ ಬಗ್ಗೆ ಸಿ. ಆರ್, ಪಿ. ಸಿ.ಯಲ್ಲಿ ಕೆಲವು ಬದಲಾವಣೆ ಮಾಡಬೇಕಾದ ಪ್ರಸಂಗ ಬರಬಹುದು. ಅದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಇದರಿಂದಾಗಿ ಈ ದಿಸೆಯಲ್ಲಿ ನಾವು ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸ್ವಲ್ಪ ತೊಂದರೆ ಇದೆ. ಆದರೆ ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕೇಸ್‌ಗಳ ಬಗ್ಗೆ ಆರು ತಿಂಗಳ ಒಳಗಾಗಿ ಕೇಸ್ ತೀರ್ಮಾನವಾಗಬೇಕೆಂದು ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. ಜೊತೆಗೆ ಜಿಲ್ಲಾಪರಿಷತ್ತಿಗೆ ಸಿಬ್ಬಂದಿ ಕಡಿಮೆ ಇದೆ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಆದಷ್ಟು ಶೀಘ್ರವಾಗಿ ಇದನ್ನು ನೀಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತೆ ಮಾನ್ಯ ಸದಸ್ಯರು ಸಿಲ್ವರ್ ಓಕ್ ಬಗ್ಗೆ ಹೇಳಿದ್ದಾರೆ. ಈಗಾಗಲೇ ೧೧ ಜಾತಿ ಮರಗಳನ್ನು ಕಡಿಯುವುದಕ್ಕೆ ಯಾವುದೇ ತೊಂದರೆ ಇಲ್ಲ. ಈ ಬಗ್ಗೆ ಈ ಸದನದಲ್ಲೇ ಕಾಯ್ದೆ ಆಗಿದೆ. ಅಲ್ಲದೇ ನವೆಂಬರ್ ತಿಂಗಳಲ್ಲಿ ಇದಕ್ಕೆ ರಾಜ್ಯಪಾಲರ ಅಸ್ಸೆಂಟ್ ಕೂಡಾ ಸಿಕ್ಕಿದೆ. ಈ ಬಗ್ಗೆ ಯಾವುದೇ ರೀತಿಯ ತೊಂದರೆ ಪಡುವುದು ಬೇಕಾಗಿಲ್ಲ. ಈ ಬಗ್ಗೆ ಏನಾದರೂ ಅಧಿಕಾರಿಗಳಿಂದ ತೊಂದರೆಯಾದರೆ ಅವರಿಗೆ ಸರಿಯಾದ ನಿರ್ದೇಶನವನ್ನು ಕೊಡುತ್ತೇನೆ.

ಆದರೆ ಅದನ್ನು ಬೇರೆ ಕಡೆ ಸಾಗಿಸಬೇಕಾದರೆ ಅವರು ಪಾಸ್‌ನ್ನು ತೆಗೆದುಕೊಳ್ಳಬೇಕು ಪಾಸು ತೆಗೆದುಕೊಳ್ಳುವಂತಹ ಪದ್ಧತಿಯನ್ನು ಅವರು ಪಾಲಿಸಬೇಕು. ಅದು ಶ್ರೀಮಾನ್ ಶಂಕರ್ ರವರಿಗೂ ಗೊತ್ತಿರತಕ್ಕ ವಿಷಯ. ಕೊನೆಯದಾಗಿ ಅಧಿಕಾರಿಗಳು ೫ ಸಾವಿರ ರೂಪಾಯಿಗಳವರೆಗೆ ದಂಡವನ್ನು ಹಾಕುತ್ತಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಯಾವೊಬ್ಬ ಅಧಿಕಾರಿಯೇ ಆಗಿರಲಿ, ತನ್ನ ಹದ್ದು ಮೀರಿ ದಂಡವನ್ನು ವಿಧಿಸಿರುವಂಥ ಸ್ಪಷ್ಟ ನಿದರ್ಶನ ಇದ್ದರೆ, ನನ್ನ ಗಮನಕ್ಕೆ ತರಬೇಕು. ಅಂತಹವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತೆ ಸುತ್ತಲೂ ಕಂದಾಯ ಜಮೀನು ಇದ್ದು, ನಡುವೆ ಅರಣ್ಯ ಜಮೀನು ಇದ್ದರೆ ಅಂತಹ ಜಮೀನನ್ನು ರೆವಿನ್ಯೂ ಇಲಾಖೆಗೆ ವಾಪಸ್ಸು ಕೊಟ್ಟುಬಿಡಿ ಎಂಬುದಾಗಿ ಹೇಳಿದ್ದಾರೆ ೧೯೮೦ರಲ್ಲಿ ಅರಣ್ಯ ಇಲಾಖೆಯ ಕಾಯಿದೆಗೆ ತಂದಂತಹ ತಿದ್ದುಪಡಿಯ ಪ್ರಕಾರ ಯಾವುದೇ ಜಮೀನನ್ನು ಕೊಡುವಂತಹದ್ದಾಗಲಿ, ಅಥವಾ ಹಸ್ತಾಂತರ ಮಾಡುವಂತಹ ಅಧಿಕಾರ ಅಧಿಕಾರವರ್ಗದವರಿಗೇ ಆಗಲಿ, ಅಥವಾ ನಮ್ಮ ಸರ್ಕಾರಕ್ಕಾಗಲಿ ಇಲ್ಲ. ಅದಕ್ಕೆ ಮಾನ್ಯ ಸದಸ್ಯರು ಕೂಡ ಸಹಕರಿಸಬೇಕು. ಆ ಜಮೀನಿನಲ್ಲಿ ಮರಗಳನ್ನು ಬೆಳೆಸುವುದಕ್ಕೆ ಸಹಕಾರ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಐ. ಬಿ. ಶಂಕರ್.—ಇನ್ನೊಂದು ವಿಷಯ ಸನ್ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ. ಮಾನ್ಯಸಚಿವರು ಪಾಸಂ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಅದಕ್ಕೆ ನಮ್ಮ ಭಿನ್ನಾಭಿಪ್ರಾಯವಿಲ್ಲ. ಈ ರೀತಿಯ ಪಾಸ್ ತೆಗೆದುಕೊಳ್ಳುವುದಕ್ಕೆ ಹಿಂದೆ ಇದ್ದಂತಹ ಪದ್ಧತಿಯನ್ನೇ ಅನುಸರಿಸುವಂತಿದ್ದರೆ ಅದು ಉಪಯೋಗವಾಗುವುದಿಲ್ಲ. ಹಿಂದೆ ಏನು ಮಾಡುತ್ತಿದ್ದರು. ಎಂದರೆ, ಸರ್ವೆ ಮಾಡಿಸಬೇಕು. ನಂತರ ಜಾಯಿಂಟ್ ಸರ್ವೆ ಮಾಡಬೇಕು. ನಂತರ ಆ ಬಗ್ಗೆ ರೆವಿನ್ಯೂ ಇಲಾಖೆಯ ಒಪಿನೀಯನ್ ತೆಗೆದುಕೊಳ್ಳಬೇಕು ಎಂಬುದಾಗಿ ಇತ್ತು. ಅದೇ ರೀತಿ ಮಾಡಿ ಲೈಸನ್ಸ್‌ನ್ನು ತೆಗೆದುಕೊಳ್ಳುವಂತಿದ್ದರೆ, ಇದನ್ನು ಆ ಪರಿಮಿತಿಯ ಹೊರಗಿಟ್ಟಿದ್ದೇವೆಂದು ಹೇಳುವುದರಲ್ಲಿ ಅರ್ಥ ಇಲ್ಲದ ಹಾಗೆ ಆಗುತ್ತದೆ. ಖಾಲಿ ಅರ್ಜಿಯ ಮೇಲೆ ಪರವಾನಗಿಯನ್ನು ಕೊಡುವಂತಹ ವ್ಯವಸ್ಥೆ ಮಾಡಬೇಕು. ಸರ್ಕಾರದ ಒಂದು ಆದೇಶ ಇದೆ. ಅದರ ಪ್ರಕಾರ ದರಖಾಸ್ತು ಸಮಿತಿ ಎಂದು ಒಂದು ಇತ್ತು. ಅದರಲ್ಲಿ ಯಾರ್ಯಾರು ಸದಸ್ಯರು ಇದ್ದರು ? ಎಂದರೆ, ಸ್ಪೆಷಲ್ ತಹಸೀಲ್ದಾರ್‌ರವರು, ನಂತರ ಸಂಬಂಧಪಟ್ಟ ರೇಂಜ್ ಫಾರೆಸ್ಟ್ ಆಫೀಸರ್ ಒಬ್ಬರು. ನಂತರ ಪಬ್ಲಿಕ್ ಪತಿಯಿಂದ ಒಬ್ಬರು ಇರುತ್ತಾರೆ. ಈ ರೀತಿ ಆ ಸಮಿತಿಯಲ್ಲಿ ೪ ಜನ ಅಥವಾ ೫ ಜನರಿರುವ ಕಮಿಟಿ ಇತ್ತು. ಆ ಸಮಿತಿ ಕಂದಾಯ ಇಲಾಖೆಯ ಜಮೀನನ್ನು ಯಾವೊಬ್ಬ ಭೂಮಿ ಇಲ್ಲದವರಿಗೆ ಕೊಡಬೇಕಾಗಿದ್ದರೆ, ಪ್ರತಿಯೊಂದು ಕೇಸ್ ಬಗ್ಗೆ ಆ ೫ ಜನ ಸದಸ್ಯರಿಗೂ ಸಮಿತಿಯ ಸಭೆ ಸೇರುವುದಕ್ಕಿಂತ ಮುಂಚಿತವಾಗಿಯೇ ಕಾರ್ಯಕ್ರಮದ ಪಟ್ಟಿ ಹೋಗಿರುತ್ತದೆ. ಅದನ್ನು ಅವರು ಅಧ್ಯಯನ ಮಾಡಿಕೊಂಡು ಬಂದಿರುತ್ತಾರೆ. ಆ ಭೂಮಿಯನ್ನು ಅಂತಹವರಿಗೆ ಕೊಡಬೇಕೇ ಅಥವಾ ಬಿಡಬೇಕೇ ಎಂಬುದರ ಬಗ್ಗೆ ದೀರ್ಘವಾಗಿ ಚರ್ಚೆಯಾಗಿ ನಂತರ ಆ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ. ಆ ತೀರ್ಮಾನದಲ್ಲಿ ಇಂತಹ ವ್ಯಕ್ತಿ ಅರ್ಹನಾಗಿದ್ದರೆ ಕೊಡಬಹುದು ಎಂಬುದಾಗಿ ತೀರ್ಮಾನ ಮಾಡುತ್ತಾರೆ. ಆ ಅರ್ಜಿದಾರ ಪಾಪ ಕಷ್ಟಪಟ್ಟು ಸರ್ವೇಯರ್ ಕರೆದುಕೊಂಡು ಸಾವಿರಾರು ರೂಪಾಯಿಗಳನ್ನು ಸಾಲ ಮಾಡಿ ಖರ್ಚು ಮಾಡುತ್ತಾರೆ. ಇದಕ್ಕಾಗಿ ಹೆಂಡತಿ ತಾಳಿಯನ್ನೂ ಕೂಡ ಮಾರಿರುವಂತಹ ಪ್ರಸಂಗಗಳು ಇವೆ. ಕೆಲವು ಸಂದರ್ಭಗಳಲ್ಲಿ ಸಮಿತಿಯವರು ತೀರ್ಮಾನ ಮಾಡಿದ್ದಾರೆ, ಜಿಲ್ಲಾಧಿಕಾರಿಗಳಿಗೆ ಹೋಗಿದೆ, ತೀರ್ಮಾನವಾಗಿ ಬಂದುಬಿಡುತ್ತದೆಂದು ಅರ್ಜಿದಾರರು ಕೊಡಬಹುದು ಎಂದು ಸಂತೋಷ ಪಟ್ಟುಕೊಂಡಿರುತ್ತಾರೆ. ಆದರೆ ಅದು ಕೊನೆಗೆ ಹೇಗೆ ಆಗುತ್ತದೆಂದರೆ, ಸಮಿತಿಯ ತೀರ್ಮಾನ ಮಾಡಿದ ಮೇಲೆ ಜಿಲ್ಲಾಧಿಕಾರಿಗಳಿಗೆ ಹೋಗುತ್ತದೆ. ನಂತರ ಅಲ್ಲಿಂದ ಸಂಬಂಧಪಟ್ಟ ಅರಣ್ಯ ಇಲಾಖೆಯ ಅಧಿಕಾರಿಗಳ ಒಪಿನೀಯನ್‌ಗೆ ಹೋಗುತ್ತದೆ. ಆ ಅಧಿಕಾರಿ ಒಂದೇ ವಾಕ್ಯದಲ್ಲಿ ಅಲ್ಲಿ ಮರಗಳು ಇರುವುದರಿಂದ ಅರ್ಜಿದಾರರ ಅರ್ಜಿಯನ್ನು ವಜಾ ಮಾಡಲಾಗಿದೆ ಎಂಬುದಾಗಿ ಹೇಳುತ್ತಾರೆ. ಹೀಗಾದರೆ ಏಕೆ ಅಂತಹ ಸಮಿತಿ ಇರಬೇಕು. ಇಂಥ ಅಧಿಕಾರಿ ಇರುವುದನ್ನು ರದ್ದುಗೊಳಿಸಿ ಆ ಸಮಿಯಲ್ಲೂ ಆಯಾ ಇಲಾಖೆಯ ಅಧಿಕಾರಿಗಳು ಇರುತ್ತಾರೆ; ಆ ಸಮಿತಿಯ ಸಭೆಯಲ್ಲಿ ಒಟ್ಟಾರೆ ಚರ್ಚೆ ಮಾಡಿ ಇಂತಹ ಜಮೀನನ್ನು ಇಂತಹವರಿಗೆ ಕೊಡಬೇಕೆಂದು ತೀರ್ಮಾನ ಮಾಡಿದ ಮೇಲೆ ಅದಕ್ಕೆ ಮೇಲ್ಪಟ್ಟದ ಅಧಿಕಾರಿಗಳೂ ಕೂಡ ತಮ್ಮ ಸಮ್ಮತಿಯನ್ನು ನೀಡುವಂತಿರಬೇಕು. ಇಲ್ಲದಿದ್ದರೆ ಇಂತಹ ಸಮಿತಿಗಳು ಇದ್ದೇನು ಪ್ರಯೋಜನ ? ಆದ್ದರಿಂದ ಈ ರೀತಿಯಾಗಿ ಜನರಿಗೆ ತೊಂದರೆಯಾಗುತ್ತಿರುವುದನ್ನು ತಪ್ಪಿಸಬೇಕು. ಸೌದೆಯನ್ನು ಸಾಗಿಸಬೇಕಾದರೆ ಲೈಸನ್ಸ್‌ನ್ನು ತೆಗೆದುಕೊಳ್ಳಬೇಕೆಂದು ಏನು ಮಂತ್ರಿಗಳು ಹೇಳಿದ್ದಾರೆ. ಏನೇನು ಕ್ರಮ ಅನುಸರಿಸಬೇಕೆಂಬುದನ್ನೂ ಸಹ ಮಾನ್ಯ ಮಂತ್ರಿಗಳು ತಿಳಿಸಬೇಕಾಗುತ್ತದೆ, ಅದನ್ನು ಮಾನ್ಯ ಮಂತ್ರಿಗಳು ತಿಳಿಸಿದ ಪಕ್ಷದಲ್ಲಿ ಬಡ ಜನತೆಗೆ ಅನುಕೂಲವಾಗುತ್ತದೆಂದು ನಾನಾದರೂ ಭಾವಿಸುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಸಚಿವರು).—ಮಾನ್ಯ ಸದಸ್ಯರು ಲೈಸೆನ್ಸ್ ಬೇಕಾಗುತ್ತದೆ ಎಂಬ ಮಾತನ್ನು ಹೇಳಿದ್ದಾರೆ. ಲೈಸೆನ್ಸ್ ಅವಶ್ಯಕತೆ ಇಲ್ಲ. ಕೇವಲ ಮರವನ್ನು ಸಾಗಿಸಲಿಕ್ಕೆ ಪರವಾನಗಿಯನ್ನು ತೆಗೆದುಕೊಳ್ಳಬೇಕು.

ಶ್ರೀ ಐ. ಬಿ. ಶಂಕರ್.— ಅನುಸರಿಸಬೇಕಾದ ನೀತಿಯ ಬಗ್ಗೆ ತಾವು ಹೇಳಬೇಕು.

ಶ್ರೀ ಜಿ. ಎಸ್. ಬಾಗಲಕೋಟೆ.—ಎರಡನೆಯದಾಗಿ ಸನ್ಮಾನ್ಯ ಅಧ್ಯಕ್ಷರೇ, ಅತಿಕ್ರಮಣ ಮಾಡಿದಂಥ ಜಮೀನನ್ನು ಸಕ್ರಮ ಮಾಡುವ ಸಲುವಾಗಿ ಕೆಲ ಮಾತುಗಳನ್ನು ಅವರು ಹೇಳಿದ್ದಾರೆ. ಈಗಾಗಲೇ ನಾನು ಹೇಳಿದ್ದೇನೆ. ಅರಣ್ಯದ ಇಲಾಖೆಯ ಯಾವುದೇ ಜಮೀನನ್ನು ಕೊಡುವಂಥ ಅಧಿಕಾರ ನಮಗೆ ಇಲ್ಲ. ಆದರೆ ನಿರ್ಧಿಷ್ಟವಾಗಿ ೧೯೭೮–೭೯ಕ್ಕೆ ಮುಂಚೆ ಯಾರು ಅತಿಕ್ರಮಣ ಮಾಡಿದ್ದಾರೆ, ಆ ಬಗ್ಗೆ ನಾವು ವಿಚಾರಣೆ ಮಾಡಿ ತಾಲ್ಲೂಕು ಸಮಿತಿಯನ್ನು ನಾವು ಮಾಡುತ್ತಿದ್ದೇವೆ.

ಇಂತಹ ಸಮಿತಿಯು ವರದಿ ಬಂದನಂತರ ಅದನ್ನು ಕೇಂದ್ರ ಸರ್ಕಾರದ ಒಪ್ಪಿಗೆಗಾಗಿ ಕಳುಹಿಸಿ ಅವರು ಒಪ್ಪಿದ ನಂತರ ಆ ಜಮೀನನ್ನು ಸಕ್ರಮಗೊಳಿಸಲಿಕ್ಕೆ ಕಾರ್ಯಕ್ರಮ ಕೈಗೊಳ್ಳಲಿಕ್ಕೆ ಆಗುತ್ತದೆ.

ಶ್ರೀ ಐ. ಬಿ. ಶಂಕರ್.—ಫಾರೆಸ್ಟ್ ಜಮೀನನ್ನು ನಾನು ಕೇಳಿಲ್ಲ: ರೆವಿನ್ಯೂ ಲ್ಯಾಂಡ್‌ನಲ್ಲಿ ಅವೆಲಬಿಲಿಟಿ ಇರುವಂಥಾದ್ದು ನಾನು ಹೇಳಿದ್ದುದು. ನಾನು ಸ್ಟೇಟ್ ಫಾರೆಸ್ಟ್ ಆಗಲಿ ಅಥವಾ ಜನರಲ್ ಫಾರೆಸ್ಟ್ ಲ್ಯಾಂಡ್ ಬಗ್ಗೆಯಾಗಲೀ ಕೇಳಿಲ್ಲ. ರೆವಿನ್ಯೂ ಇಲಾಖೆಯಲ್ಲಿ ಅವೆಲಿಬಿಲಿಟಿ ಲಿಸ್ಟ್‌ನಲ್ಲಿ ಬಂದಂಥ ಜಮೀನು ದರಖಾಸ್ತು ಕಮಿಟಿಯಲ್ಲಿ ಇರುವುದಕ್ಕೆ ಸಾಧ್ಯ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ. ಎಸ್. ಬೀಳಗಿ.—ಮಾನ್ಯ ಮಂತ್ರಿಗಳು ಅತಿಕ್ರಮಣ ಜಮೀನಿನ ಬಗ್ಗೆ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕಳಿಸುತ್ತೇವೆ ಎಂದು ಹೇಳಿದ್ದಾರೆ. ಶ್ರೀ ಜೀವಿಜಯ ಅವರು ಇದ್ದಾಗ ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಅನೇಕ ಜನ ಅತಿಕ್ರಮಣ ಮಾಡಿದವರಲ್ಲಿ ಮುಖ್ಯವಾಗಿ ಪರಿಶಿಷ್ಟ ಜಾತಿ, ವರ್ಗದವರು, ಹಿಂದುಳಿದವರೇ ಹೆಚ್ಚಾಗಿ ಇರುವುದರಿಂದ ೧೯೭೮ರ ಪೂರ್ವದಲ್ಲಿ ಅವರು ಅತಿಕ್ರಮಣ ಮಾಡಿದ್ದಾರೆ ಎನ್ನುವುದಕ್ಕೆ ಪಟ್ಟಾ ಇದೆ. ಕೆಲವು ಕೇಸ್‌ಗಳಲ್ಲಿ ಪಟ್ಟಾ ಚೀಟಿಯನ್ನು ಕೊಟ್ಟಿದ್ದಾರೆ. ಆದರೆ ರಿಜಿಸ್ಟ್ರೇಶನ್ ಆಗಿಲ್ಲ. ಅವನ್ನು ಸಿ ಅಂಡ್ ಡಿ ಲ್ಯಾಂಡ್ ಎಂದು ಪರಿಗಣಿಸಿ ಫಾರೆಸ್ಟ್ ಲ್ಯಾಂಡ್ ಎಂದು ಡಿಕ್ಲೇರ್ ಮಾಡಿದ್ದರಿಂದ ತೊಂದರೆಯಾಗಿದೆ. ಅವರು ೩೦-೪೦ ವರ್ಷಗಳಿಂದ ಸಾಗುವಳಿ ಮಾಡಿದ ಬಗ್ಗೆ ರೆಕಾರ್ಡ್ ಇದೆ. ಅಂತಹ ಜನರ ಬಗ್ಗೆ ರಿಪೋರ್ಟ್ ತರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಅವರು ಒಪ್ಪುವುದರಲ್ಲಿಯೇ ನಿಮ್ಮ ಡಿಪಾರ್ಟ್‌ಮೆಂಟ್‌ನವರು ಟ್ರೆಂಚ್ ಹೊಡೆಯುವುದು, ಅವರನ್ನು ಹೊರಕ್ಕೆ ಹಾಕುವುದು ಇಂತಹ ಕ್ರಮಗಳನ್ನು ತೆಗೆದುಕೊಂಡು ಅವರಿಗೆ ತೊಂದರೆ ಮಾಡುತ್ತಿದ್ದಾರೆ. ನೀವು ರಿಪೋರ್ಟ್ ತರಿಸಿ ಕೇಂದ್ರ ಸರ್ಕಾರಕ್ಕೆ ಕಳಿಸಿ ಅದು ಫೈನಲೈಸ್ ಆಗುವವರೆಗೆ ಈ ಜನರಿಗೆ ತೊಂದರೆಯಾಗದಂತೆ ನಿಗಾ ವಹಿಸುತ್ತೀರಾ ಎಂದು ಸನ್ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟೆ.—ಮಾನ್ಯ ಸದಸ್ಯರು ಹೇಳಿದ ಹಾಗೆ, ೧೯೭೮ಕ್ಕೆ ಮೊದಲು ಅತಿಕ್ರಮಣ ಮಾಡಿದಂಥ ಯಾವುದಾದರೂ ನಿರ್ದಿಷ್ಟವಾದ ಉದಾಹರಣೆಗಳು ಇದ್ದರೆ ಅವರನ್ನು ನಾವು ಅಲ್ಲಿಂದ ಎಕ್ಕಲೆಬ್ಬಿಸಿಲ್ಲ. ಅಂತಹ ಏನಾದರೂ ಪ್ರಕರಣಗಳು ಇದ್ದರೆ ಸನ್ಮಾನ್ಯ ಸದಸ್ಯರು ಅದರ ಬಗ್ಗೆ ವಿವರಗಳನ್ನು ನನಗೆ ಕೊಡಬೇಕು. ಆ ಬಗ್ಗೆ ನಾನು ಕ್ರಮ ಕೈಗೊಳ್ಳುತ್ತೇನೆ.

ಉಪಾಧ್ಯಕ್ಷರು.—ಶ್ರೀ ಶಂಕರ್ ಅವರೇ ನೀವು ಮುಂದುವರಿಸಿ.

ಶ್ರೀ ಐ. ಬಿ. ಶಂಕರ್.—ನಾನು ಹೇಳಿದ ಹಾಗೆ ಮಂತ್ರಿಗಳು ಉತ್ತರ ಕೊಟ್ಟಿಲ್ಲ. ನಿಧಾನವಾಗಿ ಕೊಟ್ಟರೆ ಆಯಿತು. ಬೇಕಾದರೆ ನಾನು ತಮ್ಮ ಕಛೇರಿಗೆ ಬರುತ್ತೇನೆ. ತಮ್ಮ ಫಾರೆಸ್ಟ್ ಇಲಾಖೆಯ ಜಮೀನಿನ ಬಗ್ಗೆ ನಾನು ಕೇಳಲಿಲ್ಲ, ಕೇಳುವುದೂ ಇಲ್ಲ. ಅವೆಲಿಬಿಲಿಟಿ ಇರುವ ರೆವಿನ್ಯೂ ಲ್ಯಾಂಡ್ ಬಗ್ಗೆ ನಾನು ಕೇಳಿದ್ದೇ ಹೊರತು ನಿಮ್ಮ ಇಲಾಖೆಯ ಬಗ್ಗೆ ಮಾತನಾಡಲಿಲ್ಲ. ಇದನ್ನು ನಾನು ಏತಕ್ಕೆ ಹೇಳಬೇಕಾಯಿತೆಂದರೆ ಒಂದು ಸಲ ತಮ್ಮ ಅಧಿಕಾರಿಗಳು ಒಂದು ಮಾತನ್ನು ಹೇಳಿದ್ದರು. ಕಾನಡಿ ಹೋಬಳಿಯಲ್ಲಿ ಒಂದು ಹಳ್ಳಿ ಇದೆ. ಅಲ್ಲಿ ಸುತ್ತಮುತ್ತ ಫಾರೆಸ್ಟ್ ಲ್ಯಾಂಡೇ ಇರುವುದು. ಅಲ್ಲಿ ಕಳೆದ ಹತ್ತು ಹದಿನೈದು ವರ್ಷಗಳಿಂದ ಮನೆ ಕಟ್ಟಿಕೊಂಡು ವಾಸ ಮಾಡುವಂಥ ಜನ ಇದ್ದಾರೆ. ಯಾವುದೇ ಕಾರಣದಿಂದ ಅವರು ಆ ಜಾಗವನ್ನು ಬಿಡುವ ಪರಿಸ್ಥಿತಿಯಲ್ಲಿಲ್ಲ. ಬಿಟ್ಟರೆ ಬೇರೆ ಕಡೆಗೆ ಅವರಿಗೆ ಜಾಗ ಕೊಡುವ ಪರಿಸ್ಥಿತಿ ಇಲ್ಲ. ಈ ದೃಷ್ಟಿಯಿಂದ ಮೊದಲು ಒಂದು ಸಲ ನಿಮ್ಮ ಇಲಾಖೆಯ ಶ್ರೀ ಚಂದ್ರಶೇಖರ ಮೂರ್ತಿಯವರು ಡಿ. ಎಫ್. ಒ. ಆಗಿದ್ದಾಗ ಯಾವ ಯಾವ ಫಾರೆಸ್ಟ್ ಜಾಗ ಇದೆ ಆತರಹ ಮನೆ ಕಟ್ಟಿಸಿಕೊಂಡಿರುವವರಿಗೆ ಅವರ ಸೈಟನ್ನು ಅವರಿಗೇ ಕೊಟ್ಟು ಸೈಟು ಹಂಚಿದ್ದಾರೆ. ಹುನವತ್ತಿ, ಮುತ್ತೋಡಿಯಲ್ಲಿ ಇದು ನಡೆದಿದೆ. ನಿಮ್ಮದೇ ಇಲಾಖೆಯಲ್ಲಿ ಕೊಟ್ಟಿದ್ದಾರೆ. ಇನ್ನೊಬ್ಬರು ಅಧಿಕಾರಿ ಆ ಜಾಗಕ್ಕೆ ಬಂದಾಗ ಇದು ಪೆಂಡಿಂಗ್ ಉಳಿದಿದೆ. ಇದರ ಬಗ್ಗೆ ಏನು ಮಾಡುತ್ತೀರಿ ಎಂದು ತಾವು ಹೇಳಬೇಕಾಗಿದೆ.

ಇನ್ನು ಕೆ. ಇ. ಬಿ. ಬಗ್ಗೆ ಮಾನ್ಯ ಲಕ್ಷ್ಮೀನರಸಿಂಹಯ್ಯನವರಿಗೆ, ಇಂತಹ ಹಳ್ಳಿಗಳಿಗೆ ಅನ್ಯಾಯ ವಾಗಿದೆ; ಇವುಗಳಿಗೆ ತಮ್ಮ ಸಹಕಾರ ಬೇಕೆಂದು ಕೇಳಿದೆ. ೪ ವರ್ಷಗಳ ಹಿಂದೆ ನಮ್ಮ ಹೊಸಕೋಟೆ, ರಾಮನಹಳ್ಳಿಗೆ ಕರೆಂಟ್ ಕೊಡುವುದಕ್ಕೆ ಮಂಜೂರಾತಿ ಆಗಿದ್ದು, ಕರೆಂಟ್ ಕೊಟ್ಟಿದೆ. ಆದರೆ

ಅವತ್ತಿನಿಂದ ಇವತ್ತಿನವರೆಗೂ ಆ ಹಳ್ಳಿಯವರಿಗೆ ಸರಿಯಾದ ವಿದ್ಯುತ್ ಮಾತ್ರ ಕೊಟ್ಟಿಲ್ಲ. ೪-೫ ವರ್ಷಗಳಿಂದ ಇಲ್ಲಿಯವರೆಗೂ ಒಂದು ದಿವಸವೂ ಹೆಚ್ಚು ಕಡಿಮೆ ಆಗದಹಾಗೆ ಬಿಲ್ ಮಾತ್ರ ಹೋಗುತ್ತದೆ. ೫ ವರ್ಷಗಳ ಕಾಲ ಸತತವಾಗಿ ದುಡ್ಡು ಕಟ್ಟಿಕೊಂಡು ಬಂದಿದ್ದಾರೆ. ಆದರೆ ಅವರು ಇವತ್ತಿನವರೆಗೂ ಕರೆಂಟ್ ಉಪಯೋಗಿಸಿಲ್ಲ. ಮೊನ್ನೆ ಒಂದು ದಿವಸ ತಾಲ್ಲೂಕು ಸಲಹಾ ಸಮಿತಿಯಲ್ಲಿ ದೊಡ್ಡ ಗಲಾಟೆ ಮಾಡಿದ ಮೇಲೆ, ಎಸ್ಟಿಮೇಟ್ ಮಾಡಿ ಕಳುಹಿಸಿದ್ದೇವೆಂದು ಹೇಳಿದರು. ಹಳ್ಳಿಯ ಜನಗಳಿಗೆ ನಾನೇ ದುಡ್ಡು ಕೊಟ್ಟು, ನಿಮ್ಮ ಮೇಲೆ ಏಕೆ ಕೇಸ್ ಹಾಕಬಾರದು ಎಂದು ಕೇಳಿದೆ. ತಾವು ದಯವಿಟ್ಟು ಇದರ ಬಗ್ಗೆ ಗಮನಹರಿಸಬೇಕು. ೪-೫ ವರ್ಷಗಳಿಂದ ಲೈಟ್ ಇದ್ದೂ, ಇಲ್ಲದೇ ಇರತಕ್ಕಂಥ ಪರಿಸ್ಥಿತಿ ಇದೆ. ಸಿಂಗಲ್ ವೋಲ್ಟೇಜ್‌ನಲ್ಲಿ ಅಲ್ಲಿಯ ಜನ ಬದುಕುತ್ತಿದ್ದಾರೆ. ಈಗ ತಮ್ಮ ಹತ್ತಿರ ಈ ವಿಷಯವನ್ನು ನೇರವಾಗಿ ಪ್ರಸ್ತಾಪ ಮಾಡುತ್ತಿದ್ದೇನೆ. ಅಲ್ಲಿನ ಅಧಿಕಾರಿಗಳಿಗೂ, ಯೂನಿಯನ್‌ನವರಿಗೂ ವ್ಯತ್ಯಾಸ ಬಂದಿದೆ. ಇವರಿಬ್ಬರ ಹೋರಾಟದಲ್ಲಿ, ಅಲ್ಲಿಯ ಜನಗಳು ಕರೆಂಟ್ ಇಲ್ಲದೆ ತೊಂದರೆ ಅನುಭವಿಸುತ್ತಿದ್ದಾರೆ. ಒಂದು ಕಡೆ ಲಕ್ಷ್ಮೀನರಸಿಂಹಯ್ಯನವರು, ಮತ್ತೊಂದು ಕಡೆ ಬೋರ್ಡ್ ಈ ರೀತಿ ಆಗಿದೆ. ನಾನು ಎಷ್ಟೋ ಅರ್ಜಿಗಳನ್ನು ಬರೆಸಿಕೊಟ್ಟಿದ್ದೇನೆ, ನಾನು ನೇರವಾಗಿ ಒಬ್ಬ ಶಾಸಕನಾಗಿ ಹೇಳುತ್ತಿದ್ದೇನೆ ತಾವು ನನಗೆ ವೈಯಕ್ತಿಕವಾಗಿ ಮಾಡುವುದು ಬೇಡ, ಅಲ್ಲಿಯ ಸ್ಥಳ ಪರಿಶೀಲನೆ ಮಾಡಿ, ಅಲ್ಲಿಯ ಅಧಿಕಾರಿಗಳನ್ನೂ ಯೂನಿಯನ್‌ರವರನ್ನೂ ಒಂದಾಗುವಂತೆ ಮಾಡಿ. ಇದಕ್ಕೇನಾದರೂ ಒಂದು ಪರಿಹಾರ ಕಂಡು ಹಿಡಿದು ಕೊಡಿ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಕೆಲವು ಕಡೆ ಒತ್ತಡದ ಕೊರತೆ ಇದೆ. ಅಂದರೆ ಇವರ ಒತ್ತಡ ಅಲ್ಲ. ವೋಲ್ಟೇಜ್ ಸಮಸ್ಯೆ ಇರುವುದು ತಮಗೂ ಗೊತ್ತಿದೆ. ೪ ವರ್ಷದಿಂದ ಅಲ್ಲಿ ವೋಲ್ಟೇಜ್ ಕಡಿಮೆ ಇದ್ದರೂ ನೀವು ಒತ್ತಡ ಮಾಡಿಲ್ಲ. ಒತ್ತಡ ಬಂದ ಕಡೆಗಳಲ್ಲಿ ೧-೨-೩ ತಿಂಗಳಲ್ಲಿ ನಾವು ಕ್ರಮ ತೆಗೆದುಕೊಂಡು ವೋಲ್ಟೇಜ್ ಇಂಪ್ರೂವ್ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದೇವೆ. ಯಾವ ರೀತಿಯಲ್ಲಿ ಒತ್ತಡ ಮಾಡಬೇಕೋ ಆ ರೀತಿ ನೀವು ಒತ್ತಡ ಮಾಡಿಲ್ಲ ವೆಂದು ನನ್ನ ಭಾವನೆ. ಇವತ್ತು ಇದು ನನ್ನ ಗಮನಕ್ಕೆ ಬಂದಿದೆ ಆದಷ್ಟು ಬೇಗ ಸರಿಪಡಿಸಲಾಗುವುದು. ಅಲ್ಲಿ ವೋಲ್ಟೇಜ್ ಕಡಿಮೆ ಇದೆ. ಬಹಳ ದೂರ ಲೈನ್ ಎಳೆದರೆ, ವೋಲ್ಟೇಜ್ ಕಡಿಮೆ ಬರುತ್ತದೆ. ಮತ್ತೆ ಅಲ್ಲಿನ ನೌಕರರಿಗೂ ಮತ್ತು ಅಧಿಕಾರಿಗಳಿಗೂ ಸಾಮರಸ್ಯ ಇಲ್ಲವೆಂದು ಹೇಳಿದ್ದಾರೆ, ಇದರ ಬಗ್ಗೆ ವಿಚಾರಣೆ ನಡೆಸಿ ಸೂಕ್ತ ಕ್ರಮಕೈಗೊಳ್ಳುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಐ. ಬಿ. ಶಂಕರ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಎರಡು ತಿಂಗಳಲ್ಲಿ ಅಲ್ಲಿನ ತೊಂದರೆ ನಿವಾರಣೆ ಮಾಡುತ್ತೇವೆಂದು ಹೇಳಿದ್ದಾರೆ. ನಾನು ಶಾಸಕನಾದ ಮೇಲೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಹತ್ತಾರುಸಾರಿ ಕಾಗದ ಬರೆದಿದ್ದೇನೆ. ಚೀಫ್ ಇಂಜನಿಯರ್ ಅವರಿಗೆ ಕಾಗದ ಬರೆದಿದ್ದೇನೆ, ಇನ್ನು ಯಾವ ರೀತಿಯ ಒತ್ತಡ ತರಬೇಕು. ಕಂಬ ಹಾಕುವುದಕ್ಕೂ ಲೈನ್ ಎಳೆಯುವುದಕ್ಕೂ ಹೀಗೆ ಪ್ರತಿಯೊಂದಕ್ಕೂ ಮಾನ್ಯ ಮಂತ್ರಿಗಳ ಮೇಲೆ ಒತ್ತಡ ತರಬೇಕೆಂದು ಇದ್ದರೆ ಹಾಗೆಯೇ ಮಾಡುತ್ತೇವೆ.

ಉಪಾಧ್ಯಕ್ಷರು.—ಅಂದರೆ, ತಮ್ಮ ಒತ್ತಡ ಮಾನ್ಯ ಸಚಿವರಿಗೆ ಮುಟ್ಟಿಲ್ಲ.

ಶ್ರೀ ಐ. ಬಿ. ಶಂಕರ್.—೪-೫ ವರ್ಷಗಳಿಂದ ಅಲ್ಲಿಗೆ ಕರೆಂಟ್ ಕೊಟ್ಟು, ವೋಲ್ಟೇಜ್ ಇಲ್ಲ ವೆಂಬುದನ್ನು ಅಧಿಕಾರಿಗಳು ತಮ್ಮ ಗಮನಕ್ಕೆ ತರದೇ ಹೋಗಿದ್ದಲ್ಲಿ, ಇವತ್ತು ನಾವು ವಿಚಾರಣೆ ಮಾಡಿ ಅಲ್ಲಿನ ಅಧಿಕಾರಿಗಳು ಇದು ನಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳಿದರೆ, ಅದಕ್ಕೆ ಏನು ಶಿಕ್ಷೆ ಅನುಭವಿಸಬೇಕೋ, ಅದನ್ನು ನಾನು ಅನುಭವಿಸುತ್ತೇನೆ ಇಲ್ಲದೇ ಹೋದರೆ ಅಲ್ಲಿನ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಹತ್ತಾರುಸಾರಿ ಆ ಗ್ರಾಮದವರೂ ಮತ್ತು ನಾನೂ ಹೇಳಿದ್ದೇವೆ. ಅಲ್ಲಿನ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ಹೇಳಿದರೆ ನಾನು ಮುಂದುವರಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ನಮ್ಮ ಗಮನಕ್ಕೆ ಬಂದಮೇಲೆ ವೋಲ್ಟೇಜ್ ಇಂಪ್ರೂವ್ ಆಗಬೇಕು. ಇದು ಮೊದಲನೇ ಕಾರ್ಯಕ್ರಮ. ನಿಮ್ಮ ಒತ್ತಡಕ್ಕೆ ಅಲ್ಲಿನ ಅಧಿಕಾರಿಗಳು ಏಕೆ ಗಮನ ಕೊಟ್ಟಿಲ್ಲ ಎಂಬ ಬಗ್ಗೆ ವಿಚಾರಣೆ ಮಾಡಿ ತಮಗೆ ತಿಳಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಉಪಾಧ್ಯಕ್ಷರೇ, ಆಡಳಿತ ಪಕ್ಷದ ಸದಸ್ಯರು, ಅವರ ಕ್ಷೇತ್ರದ ಸಮಸ್ಯೆಗಳನ್ನು ಕೇಳುತ್ತಿದ್ದಾರೆ. ತಕ್ಷಣ ಸಚಿವರು ಉತ್ತರ ಕೊಡುತ್ತಿದ್ದಾರೆ,

ವಿರೋಧ ಪಕ್ಷದ ಸದಸ್ಯರು ಗಂಟೆಗಟ್ಟಲೆ ಮಾತನಾಡಿದರೂ ಕೂಡ ಒಬ್ಬ ಸಚಿವರಾದರೂ ಎದ್ದು ನಿಂತು ಕೊಂಡು ಸಮಸ್ಯೆಗಳನ್ನು ಬಗೆಹರಿಸುತ್ತೇವೆ ಎಂದು ಆಶ್ವಾಸನೆಯನ್ನು ಕೊಡಲಿಲ್ಲ. ನಿಮ್ಮ ಪಕ್ಷದ ಸದಸ್ಯರುಗಳು ಯಾರಿದ್ದಾರೆ ಅವರ ಕ್ಷೇತ್ರದ ಸಮಸ್ಯೆಗಳನ್ನು ಮಾತ್ರ ಬಗೆಹರಿಸಿ ನಮ್ಮನ್ನೆಲ್ಲಾ ಬಿಟ್ಟುಬಿಡಬೇಕೆಂದು ಮಾಡಿದ್ದೀರಾ ? ಹೇಗೂ ಕಾಂಗ್ರೆಸ್ ಮಿತ್ರರೂ ಇಲ್ಲಿ ಇಲ್ಲ. ಏತಕ್ಕೆ ಇದನ್ನು ನಾನು ಮಧ್ಯದಲ್ಲಿ ಎದ್ದು ನಿಂತುಕೊಂಡು ಹೇಳಿದೆ ಎಂದರೆ ಹಣಕಾಸಿನ ತೊಂದರೆ ಇದೆ ಆದಕಾರಣ, ವಿರೋಧ ಪಕ್ಷದವರದ್ದು ದೊಡ್ಡ ಗಂಟಿಲ್ಲ. ಉಳಿದಿರುವಂತಹ ಅಲ್ಪಸಮಯವನ್ನು. ನಿಮ್ಮ ಕ್ಷೇತ್ರಗಳ ಸಮಸ್ಯೆಗಳನ್ನು ಬಗೆಹರಿಸುವುದಕ್ಕೇ ಮೀಸಲಾಗಿಟ್ಟು ನಾವು ತಬ್ಬಲಿಗಳಾಗಬೇಕೆಂದು ವ್ಯವಸ್ಥಿತವಾದ ಕಾರ್ಯಕ್ರಮವನ್ನೇನಾದರೂ ತಾವು ಹಾಕಿಕೊಂಡಿದ್ದೀರಾ ?

ಉಪಾಧ್ಯಕ್ಷರು.—ತಮ್ಮ ಸಮಸ್ಯೆಗಳೆಲ್ಲಾ ಮಾನ್ಯ ಮುಖ್ಯಮಂತ್ರಿಯವರಿಗೆ ಸಂಬಂಧಪಟ್ಟಿರುವುದರಿಂದ. ಆ ಮಟ್ಟದಲ್ಲಿರುವುದರಿಂದ, ಬೇರೆ ಯಾರೂ ಉತ್ತರ ಹೇಳಲಿಲ್ಲ ಅಷ್ಟೇ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಈ ಇಲಾಖೆ ಇರಬಹುದು ಅಥವಾ ಬೇರೆ ಯಾವುದೇ ಇಲಾಖೆ ಇರಬಹುದು. ಮಾನ್ಯ ಯಡಿಯೂರಪ್ಪನವರು ಕೇಳಿದಂತಹ ಎಲ್ಲಾ ಪ್ರಶ್ನೆಗಳಿಗೂ ಸರಿಯಾದ, ಸಮಜಾಯಿಷಿಯಾದಂಥ ಉತ್ತರವನ್ನು ಕೊಟ್ಟಿದ್ದೇವೆ, ಅವುಗಳನ್ನು ಬಗೆಹರಿಸಿಕೊಡುತ್ತೇವೆ ಎಂಬ ಭರವಸೆಯನ್ನೂ ಕೂಡಾ ಕೊಟ್ಟಿದ್ದೇವೆ.

ಶ್ರೀ ಐ. ಬಿ. ಶಂಕರ್.—ಇನ್ನು ಬ್ಲಾಕ್ ಬೋರ್ಡ್ ಯೋಜನೆ ಬಗ್ಗೆ ನಮ್ಮ ಜಿಲ್ಲೆಯಲ್ಲಿ ಮೂಡಿಗೆರೆ ಮತ್ತು ಕಡೂರು ತಾಲ್ಲೂಕುಗಳನ್ನು ಮಾತ್ರ ಇದಕ್ಕೆ ಸೇರಿಸಿದ್ದೀರಿ ಹಾಗೂ ಉಳಿದ ಐದು ತಾಲ್ಲೂಕುಗಳನ್ನು ಕೈಬಿಟ್ಟಿದ್ದೀರಿ. ಇದು ಏತಕ್ಕೆ ಎಂದು ಗೊತ್ತಾಗಲಿಲ್ಲ. ಬ್ಲಾಕ್ ಬೋರ್ಡ್ ಯೋಜನೆಯನ್ನು ಮಂಜೂರು ಮಾಡಲು ಏನಾದರೂ ನಿಯಮಾವಳಿಗಳು ಇವೆಯೋ ಎನ್ನುವುದು ಒಂದು. ಇನ್ನು ಜಿಲ್ಲಾ ಪರಿಷತ್‌ನಲ್ಲಿ ಒಂದು ಸಲಹಾ ಸಮಿತಿಯನ್ನು ಮಾಡಿ, ಸ್ಕೂಲ್ ಕಟ್ಟಡಗಳು ಎಲ್ಲೆಲ್ಲಿ ಇಲ್ಲ, ಅಲ್ಲಿ ಕಟ್ಟಬೇಕೆಂದು, ಈ ರೀತಿ ೯೦೦ ಚಿಲ್ಲರ ಕಟ್ಟಬೇಕೆಂದು ತೀರ್ಮಾನ ಮಾಡಿಕೊಂಡಿದ್ದೇವೆ. ಇದರಿಂದ ಏನು ಜಿಲ್ಲಾ ಪರಿಷತ್ ಬಂದಮೇಲೆ ಏನಾ ಕೆಲಸ ಆಗಿಲ್ಲ ಎಂದು ನಮ್ಮ ಸ್ನೇಹಿತರು ಏನು ಹೇಳಿದರು ಅದರಲ್ಲಿ ತಿರುಳಿಲ್ಲ, ನಾವು ಉತ್ತಮ ಮಟ್ಟದಲ್ಲಿ ಕೆಲಸ ಮಾಡಿದ್ದೇವೆ, ಆದರೆ ಇದು ಹೊಸದಾಗಿ ಬಂದಿರುವುದರಿಂದ ಸ್ವಲ್ಪ ವ್ಯತ್ಯಾಸಗಳು ಆಗಿರಬಹುದು, ಕೆಲವು ಲೋಪದೋಷಗಳು ಇವೆ, ಇಲ್ಲ ಎಂದು ಹೇಳುವುದಿಲ್ಲ, ಆದರೆ ಅದನ್ನು ಸರಿಪಡಿಸಿಕೊಂಡು ಉತ್ತಮವಾದ ಕೆಲಸವನ್ನು ಮಾಡುವುದಕ್ಕೆ ಸರಕಾರ ಅನುಕೂಲ ಮಾಡಿಕೊಟ್ಟಿದೆ ಎಂದು ತಿಳಿಸುತ್ತೇನೆ.

ಇನ್ನು ಹೆಲ್ತ್ ಬಗ್ಗೆ ಹೇಳಬೇಕೆಂದರೆ, ನಮ್ಮ ಶ್ರೀಮಾನ್ ರಾಚಯ್ಯನವರು ಹಿರಿಯರು ಇವರಿಗೆ ನನ್ನ ಮನವಿ ಏನೆಂದರೆ, ಕರೆಂಟ್ ಇಲ್ಲ ಎಂದರೆ ನಮ್ಮ ಲಕ್ಷ್ಮೀನರಸಿಂಹಯ್ಯನವರು ವೋಲ್ಟೇಜ್ ಇಲ್ಲ ಎಂದು ಹೇಳುತ್ತಾರೆ, ಆದುದರಿಂದ ನಾನು ಒಂದು ವಿಚಾರ ಹೇಳಿದ್ದೆ, ಎಲ್ಲಾ ಜಿಲ್ಲಾ ಆಸ್ಪತ್ರೆಗಳಿಗೂ ತಾವು ಜನರೇಟರ್ ಹಾಕಿಸಿಕೊಡಬೇಕು. ಇದನ್ನು ಮಾಡಿಕೊಡುತ್ತೇವೆ ಎಂದು ಹೋದವರ್ಷ ಹೇಳಿದ್ದರು. ಎಲ್ಲಾ ಆಸ್ಪತ್ರೆಗಳಿಗೂ ಇದನ್ನು ಮಾಡಬೇಕೆಂದು ತೀರ್ಮಾನ ಕೈಗೊಂಡಿದ್ದೇವೆ ಎಂದು ಹೇಳಿದರೂ, ಇವತ್ತಿನವರೆಗೂ ಆ ತೀರ್ಮಾನ ಏನಾಗಿದೆ ಎಂದು ಗೊತ್ತಾಗಲಿಲ್ಲ, ನಮ್ಮ ಚಿಕ್ಕಮಂಗಳೂರು ಜಿಲ್ಲಾ ಆಸ್ಪತ್ರೆಗೆ ಜನರೇಟರ್ ಇಲ್ಲ. ಜೊತೆಗೆ ನಮ್ಮ ಜಿಲ್ಲಾ ಆಸ್ಪತ್ರೆಗೆ ಒಂದು ಫ್ಲೂಯಿಡ್ ಬ್ಯಾಂಕ್ ಕೊಡಿ ಎಂದು ಕೇಳಿದ್ದೆ, ಸರಕಾರದವರು ಒಂದು ಪಕ್ಷ ಇದನ್ನು ಮಾಡುವುದಕ್ಕೆ ತೊಂದರೆ ಯಾದರೂ ಯಾರಾದರೂ ಖಾಸಗಿಯವರು ಮುಂದೆ ಬಂದು ಫ್ಲೂಯಿಡ್ ಬ್ಯಾಂಕ್ ಮಾಡಿದರೆ, ಅದಕ್ಕೆ ಅನುಮತಿಯನ್ನು ಕೊಡುತ್ತೀರಾ ಎಂದು ಕೇಳಬೇಕು.

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—ಮಾನ್ಯ ಉಪಾಧ್ಯಕ್ಷರೇ, ಸಾರ್ವಜನಿಕರು ಮುಂದೆ ಜನರೇಟರ್‌ನ್ನು ಹಾಕುವುದಾದರೆ ಅದನ್ನು ನಾನು ಸ್ವಾಗತಿಸುತ್ತೇನೆ. ದಯವಿಟ್ಟು ಆ ರೀತಿ ಮಾಡಿಕೊಡಿ.

ಶ್ರೀ ಐ. ಬಿ. ಶಂಕರ್.—ನಾನು ಹೇಳಿದ್ದು ಜನರೇಟರ್ ಬಗ್ಗೆ ಅಲ್ಲ. ಈಗ ಗ್ಲೂಕೋಸ್ ಇತ್ಯಾದಿಗಳನ್ನು ಇಟ್ಟುಕೊಂಡು ರೋಗಿಗಳಿಗೆ ಕೊಡುವ ಫ್ಲೂಯಿಡ್ ಬ್ಯಾಂಕ್, ಅದಕ್ಕೆ ಸಾರ್ವಜನಿಕರು

ಮುಂದೆ ಬಂದರೆ ಅದಕ್ಕೆ ಸರಕಾರದಿಂದ ಲೈಸೆನ್ಸ್ ಕೊಡುತ್ತೀರಾ ಎನ್ನುವುದು ಒಂದು ಜನರೇಟರ್‌ನ್ನು ತಾವೇ ಹಾಕಿಸಿಕೊಡಿ ಎಂದು ನಾನು ಕೇಳಿದ್ದು. ಚಿಕ್ಕಮಗಳೂರು ಜನರಲ್ ಆಸ್ಪತ್ರೆ ಕಟ್ಟಿರುವುದು ಸಾರ್ವಜನಿಕರ ವಂತಿಗೆಯಿಂದ. ಹೆಣ್ಣುಮಕ್ಕಳ ಆಸ್ಪತ್ರೆ ಕಟ್ಟಿರುವುದು ಸಾರ್ವಜನಿಕರ ವಂತಿಗೆಯಿಂದ. ಧನದ ಆಸ್ಪತ್ರೆ ಕಟ್ಟಿರುವುದು ಸಾರ್ವಜನಿಕರ ವಂತಿಗೆಯಿಂದ. ಚಿಕ್ಕಮಗಳೂರಿನಲ್ಲಿ ಡಿ. ಸಿ. ಆಫೀಸ್ ಮತ್ತು ಎಸ್. ಪಿ. ಆಫೀಸ್ ತಾಲ್ಲೂಕ್ ಆಫೀಸ್ ಇವುಗಳನ್ನು ಬಿಟ್ಟರೆ. ಬಾಕಿ ಎಲ್ಲವನ್ನೂ ಸಾರ್ವಜನಿಕ ವಂತಿಗೆಯಿಂದಲೇ ಮಾಡಿದ್ದೇವೆ. ನಾವು ಇನ್ನೂ ಎಷ್ಟು ಕೊಡಬೇಕೆಂದು ಕೇಳುತ್ತೀರೋ ಗೊತ್ತಾಗಲಿಲ್ಲ. ನಾವು ಕೊಡುವಷ್ಟು ಕೊಟ್ಟು ಬಿಟ್ಟಿದ್ದೇವೆ ಈ ಸಲ ಮಳೆ ಇಲ್ಲದೆ ಕಾಫಿ ಬೆಳೆ ಎಲ್ಲಾ ಮುಳುಗಿ ಹೋಗಿ ನಾವು ನಿರ್ಗತಿಕರಾಗುವ ಪರಿಸ್ಥಿತಿ ಬಂದಿದೆ ಇನ್ನಾದರೂ ಸರಕಾರ ಆಸ್ಪತ್ರೆಗೆ ಜನರೇಟರ್ ಕೊಟ್ಟು, ಆಸ್ಪತ್ರೆಯನ್ನು ಉಳಿಸಬೇಕೆಂದು ಅತೀ ವಿನಯದಿಂದ ಪ್ರಾರ್ಥಿಸುತ್ತೇನೆ. ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ೪೫ ಲಕ್ಷ ರೂಪಾಯಿಗಳ ಪ್ಲಾನ್ ತಯಾರು ಮಾಡಿದ್ದೇವೆ ಎಂದು ಅವರು ಹೇಳಿದ್ದಾರೆ, ಬಹಳ ಸಂತೋಷ. ಮಾನ್ಯ ತಿಮ್ಮೇಗೌಡರು ಮಂತ್ರಿಗಳಾಗಿದ್ದಾಗ ಇನ್ನು ಮೂರು ವರ್ಷಗಳಲ್ಲಿ ಇದನ್ನು ಪೂರೈಸಿಕೊಡುತ್ತೇವೆ ಎಂಬುದಾಗಿ ಈ ಸದನದಲ್ಲಿ ಆಶ್ವಾಸನೆ ಕೊಟ್ಟಿದ್ದರು. ಆದರೆ ಅದು ಇನ್ನೂ ಆಗಿಲ್ಲ. ನಾವು ಜಿಲ್ಲಾಧಿಕಾರಿಗಳ ಕಚೇರಿಯ ಕಟ್ಟಡದಲ್ಲಿ ಅರ್ಧ ಭಾಗವನ್ನು ಬಿಡಿಸಿಕೊಟ್ಟು ಆಸ್ಪತ್ರೆಯನ್ನು ಅಲ್ಲಿ ನಡೆಸುವಂತೆ ವ್ಯವಸ್ಥೆ ಮಾಡಿದ್ದೇವೆ. ದಯಮಾಡಿ ಈ ವರ್ಷವಾದರೂ ಸಹ ಇದನ್ನು ಪೂರ್ಣಗೊಳಿಸಿಕೊಡುವುದಕ್ಕೆ ಸಹಕಾರ ಕೊಡಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಇವರಿಂದ ಬಹಳ ತೊಂದರೆಯಾಗಿವೆ, ಆ ಆಸ್ಪತ್ರೆಯಲ್ಲಿ ಯಾವ ಒಂದು ಅನುಕೂಲತೆಯೂ ಇಲ್ಲ.

ಶ್ರೀ ಬಿ. ರಾಚಯ್ಯ.—ಮಾನ್ಯ ಉಪಾಧ್ಯಕ್ಷರೇ ಈ ಸಾರಿ ನಾನು ಮಾನ್ಯ ಸದಸ್ಯರ ಊರಿಗೆ ಹೋಗಿ ಬರುತ್ತೇನೆ. ಆಗ ಅಲ್ಲಿ ಏನು ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡುತ್ತೇನೆ.

ಶ್ರೀ ಐ. ಬಿ. ಶಂಕರ್.—ಸ್ವಾಗತ ಬಯಸುತ್ತೇವೆ ಸ್ವಾಮಿ. ಇನ್ನು ಕೆಮ್ಮಣ್ಣುಗುಂಡಿ ಬಗ್ಗೆ ಹೇಳುವುದಾದರೆ ಅದೊಂದು ಉತ್ತಮವಾದ ಪ್ರೇಕ್ಷಣೀಯ ಸ್ಥಳ. ಹಿಂದೆ ಬ್ರಿಟೀಷರು ಇದ್ದಾಗ ಅಲ್ಲಿ ಇದ್ದರು. ಈ ಬಗ್ಗೆ ನಾನು ಕಳೆದ ಸಾರಿ ಒಂದು ಪ್ರಶ್ನೆಯನ್ನು ಕೇಳಿದ್ದೆ. ಕರ್ನಾಟಕ ರಾಜ್ಯದ ಮೂಲೆ ಮೂಲೆಗಳಿಂದ ಪ್ರೇಕ್ಷಕರು ಅಲ್ಲಿಗೆ ಬರುತ್ತಿರುತ್ತಾರೆ ಅದೊಂದು ಪ್ರೇಕ್ಷಣೀಯವಾದ ಸ್ಥಳ, ಅಲ್ಲಿರುವ ರೋಪ್ ವೇ, ಸರಿಯಾದ ರೀತಿ ಉಪಯೋಗಿಸಿದರೆ, ಈ ಸ್ಥಳವನ್ನು ಒಳ್ಳೆಯ ಪ್ರೇಕ್ಷಣೀಯ ಸ್ಥಳವನ್ನಾಗಿ ಸರ್ಕಾರ ಸಜ್ಜುಗೊಳಿಸಿದರೆ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳ ಲಾಭ ಬರುತ್ತದೆ. ಇನ್ನು ನಮ್ಮ ಮಾನ್ಯ ಗೃಹಸಚಿವರಾದ ಜಾಲಪ್ಪನವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ನಮ್ಮಲ್ಲಿ ಇನ್ನೂ ಎರಡು ಲೋಪದೋಷಗಳು ಇದೆ. ಅದೇನೆಂದರೆ ಮಲ ಹೊರುವ ಪದ್ಧತಿ ಎಲ್ಲೂ ಇರಕೂಡದೆಂದು. ನೂರಕ್ಕೆ ಎಪ್ಪತ್ತೈದರಷ್ಟು ಆ ಪದ್ಧತಿಯನ್ನು ತಾವು ಫುಲ್‌ಫಿಲ್ ಮಾಡಿದ್ದೀರಿ. ಇನ್ನೊಂದು ೮–೧೦ ಪೊಲೀಸ್ ಮನೆಗಳು ಮಾತ್ರ ಅಂಡರ್‌ಗ್ರೌಂಡ್ ಸಿಸ್ಟಂ ಇಲ್ಲದೆ ಇದೆ. ಈ ಒಂದು ಪದ್ಧತಿ ಇನ್ನೂ ನಮ್ಮ ಜಿಲ್ಲೆಯಲ್ಲಿ ಅಲ್ಲಲ್ಲಿ ಇದೆ. ಈ ಪದ್ಧತಿಗೆ ನಿಮ್ಮ ಪೊಲೀಸ್ ಇಲಾಖೆಯವರು ಅಂಡರ್ ಹ್ಯಾಂಡ್ ಡೀಲಿಂಗ್ ಮಾಡುತ್ತಿದ್ದಾರೆ. ಅದನ್ನು ತಪ್ಪಿಸಿ ಆದಷ್ಟು ಬೇಗ ಅಂಡರ್‌ಗ್ರೌಂಡ್ ಸಿಸ್ಟಂ ಮಾಡಿಕೊಡಬೇಕು. ಇನ್ನು ಎರಡನೆಯದಾಗಿ ನಮ್ಮ ಚಿಕ್ಕಮಂಗಳೂರಿನಲ್ಲಿ ವಿಪರೀತ ಟ್ರಾಫಿಕ್ ಆಗಿದೆ. ಆದ್ದರಿಂದ ಒಂದು ಟ್ರಾಫಿಕ್ ಸೆಂಟರ್ ಕೊಡಿ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಮಾನ್ಯ ಮಂತ್ರಿಗಳಿಗೆ ಯಾವಾಗಲೂ ಸಲೀಸಾಗಿ ಸಿಗುತ್ತೇನೆಂದು ಉದಾಸೀನ ಮಾಡಬಾರದು. ನಾನಿನ್ನೂ ಹೊಸದಾಗಿ ಜನರ ಪ್ರತಿನಿಧಿಯಾಗಿ ಬಂದಿದ್ದೇನೆ. ಸಾರ್ವಜನಿಕ ಕ್ಷೇತ್ರದಲ್ಲಿ ನನ್ನನ್ನು ಮುಂದೆ ತರುವುದಕ್ಕೆ ತಾವು ಸ್ವಲ್ಪ ಸಹಾಯ ಮಾಡಿ. ಆಗ ನಮ್ಮ ಬಗ್ಗೆ ಜನ ವಿಶ್ವಾಸವಿಟ್ಟು ಕೆಲಸ ಮಾಡುತ್ತಾರೆ. ಇದರ ಜೊತೆಗೆ ನಮ್ಮಲ್ಲಿ ಅಂದರೆ ಪೊಲೀಸ್ ಕಛೇರಿಗಳಲ್ಲಿ ಸಿಬ್ಬಂದಿ ಕೊರತೆ ಇದೆ. ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಬೆರಳೆಣಿಕೆಯಷ್ಟು ಜನ ಪೊಲೀಸಿನವರು ಇದ್ದಾರೆ. ಅಲ್ಲಿ ಪೊಲೀಸ್ ಸಿಬ್ಬಂದಿಯ ಕೊರತೆ ಇದೆ. ಮೊನ್ನೆಯ ದಿವಸ ನಾನು ಒದೆತ ತಿಂದು ಬಂದಿದ್ದೇನೆ. ಕಾರಣ ಮೊನ್ನೆ ದಿವಸ ರಾತ್ರಿ ಎರಡು ಗಂಟೆಯಲ್ಲಿ ನಾನು ಮತ್ತು ಎಸ್.ಪಿ. ಯವರು ಒಂದು ಕಬ್ಬಡಿ ವೀಕ್ಷಣೆಗೆಂದು ಹೊರಟಿದ್ದೆವು. ಅಲ್ಲಿ ಅಂಪೈರ್ ಸರಿಯಾಗಿ ಸ್ಟೇಟ್‌ಮೆಂಟ್ ಕೊಡಲಿಲ್ಲವೆಂದು ಹೇಳಿ ಜಗಳವಾಯಿತು. ಆಗ ಅಲ್ಲಿ ಪೊಲೀಸಿನವರು ಇರಲಿಲ್ಲ. ನಾನೇ ಜಗಳ ಬಿಡಿಸುವುದಕ್ಕೆ ಹೋದೆ ಆ ಮಧ್ಯೆ ನನ್ನ ಕೈಗೆ ಏಟು ಬಿತ್ತು. ಕೈ ಗಾಯವಾಯಿತು. ಪೊಲೀಸಿನವರ ಸಂಖ್ಯೆ ಬಹಳ ಕಡಿಮೆ

ಇದೆ. ಪೋಲೀಸಿನವರ ಸಂಖ್ಯೆಯನ್ನು ಜಾಸ್ತಿ ಮಾಡಿ ಮತ್ತು ಅಲ್ಲಿ ಒಂದು ಟ್ರಾಫಿಕ್ ಸೆಂಟರ್ ಕೊಡಿ. ಮಲ ಹೊರುವ ಪದ್ಧತಿಯನ್ನು ತಪ್ಪಿಸುವ ಸಲುವಾಗಿ ಅಂಡರ್‌ಗ್ರೌಂಡ್ ಡ್ರೈನೇಜ್ ಮಾಡಿಸಿಕೊಡಿ.

ಇನ್ನು ಕಾರ್ಮಿಕರ ಇಲಾಖೆ ಬಗ್ಗೆ ಮಾತನಾಡುವುದಾದರೆ ಮಾನ್ಯ ಎಂ.ಎಸ್. ಕೃಷ್ಣನ್‌ರವರು ಕಾರ್ಮಿಕ ನಾಯಕರು. ಕಾರ್ಮಿಕರಿಗೆ ಎಲ್ಲಾ ಸೌಲತ್ತುಗಳನ್ನು ಕೊಡಬೇಕೆಂದು ಅವರು ಕೇಳುತ್ತಾರೆ. ಕೇಳಿ ತುಂಬಾ ಸಂತೋಷ. ನಾವು ಸಹ ಅವರ ಜೊತೆಯಲ್ಲಿ ಇದ್ದೇವೆ. ಹೆರಿಗೆ ಭತ್ಯೆ ಕೊಡಬೇಕೆಂದು ಕಾನೂನಿನಲ್ಲಿ ಇದೆ. ಅವರು ೧೦-೧೫ ಜನ ಮಕ್ಕಳನ್ನು ಹೆತ್ತರೂ ಸಹ ಹೆರಿಗೆ ಭತ್ಯೆ ಕೊಡಬೇಕು. ಕೇಂದ್ರ ಸರ್ಕಾರದೊಂದಿಗೆ ಚರ್ಚೆ ಮಾಡಿ ಎಲ್ಲಾ ಸೌಲತ್ತುಗಳನ್ನು ಕೊಡಬೇಕೆಂದು ನಮಗೂ ಆಸೆ ಇದೆ. ಇಲ್ಲಿ ಏನಾಗುತ್ತದೆ ಎಂದರೆ ಒಂದು ಕಡೆ ಸಂತಾನ ನಿಯಂತ್ರಣ ಮಾಡುವುದು ಮತ್ತೊಂದು ಕಡೆ ಕಾರ್ಮಿಕರಿಗೆ ಹೆರಿಗೆ ಭತ್ಯೆ ಕೊಡಿ ಎಂದು ಹೇಳುವುದು ಇದು ಯಾವ ನೀತಿ ? ಕಾರ್ಮಿಕರು ತಮ್ಮ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಅದನ್ನು ನಾನು ಒಪ್ಪುತ್ತೇನೆ. ಮಾನ್ಯ ಕೃಷ್ಣನ್‌ರವರು ಇದನ್ನು ಒಪ್ಪುತ್ತಾರೆಂದು ನಾನು ಭಾವಿಸಿದ್ದೇನೆ.

೪-೦೦ ಪಿ.ಎಂ.

ಸ್ವಾಮಿ ಇನ್ನೂ ಒಂದು ವಿಷಯವನ್ನು ನಾನು ಕೇಳಿಕೊಳ್ಳುವುದೇನೆಂದರೆ, ನನ್ನ ಕ್ಷೇತ್ರದಲ್ಲಿ ಇರುವ ಕಾಲೇಜಿನಲ್ಲಿ ಆರ್ಟ್ಸ್ ಸಬ್ಜೆಕ್ಟ್ ಓದುವುದಕ್ಕೆ ಹುಡುಗರಿಗೆ ಅವಕಾಶ ಇದೆ. ಆದರೆ ಸೈನ್ಸ್ ಓದುವುದಕ್ಕೆ ಅವಕಾಶ ಇಲ್ಲದಂತಾಗಿದೆ. ನಮ್ಮ IDSO ಕಾಲೇಜಿನಲ್ಲಿ ಸೈನ್ಸ್ ಸೆಕ್ಷನ್ ಓಪನ್ ಮಾಡು ವುದಕ್ಕೆ ಅವಕಾಶ ಕೊಡಿ. ಸೈನ್ಸ್ ಕ್ಲಾಸ್‌ನ್ನು ಓಪನ್ ಮಾಡುವುದರಿಂದ ಸರ್ಕಾರಕ್ಕೆ ಹೆಚ್ಚು ಹೊರೆ ಏನು ಬೀಳುವುದಿಲ್ಲ. ಒಬ್ಬ ಅಧ್ಯಾಪಕ ಮಾತ್ರ ಬರಬೇಕಾಗುತ್ತದೆ. ನಮ್ಮ ಕ್ಷೇತ್ರದ ಕಾಲೇಜಿಗೆ ಸೈನ್ಸ್ ಕ್ಲಾಸ್ ಓಪನ್ ಮಾಡುವುದಕ್ಕೆ ಅನುಮತಿ ಮಾಡಿಕೊಡಬೇಕೆಂದು ಸರ್ಕಾರದಲ್ಲಿ ವಿನಂತಿಸಿಕೊಳ್ಳು ತ್ತೇನೆ. ನಮ್ಮ ಕ್ಷೇತ್ರದಲ್ಲಿ ಸುಮಾರು ೩೦, ೪೦ ವರ್ಷಗಳಿಂದ ನೀರಿನ ಬವಣೆಯಿಂದ ಜನರು ಬಹಳ ಕಷ್ಟ ಪಡುತ್ತಿದ್ದರು. ಮಾನ್ಯ ಸಣ್ಣ ನೀರಾವರಿ ಮಂತ್ರಿಯವರು ದೊಡ್ಡ ಮನಸ್ಸು ಮಾಡಿ ನೀರಿನ ಬವಣೆ ತಪ್ಪುವುದಕ್ಕೆ ಒಂದು ಸಹಾಯವನ್ನು ಮಾಡಿದರು. ಅವರ ಸಹಾಯದಿಂದ ಒಂದು ಯೋಜನೆ ಕಾರ್ಯಗತವಾಗುತ್ತಿದೆ. ಈಗಾಗಲೇ ೫೦ ಪರ್ಸೆಂಟ್‌ನಷ್ಟು ಕೆಲಸ ಆಗಿದೆ. ಇನ್ನೂ ಸ್ವಲ್ಪ ಮಾತ್ರ ಕೆಲಸ ಇದೆ. ಈ ಕೆಲಸವನ್ನು ಸರ್ಕಾರ ಮಾಡಿಕೊಟ್ಟಿದ್ದರಿಂದ ನಾನು ಹೃತ್ಪೂರ್ವಕವಾಗಿ ಅಭಿನಂದಿಸು ತ್ತೇನೆ. ನಮ್ಮ ಕ್ಷೇತ್ರದಲ್ಲಿ ಸ್ಟೇಡಿಯಂ ಮತ್ತು ರಂಗಮಂದಿರದ ಕೆಲಸಗಳು ಅರ್ಧ ಮಾತ್ರ ಆಗಿವೆ. ಇದರ ಬಗ್ಗೆ ಕೂಡಲೇ ಸರ್ಕಾರ ನಿಗಾ ವಹಿಸಿ ಕೆಲಸಗಳನ್ನು ಪೂರೈಸಿ ಕೊಡಬೇಕೆಂದು ಪ್ರಾರ್ಥನೆ ಮಾಡಿ ಕೊಂಡು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತು ಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಿ. ನಿಂಗಯ್ಯ (ಮೂಡಿಗೆರೆ).—ಮಾನ್ಯ ಉಪಾಧ್ಯಕ್ಷರೇ, ನಮ್ಮ ರಾಜ್ಯದ ರಾಜ್ಯ ಪಾಲರು ದಿನಾಂಕ ೨೦-೧-೧೯೮೮ರಂದು ಎರಡೂ ಸದನಗಳನ್ನು ಉದ್ದೇಶಿಸಿ ಮಾಡಿದ ಭಾಷಣದ ಮೇಲೆ ಈ ಸದನದಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ೧೯೮೩ರಲ್ಲಿ ಕಾಂಗ್ರೆಸ್ ದುರಾಡಳಿತಕ್ಕೆ ಬೇಸತ್ತು ಚುನಾವಣೆ ಯಲ್ಲಿ ಜನತಾ ಪಕ್ಷವನ್ನು ಅಧಿಕಾರಕ್ಕೆ ತಂದಂಥ ಜನತೆಗೆ ಸರ್ಕಾರ ಈ ೫ ವರ್ಷಗಳಲ್ಲಿ ಏನು ಕೆಲಸ ಮಾಡಿದೆ ಮತ್ತು ಏನು ಯೋಜನೆಗಳನ್ನು ಈ ಕರ್ನಾಟಕದ ಜನತೆಗೆ ಅಭಿವೃದ್ಧಿಗೆ ಹಾಕಿಕೊಂಡಿದೆ ಎನ್ನತಕ್ಕ ವಿಷಯವನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿರುವ ಬಗ್ಗೆ ವಿಚಾರಪೂರಿತ ಚರ್ಚೆ ನಡೆದಿದೆ. ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಆ ವಿಚಾರಗಳ ಬಗ್ಗೆ ಪದೇ ಪದೇ ಹೇಳುವುದು ಸರಿಯಲ್ಲ. ಜೊತೆಗೆ ಸಮಯವೂ ಕೂಡ ಕಡಿಮೆ ಇರುವುದೆಂದು ನಾನೇ ತಿಳಿದುಕೊಂಡಿದ್ದೇನೆ. ನಮ್ಮ ಸರ್ಕಾರ ಮಾಡಿದಂಥ ಕೆಲಸಗಳಲ್ಲಿ ಶ್ಲಾಘನೀಯ ಮತ್ತು ದಿಟ್ಟ ಹೆಜ್ಜೆ ಎಂದರೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ರಚನೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳು ರಚನೆಯಾದ ನಂತರ, ಗ್ರಾಮಾಭಿವೃದ್ಧಿ ಬಗ್ಗೆ ಸರ್ಕಾರ ತನ್ನ ಗುರಿಯನ್ನು ಇಟ್ಟುಕೊಂಡಿದೆ ಮತ್ತು ಈ ದಿಸೆಯಲ್ಲಿ ಸಾಕಷ್ಟು ಕೆಲಸಗಳನ್ನು ಮಾಡಿದೆ ಎಂಬುದು ಹೆಮ್ಮೆಯ ವಿಚಾರ. ಆದರೆ ಅಲ್ಲಿರುವ ಕೆಲವು ತೊಂದರೆಗಳು ಅಥವಾ ತಾಪತ್ರಯಗಳ ಬಗ್ಗೆ ಈ ಸದನದ ಗಮನವನ್ನು ಸೆಳೆಯುವುದಕ್ಕೆ ನಾನು ಇಚ್ಛಿಸುತ್ತೇನೆ. ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲ ಪಂಚಾಯಿತಿಗಳ ವ್ಯವಸ್ಥೆ ಬಂದಾಗಿನಿಂದ ಕೆಲಸಗಳು ಗಣನೀಯ ಪ್ರಮಾಣದಲ್ಲಿ ಆಗುತ್ತಿವೆ. ಆದರೆ ಆಡಳಿತ ವ್ಯವಸ್ಥೆಯಲ್ಲಿ ಕೆಲವು ತೊಂದರೆಗಳು ಇವೆ,

ಚಿಕ್ಕಮಗಳೂರು ಜಿಲ್ಲಾ ಪರಿಷತ್ ಬಗ್ಗೆ ಹೇಳಬೇಕೆಂದರೆ ಈವರೆಗೆ ಅಲ್ಲಿಗೆ ಒಬ್ಬ ಮುಖ್ಯ ಕಾರ್ಯದರ್ಶಿಯನ್ನು ಹಾಕಿಕೊಡಲಿಲ್ಲ. ಹಾಕಿದ್ದಂತಹವರು ಈವರೆಗೆ ಅಲ್ಲಿಗೆ ಬರಲಿಲ್ಲ, ಉತ್ತಮವಾದ ಕೆಲಸಗಳನ್ನು ಮಾಡಬೇಕೆನ್ನುವ ಮನಸ್ಸನ್ನು ಇಟ್ಟುಕೊಂಡು ಆಯ್ಕೆಯಾಗಿ ಬಂದಂಥ ಸದಸ್ಯರುಗಳನ್ನು ಹೊಂದಿದ್ದರೂ ಸಹ ಸೆಕ್ರೆಟರಿ ಇಲ್ಲದೆ ಇರುವುದರಿಂದ ಕೆಲಸಗಳು ಸ್ಥಗಿತಗೊಂಡಿವೆ.

ಇಷ್ಟೇ ಅಲ್ಲ, ಇನ್ನೂ ಬಹಳಷ್ಟು ಮಂಡಳ ಪಂಚಾಯಿತ್‌ಗಳಿಗೆ ಕಾರ್ಯದರ್ಶಿಗಳ ನೇಮಕಾತಿಯು ಕೂಡ ಆಗಿಲ್ಲ. ನಾನು ಇದನ್ನು ವಿಶೇಷವಾಗಿ ಹೇಳುತ್ತಿದ್ದೇನೆ ಎಂದರೆ, ಇಂತಹಂಥ ಸತ್ಯವನ್ನು ಹೇಳತಕ್ಕಂಥದ್ದನ್ನು ನಾನು ಸರಿ ಎಂದು ಭಾವಿಸಿದ್ದೇನೆ. ಈ ಒಂದು ಒಳ್ಳೆಯ ವ್ಯವಸ್ಥೆಯು ಸಂಪೂರ್ಣವಾಗಿ ಯಶಸ್ವಿ ಆಗಬೇಕಾದರೆ, ಈ ಒಂದು ಅಧಿಕಾರ ವಿಕೇಂದ್ರೀಕರಣದ ಉದ್ದೇಶ ಈಡೇರ ಬೇಕಾದರೆ, ಅದು ಸರಿಯಾದ ರೀತಿಯಲ್ಲಿ ಜನರಿಗೆ ತಲುಪಬೇಕಾದರೆ ಮೊದಲನೆಯದಾಗಿ ಆಡಳಿತ ವ್ಯವಸ್ಥೆಯು ಸರಿಯಾಗಿ ಆಗಬೇಕು. ಇಲ್ಲದಿದ್ದರೆ ನಾವೂ, ನೀವು ಇಷ್ಟಪಟ್ಟಿರತಕ್ಕಂಥ ಈ ವ್ಯವಸ್ಥೆಯು ಆಚರಣೆಯಲ್ಲಿ ಕುಂಠಿತವಾಗುತ್ತದೆ ಎನ್ನತಕ್ಕಂಥ ಅನುಮಾನವು ನಮ್ಮನ್ನು ಕಾಡುತ್ತಿದೆ ಎಂದು ಹೇಳಬಯಸುತ್ತೇನೆ. ನಿನ್ನೆಯ ದಿವಸ ಕೆಲವು ಗ್ರಾಮಪಂಚಾಯತಿಗಳಲ್ಲಿನ ನೌಕರರು ಇಲ್ಲಿ ಬಂದು ಬಹುಶಃ ಎಲ್ಲರನ್ನೂ ಭೇಟಿಯಾಗಿದ್ದಾರೆ ಎಂದು ಕಾಣುತ್ತದೆ. ಅವರು ತಮ್ಮ ಸಂಕಷ್ಟಗಳನ್ನು ತೋಡಿಕೊಳ್ಳುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಪಂಚಾಯತ್ ವ್ಯಾಪ್ತಿಯಲ್ಲಿ ಕೆಲಸ ಮಾಡತಕ್ಕಂಥವರು ಸುಮಾರು ೧೧ ಸಾವಿರ ಜನರಿದ್ದಾರೆ. ಅವರಿಗೆ ರೂಪಾಯಿ ೩೦ರಿಂದ ಹಿಡಿದು ೨೫೦ ರೂಪಾಯಿಗಳ ವರೆಗೆ ಸಂಬಳವನ್ನು ಕೊಡುತ್ತಾ ಇದ್ದಾರೆ ಎಂಬುದು ಬಹಳಷ್ಟು ಜನರಿಗೆ ತಿಳಿದಿರಬಹುದು ಎಂದು ನಾನು ಅಂದುಕೊಂಡಿದ್ದೇನೆ. ಈ ಪರಿಸ್ಥಿತಿಯು ಬಹಳಷ್ಟು ಪಂಚಾಯತ್‌ಗಳಲ್ಲಿ ಇದೆ. ಈ ಸಂದರ್ಭದಲ್ಲಿ ತಮ್ಮ ಮೂಲಕ ಸರಕಾರದವರ ಗಮನಕ್ಕೆ ನಾನು ತರಬಯಸುವುದೇನೆಂದರೆ ಈ ನೌಕರ ವರ್ಗದವರಿಗೆ ರಾಜ್ಯದಲ್ಲಿ ಕೊಡುತ್ತಿರುವ ಸಂಬಳಗಳ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯ ಶಿರ್ವ ಪಂಚಾಯಿತ್‌ನಲ್ಲಿ ಬಿಲ್ ಅಸಿಸ್ಟೆಂಟ್‌ಗೆ ಎರಡನೆಯ ದರ್ಜೆ ನೌಕರರ ಸಂಬಳ ಕೊಡುತ್ತಿದ್ದಾರೆ ಎಂದು ಹೇಳಿದರು. ಇದು ಒಪ್ಪತಕ್ಕಂಥ ವಿಚಾರ. ಇದೇ ಮತ್ತೊಂದು ಜಿಲ್ಲೆಯನ್ನು ತೆಗೆದುಕೊಂಡಾಗ ಬಳ್ಳಾರಿ ಜಿಲ್ಲೆಯ ಮರಿಹಳ್ಳಿ ಪಂಚಾಯತಿಯಲ್ಲಿ ೪೦೦ ರೂಪಾಯಿಗಳನ್ನು ಕೊಡುತ್ತಾ ಇದ್ದಾರೆ. ರಾಯಚೂರು ಜಿಲ್ಲೆಯ ಹಿಟ್ನಾಳ ಪಂಚಾಯತ್‌ನಲ್ಲಿ ೨೫೦ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಕೊಪ್ಪಳದ ಒಂದು ಅಗಳಗೆರೆ ಎಂಬ ಪಂಚಾಯತ್‌ನಲ್ಲಿ ೧೫೦ ರೂಪಾಯಿ ಸಂಬಳವನ್ನು ಕೊಡುತ್ತಾ ಇದ್ದಾರೆ. ಹೀಗೆ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಕನಿಷ್ಠ ಸಂಬಳವನ್ನು ಕೊಡುತ್ತಾ ಇದ್ದಾರೆ ಒಂದು ರೂಪಾಯಿಯ ಮುಖಬೆಲೆ ೧೦-೧೫ ಪೈಸೆಗಳಷ್ಟು ಇರುವ ಈ ದಿವಸಗಳಲ್ಲಿ ಆ ನೌಕರರು ತಮ್ಮ ಜೀವನವನ್ನು ಹೇಗೆ ತಾನೆ ಮಾಡುವುದಕ್ಕೆ ಸಾಧ್ಯವಿದೆ? ಇದರ ಬಗ್ಗೆ ಸರ್ಕಾರದವರು ಗಮನ ಹರಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅವರು ತಮ್ಮ ಸಂಸಾರಗಳನ್ನು ಹೇಗೆ ನಡೆಸಿಕೊಂಡು ಹೋದಾರು ಎಂಬ ಬಗ್ಗೆ ತಾವು ಸ್ವಲ್ಪ ಆಲೋಚನೆ ಮಾಡತಕ್ಕಂಥ ಸಂದರ್ಭ ಇದಾಗಿದೆ.

ಈ ಸಂದರ್ಭದಲ್ಲಿ ಮಾನ್ಯ ಸಚಿವರಾದ ನಜೀರ್‌ಸಾಬ್‌ರವರು ಈ ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ಗಳ ಬಗ್ಗೆ ಹೇಳಿದ ಒಂದು ಮಾತು, ಸುಂದರವಾದ ಮಾತು ನನ್ನ ಜ್ಞಾಪಕಕ್ಕೆ ಬರುತ್ತಿದೆ. ಅದೇನೆಂದರೆ ''ಎಲ್ಲರಿಗೂ ಸಮಬಾಳು, ಎಲ್ಲರಿಗೂ ಸಮಪಾಲು'' ಎಂಬುದು. ಪ್ರಾಯಶಃ ಈ ವಿಚಾರವನ್ನು ಕೂಡ ಅವರು ಗಮನದಲ್ಲಿಟ್ಟುಕೊಂಡು ಆ ನೌಕರ ವರ್ಗದವರಿಗೆ ಸಹಾಯವನ್ನು ಮಾಡಿಯೇ ಮಾಡುತ್ತಾರೆ ಎಂದು ನನಗನ್ನಿಸಿದೆ. ಈ ಬಗ್ಗೆ ಸರ್ಕಾರದವರಲ್ಲಿ ನನ್ನ ಒತ್ತಾಯ ಏನೆಂದರೆ, ಇವರಿಗೆ ಕನಿಷ್ಠ ೫೦೦ ರೂಪಾಯಿಗಳನ್ನು ಆದರೂ ಒಟ್ಟು ವೇತನ ಎಂದು ಕೊಡಬೇಕು. ಈ ಬಗ್ಗೆ ಒಂದು ನಿರ್ಣಯವನ್ನು ಸರಕಾರ ತೆಗೆದುಕೊಳ್ಳುತ್ತದೆ ಎಂದು ನಾನು ನಂಬಿದ್ದೇನೆ.

ಇನ್ನು ಮತ್ತೊಂದು ವಿಷಯವನ್ನು ಇಲ್ಲಿ ನಾನು ಹೇಳ ಬಯಸುತ್ತೇನೆ. ನಮ್ಮಲ್ಲಿ ಪಂಚಾಯತ್ ರಾಜ್ಯ ವ್ಯವಸ್ಥೆ ಬಂದಿದೆ. ಪ್ರತಿಯೊಂದು ತಾಲ್ಲೂಕುಗಳಲ್ಲಿಯೂ ತಾಲ್ಲೂಕು ಪಂಚಾಯತ ಸಲಹಾ ಸಮಿತಿ ಎಂದು ಒಂದು ಸಮಿತಿ ಇದೆ. ಇದಕ್ಕೆ ಅಲ್ಲಿಯ ಶಾಸಕರನ್ನು ಸಲಹಾ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿ ಐದು ಪೈಸೆಗಳ ಅಧಿಕಾರವೂ ಇಲ್ಲದೇ ಕೆಲಸ ಮಾಡು ಎಂದು ಹೇಳುತ್ತಾರೆ. ಬಹುಶಃ ಎಲ್ಲರೂ ಶಾಸಕರು ಇದನ್ನು ಒಪ್ಪುತ್ತಾರೆ ಎಂದು ಭಾವಿಸುತ್ತೇನೆ. ತಾಲ್ಲೂಕು ಪಂಚಾಯತ್ ಸಮಿತಿ ಏನಿದೆ, ಇದರ ಅವಶ್ಯಕತೆ ಇದೆಯೇ? ಒಂದು ವೇಳೆ ಅವಶ್ಯಕತೆ ಇದೆ ಎಂದು ಪರಿಗಣಿಸುವುದಾದಲ್ಲಿ ಇವರಿಗೆ ಏನು ಅಧಿಕಾರವನ್ನು ಸರ್ಕಾರದವರು ಕೊಟ್ಟಿದ್ದಾರೆ. ಏಕೆಂದರೆ ಮಾನ್ಯ ಪಂಚಾಯತ್‌ರಾಜ್ ಸಚಿವರು ಇಲ್ಲಿ

ಇಲ್ಲ. ಜಾಲಪ್ಪನವರಿಗೆ ಇದರ ಅನುಭವ ಆಗಿಲ್ಲ ಎಂದು ಕಾಣುತ್ತದೆ. ನಮ್ಮ ಭಾಗದ ಶಾಸಕ ಮಿತ್ರರಾದ ಶಂಕರ್‌ರವರಿಗೆ, ನೀಲಕಂಠಪ್ಪನವರಿಗೆ ಎಲ್ಲಾ ವಿಚಾರಗಳೂ ಗೊತ್ತಿವೆ, ತಾವು ಸಚಿವರಾಗಿದ್ದುದರಿಂದ ಪರಿಸ್ಥಿತಿಯು ಅರ್ಥವಾಗಲಿಲ್ಲ ಎಂದು ಕಾಣುತ್ತದೆ. ಅಂಥ ಒಂದು ಸಮಿತಿಯಲ್ಲಿ ಶಾಸಕರು ಏನು ಕೆಲಸವನ್ನು ಮಾಡಬೇಕು? ಕೇವಲ ಮೇಲ್ವಿಚಾರಣೆ ಮಾಡಬೇಕೆಂದು ಮಾತ್ರ ಇದೆ. ಇದರಿಂದಾಗಿ ಅಲ್ಲಿ ನಮ್ಮನ್ನು ನಾವು ಪ್ರಶ್ನೆ ಮಾಡಿಕೊಳ್ಳುವ ರೀತಿಯಲ್ಲಿ ಆಗಿದೆ. ಇದಕ್ಕೆ ಒಂದು ಸೂಕ್ತ ತಿದ್ದುಪಡಿಯನ್ನು ತಂದು ಸ್ವಲ್ಪ ಜವಾಬ್ದಾರಿಯನ್ನು ಕೊಟ್ಟು ಅದಕ್ಕೆ ಹಣವನ್ನು ಕೊಟ್ಟರೆ ಬಹುಶಃ ಇದಕ್ಕೆ ಬೆಲೆ ಬರುತ್ತದೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ತನ್ಮೂಲಕ ಈ ಕಾರ್ಯಕ್ರಮದ ಬಗ್ಗೆ ಹೆಚ್ಚಿನ ಆಸ್ಥೆ ವಹಿಸಬೇಕೆಂದು ತಮ್ಮ ಮೂಲಕ ಸರಕಾರವನ್ನು ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಈ ಸರಕಾರ ಅಸ್ತಿತ್ವಕ್ಕೆ ಬಂದು ೫ ವರ್ಷಗಳು ಕಳೆದಿದೆ ಈ ಐದು ವರ್ಷಗಳಲ್ಲಿ ಆಗಿರುವ ಪ್ರಗತಿಯನ್ನು ಹಿಂದಿನ ಸರಕಾರಗಳಿಗೆ ಹೋಲಿಸಿಕೊಂಡರೆ ನಾವು ನಮ್ಮ ಬೆನ್ನನ್ನು ತಟ್ಟಿಕೊಳ್ಳುವ ರೀತಿಯಲ್ಲಿ ಕೆಲಸಗಳು ಆಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಮಲೆನಾಡಿನಲ್ಲಿ ಹುಟ್ಟಿರತಕ್ಕಂಥಾದ್ದು ನಮ್ಮ ಪುಣ್ಯವೆಂದು ಕಾಣುತ್ತದೆ ಮಾನ್ಯ ಜೀವಿಜಯರವರು ಕೂಡ ಇದನ್ನು ಒಪ್ಪುತ್ತಾರೆಂದು ನಾನು ಭಾವಿಸಿದ್ದೇನೆ ಮಾನ್ಯ ಬಿ.ಎಲ್. ಶಂಕರ್‌ರವರು. ಪಕ್ಕದ ಜಿಲ್ಲೆಯ ಮಂತ್ರಿಗಳು ಮತ್ತು ಶಾಸಕರುಗಳು ಇದರ ಬಗ್ಗೆ ಯೋಚನೆ ಮಾಡಬಹುದು, ಹೇಗೆ ಇತರ ಜಿಲ್ಲೆಗಳಲ್ಲಿ ಏನು ಕೆಲಸಗಳಾಗಿವೆ ಹಾಗೆ, ನಮ್ಮ ಜಿಲ್ಲೆಯಲ್ಲಿ ಕೆಲಸಗಳಾಗಿಲ್ಲ ಎಂದು ಅದಕ್ಕಾಗಿ ಮಲೆನಾಡು ಅಭಿವೃದ್ಧಿ ಮಂಡಲಿ ಮಾಡಿ ಎಂದು ೨-೩ ಸಾರಿ ಒತ್ತಾಯ ಮಾಡಿದೆವು ಆದರೆ ನಮ್ಮ ಸರಕಾರ ಇದರ ಬಗ್ಗೆ ಗಮನಹರಿಸಲಿಲ್ಲ, ೧೯೮೫ನೇ ಇಸವಿಯಲ್ಲಿ ಲೋಕೋಪಯೋಗಿ ಇಲಾಖೆಯ ಬಗ್ಗೆ ಮಾತನಾಡುತ್ತಾ ಮಾನ್ಯ ಸಚಿವರ ಗಮನಕ್ಕೆ ಈ ವಿಷಯವನ್ನು ತಂದಿದ್ದೆ. ನಾನು ನೀರಾವರಿಯ ಬಗ್ಗೆ ಏತಕ್ಕೆ ಹೇಳುತ್ತಿದ್ದೇನೆಂದರೆ ಅಂದಾಜು ಸಮಿತಿಯ ಸದಸ್ಯನಾಗಿ ನಾನು ಸಣ್ಣ ನೀರಾವರಿ ಇಲಾಖೆಯ ಬಗ್ಗೆ ಗಂಭೀರವಾಗಿ ಪ್ರತಿ ತಿಂಗಳು ಮೂರು ನಾಲ್ಕು ಸಾರಿ ಸಭೆ ಸೇರಿ ಚರ್ಚೆ ಮಾಡಿದ್ದೇವೆ. ಮಲಪ್ರಭಾ, ಘಟಪ್ರಭಾ ಯೋಜನೆಗಳು ಏನು ಇವೆ ಆ ಯೋಜನೆಗಳ ಬಗ್ಗೆ ಕೂಡ ನಾವು ಚರ್ಚೆ ಮಾಡಿದೆವು. ೧೯೮೮ನೇ ಇಸವಿಗೆ ಮುಗಿಯಬೇಕಾದ ಕೆಲಸಕ್ಕೆ ಇನ್ನೂ ಹತ್ತಿಪ್ಪತ್ತು ವರ್ಷಗಳು ಹಿಡಿಯುತ್ತದೆ ಎಂದು ಇಲಾಖೆಯವರು ಹೇಳುತ್ತಾರೆ, ಸಂಬಂಧಪಟ್ಟ ಸಚಿವರು ಇಲ್ಲಿ ಈಗ ಇಲ್ಲ. ನನ್ನ ಹತ್ತಿರ ಅಂಕಿ ಅಂಶಗಳು ಕೂಡ ಇತ್ತು ಆದರೆ ಇವತ್ತು ಅದನ್ನು ತರಲಿಲ್ಲ. ಹಣವನ್ನು ಜಾಸ್ತಿ ಕೊಟ್ಟಿದ್ದರೂ ಕೂಡ ಉದ್ದೇಶ ಪೂರ್ವಕವಾಗಿ ಈ ಕೆಲಸವನ್ನು ವಿಳಂಬ ಮಾಡುತ್ತಿದ್ದಾರೆ, ಇದಕ್ಕೆ ಕಾರಣ ಏನು? ಇದನ್ನು ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಹುಟ್ಟಿ ಹರಿಯತಕ್ಕಂತಹ ನದಿಗಳಿಗೆ ಈಗಾಗಲೇ ಹಾಸನದಲ್ಲಿ ಅಣೆಕಟ್ಟನ್ನು ಕಟ್ಟಿದ್ದಾರೆ. ಆದರೆ ನಮ್ಮ ಜಿಲ್ಲೆಯವರು ಅದರಿಂದ ಹೆಚ್ಚು ಅನುಕೂಲವನ್ನು ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಅವರು ಉಪಯೋಗ ಮಾಡಿಕೊಳ್ಳಲಿ ಅವರೂ ಕೂಡ ನಮ್ಮ ಅಣ್ಣತಮ್ಮಂದಿರೇ. ಹೇಮಾವತಿ ನದಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ನಮ್ಮ ಲೋಕೋಪಯೋಗಿ ಸಚಿವರು ಈ ನದಿಗೆ ಸೇರತಕ್ಕ ಉಪನದಿಗಳ ನೀರನ್ನು ಯಾರೂ ಎತ್ತಬಾರದು ಎನ್ನತಕ್ಕ ತಡೆಯಾಜ್ಞೆಯನ್ನು ತಂದಿದ್ದಾರೆ. ನಾವು ಏನು ಪಾಪ ಮಾಡಿದ್ದೇವೆ ಅಲ್ಲಿ ಹುಟ್ಟಿ.

ಶ್ರೀ ಬಿ ಆರ್. ನೀಲಕಂಠಪ್ಪ —೩೫ ಜನ ಮಂತ್ರಿಗಳಿಗೆ ಮೂರು ಜನ ಇದ್ದಾರೆ ನಾವು ಏಕೆ ಹೇಳಬೇಕು. ಹತ್ತು ಜನರನ್ನು ಕರೆಯಿಸಿ,

ಶ್ರೀ ಯು. ಭೂಪತಿ.—ವಿರೋಧ ಪಕ್ಷದವರ ಮಾತು ಕೇಳುವುದು ಬೇಡ ರೂಲಿಂಗ್ ಪಾರ್ಟಿಯವರು ಮಾತನಾಡಿದ್ದನ್ನು ಕೇಳುವುದು ಬೇಡವೇ?

ಶ್ರೀ ಬಿ.ಆರ್. ನೀಲಕಂಠಪ್ಪ ಇರುವ ೩೪ ಜನ ಮಂತ್ರಿಗಳಲ್ಲಿ ಹತ್ತು ಜನರಾದರೂ ಬೇಡವೇ ? ನಿಜವಾಗಿಯೂ ಇದು ಬಹಳ ನಾಚಿಕೆಗೇಡಾಗುತ್ತದೆ. ಹತ್ತು ಜನ ಮಂತ್ರಿಗಳನ್ನಾದರೂ ಕರೆಯಿಸಿ.

ಉಪಾಧ್ಯಕ್ಷರು.—ಆಯಿತು, ಬರುತ್ತಾರೆ. ಎಲ್ಲರೂ ಬರುತ್ತಿದ್ದಾರೆ.

ಶ್ರೀ ಬಿ.ಆರ್. ನೀಲಕಂಠಪ್ಪ.- ಈಗಾಗಲೇ ನಾಲ್ಕುವರೆ ಗಂಟೆಯಾಗುತ್ತಾ ಬಂತು. ಇದೇನು ಊಟದ ಸಮಯವೇ ? ಎಲ್ಲರಿಗೂ ಹೇಳಿಕಳುಹಿಸಿ. ಇಲ್ಲದಿದ್ದರೆ ಏತಕ್ಕಾಗಿ ಮಾತನಾಡಬೇಕು.

ಉಪಾಧ್ಯಕ್ಷರು.—ತಾವು ಅವಕಾಶ ಮಾಡಿಕೊಡಿ. ಎಲ್ಲರೂ ಬರುತ್ತಿದ್ದಾರೆ. ತಮ್ಮ ಭಾಷಣಕ್ಕೆ ಎಲ್ಲರೂ ಇರುತ್ತಾರೆ.

ಶ್ರೀ ಬಿ.ಬಿ. ಸಿಂಗಯ್ಯ.—ಮಾನ್ಯ ಉಪಾಧ್ಯಕ್ಷರೇ, ನಾನು ನೀರಾವರಿ ಇಲಾಖೆಯ ಬಗ್ಗೆ ಹೇಳುತ್ತಿದ್ದೆ. ನಮ್ಮ ಭಾಗದಲ್ಲಿ ಹುಟ್ಟಿ ಹರಿಯುತಕ್ಕಂಥ ಹೇಮಾವತಿ ನದಿಗೆ ಸೇರತಕ್ಕಂಥ ಉಪನದಿಗಳಿಗೆ ಲೋಕೋಪಯೋಗಿ ಇಲಾಖೆಯ ಸಚಿವರು ತಡೆಯಾಜ್ಞೆಯನ್ನು ತಂದಿದ್ದಾರೆ, ನಮಗೆ ಆಗಿರತಕ್ಕಂಥ ಅನ್ಯಾಯದ ಬಗ್ಗೆ ನಮಗೆ ಆಗಿರತಕ್ಕಂಥ ತೊಂದರೆಯ ಬಗ್ಗೆ ಹೇಳಬೇಕಾಗಿತ್ತು, ಆದರೆ ಸಂಬಂಧಪಟ್ಟ ಸಚಿವರು ಇಲ್ಲ. ಅಲ್ಲಿ ಬಹಳಷ್ಟು ಉಪನದಿಗಳಿಗೆ ಪಿಕ್-ಅಪ್‌ನ್ನು ಕಟ್ಟಿಸಿಕೊಂಡು ರೈತರು ನೀರಾವರಿ ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದರು. ಇನ್ನು ಏನೆಲ್ಲಾ ಕೆಲಸಗಳನ್ನು ಕೈಗೆ ತೆಗೆದುಕೊಳ್ಳಬೇಕು ದಿದ್ದರೋ ಅಷ್ಟರಲ್ಲಿ ಈ ತಡೆಯಾಜ್ಞೆ ಏನು ಇದೆ, ಅದು ರೈತರಿಗೆ ಕೆಲಸ ಮಾಡುವುದಕ್ಕೆ ಬಿಡುತ್ತಿಲ್ಲ ನಾವು ಇವತ್ತು ಹಳ್ಳಿಗೆ ಹೋದಾಗಲೆಲ್ಲಾ ಅಲ್ಲಿ ನಮಗೆ ರೈತರು ಪ್ರಶ್ನೆ ಮಾಡುತ್ತಾರೆ, ನೀವು ಏನು ಮಾಡುತ್ತಿದ್ದೀರಿ. ನಾವು ಏನು ತಪ್ಪು ಮಾಡಿದ್ದೇವೆ, ನಮಗೆ ಏತಕ್ಕೆ ಈ ಶಿಕ್ಷೆ ಎಂದು ಕೇಳುತ್ತಾರೆ. ಆದ್ದರಿಂದ ಈ ಪ್ರಶ್ನೆಯನ್ನು ನಮ್ಮ ರೈತರ ಪರವಾಗಿ ನಾವು ತಮ್ಮ ಮೂಲಕವಾಗಿ ಇಲ್ಲಿ ಇದಕ್ಕೆ ಸಂಬಂಧಪಟ್ಟ ಸಚಿವರಿಗೆ ಇದನ್ನು ಪ್ರಶ್ನಿಸಲಿಕ್ಕೆ ಬಯಸುತ್ತೇನೆ. ಈ ತಡೆಯಾಜ್ಞೆಯನ್ನು ಏತಕ್ಕೆ ತಂದಿದ್ದಾರೆ ಎಂದು ಕೇಳುತ್ತಿದ್ದೇನೆ. ಆದ್ದರಿಂದ ಇನ್ನು ಮುಂದಾದರೂ ಈ ತಡೆಯಾಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು ಮತ್ತು ಆ ಭಾಗದ ರೈತರ ಕಷ್ಟಸುಖಗಳನ್ನು ಅರಿತುಕೊಳ್ಳಬೇಕು ಎಂದು ಲೋಕೋಪಯೋಗಿ ಸಚಿವರಲ್ಲಿ ಆ ಭಾಗದ ರೈತರ ಕಷ್ಟಸುಖಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ರೈತರ ಕಷ್ಟವನ್ನು ನಿಭಾಯಿಸಬೇಕು ಎಂದು ಅವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಉದ್ಯೋಗಗಳನ್ನು ಒದಗಿಸುವುದರ ಬಗ್ಗೆ ಹೇಳುವುದಾದರೆ ಶೀಘ್ರಲಿಪಿಗಾರರನ್ನು ಆಯ್ಕೆ ಮಾಡಲಿಕ್ಕೆ ಒಂದು ಸಮಿತಿಯನ್ನು ರಚನೆ ಮಾಡಿತ್ತು. ಮಧ್ಯದಲ್ಲಿ ಕೆಲವು ಆರೋಪಗಳು ಬಂದ ಕಾರಣಕ್ಕಾಗಿ ಅದನ್ನು ಅಂದರೆ ಆ ಸಮಿತಿಯನ್ನೇ ವಿಸರ್ಜನೆ ಮಾಡಿ ಈವರೆವಿಗೂ ಅದರ ಬಗ್ಗೆ ಏನೂ ಮಾಡಿಲ್ಲ. ಅದನ್ನು ಕೂಡಲೇ ಮಾಡಬೇಕು ಮತ್ತು ಮೊನ್ನೆ ಒಂದು ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ನೋಡಿದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ೩೦ ಸಾವಿರ ದಿಂದ ನಲವತ್ತು ಸಾವಿರ ದವರೆಗೂ ಹುದ್ದೆಗಳು ಖಾಲಿ ಇವೆ ಅಷ್ಟು ನೌಕರರನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಅದನ್ನು ಹಂತ ಹಂತವಾಗಿ ಮಾಡಬೇಕು. ಅದನ್ನು ಮಾಡುವುದರ ಮೂಲಕ ದುಡಿಯುತಕ್ಕಂಥ ಕೈಗಳಿಗೆ ಕೆಲಸವನ್ನು ಕೊಡಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯಮಾಡುತ್ತೇನೆ. ಇನ್ನೊಂದು ಮುಖ್ಯವಾಗಿ ಹೇಳತಕ್ಕಂಥ ವಿಷಯ ಎಂದರೆ ನಿನ್ನೆ ನಮ್ಮ ಮಾನ್ಯ ಆರೋಗ್ಯ ಸಚಿವರು ನಮ್ಮ ಸ್ನೇಹಿತರೊಬ್ಬರು ಕೇಳಿದ ಪ್ರಶ್ನೆಗೆ ಉತ್ತರ ನಿವೃತ್ತಿ ವಯಸ್ಸನ್ನು ೫೮ರಿಂದ ೫೫ಕ್ಕೆ ಇಳಿಸಿ ಎನ್ನುವ ಪ್ರಶ್ನೆಗೆ ಅದು ಸಾಧ್ಯವಿಲ್ಲದ ಮಾತು ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಇವತ್ತು ಕೆಲಸಕ್ಕೆ ಬರುವಂಥ ಒಂದು ಶಿಕ್ಷಣವನ್ನು ನಮ್ಮ ಜನರಿಗೆ ಕೊಡಬೇಕು. ಸುಮ್ಮನೆ ಅವರಿಗೆ ಮಾನಸಿಕವಾಗಿ ಅಥವಾ ಹಿಂಸೆ ಕೊಡುವುದಕ್ಕಿಂತ ಬದಲಾಗಿ ಅವರ ಮನಸ್ಸು ವಿಕಾಸ ಆಗುವಂಥ ಶಿಕ್ಷಣವನ್ನು ಕೊಡಬೇಕು ಎಂದು ಹೇಳುತ್ತೇನೆ ಮತ್ತು ಆ ದಿಕ್ಕಿನಲ್ಲಿ ಅವರಿಗೆ ಅನುಕೂಲವನ್ನು ಮಾಡಿಕೊಡಬೇಕು ಎಂದು ಹೇಳುವುದಲ್ಲದೆ ನಿವೃತ್ತಿ ವಯಸ್ಸನ್ನು ೫೮ರಿಂದ ೫೫ಕ್ಕೆ ಇಳಿಸುವ ವಿಷಯದ ಬಗ್ಗೆ ಮತ್ತೊಮ್ಮೆ ಪರಿಶೀಲಿಸಬೇಕು ಎಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ನಿರುದ್ಯೋಗಿಗಳ ಸಂಖ್ಯೆ ಬೆಳೆದಿರತಕ್ಕಂಥ ಈ ಸಂದರ್ಭದಲ್ಲಿ ಅವರಿಗೆ ಉದ್ಯೋಗವನ್ನು ಕೊಡಬೇಕೆಂಬ ದೃಷ್ಟಿಯಿಂದ ಈ ನೌಕರರ ನಿವೃತ್ತಿ ವಯಸ್ಸನ್ನು ಇಳಿಸಬೇಕು ಎಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುವುದಲ್ಲದೆ ಈ ಮಧ್ಯೆ ಒಂದು ಅಥವಾ ಎರಡು ವರ್ಷಗಳಲ್ಲಿ ನಿವೃತ್ತಿ ಆಗತಕ್ಕ ಜನರಿಗೆ ಅನುಕೂಲವಾಗ ತಕ್ಕ ಉದ್ದೇಶ ಕೂಡ ಸರ್ಕಾರಹೊಂದಿದೆ. ಅವರಿಗೆ ಒಂದು ಅಥವಾ ಎರಡು ವರ್ಷಗಳಲ್ಲಿ ಕೊಡಬೇಕಾದ ಸಂಬಳದ ನಂತರ, ರಿಟೈರ್ ಆದ ಮೇಲೆ ಸಿಗತಕ್ಕ ಬೆನಿಫಿಟ್ಸ್‌ಗಳನ್ನು ಒಮ್ಮೆಲೆ ಸರ್ಕಾರ ಕೊಡಬೇಕಾಗಿರುವುದು ಹೊರೆ ಆಗುವುದಾದರೆ ಅದನ್ನು ಎನ್.ಎಸ್.ಸಿ.ಯಲ್ಲಿ ಕೊಟ್ಟು ಅವರ ಮನಸ್ಸಿಗೆ ಸಮಾಧಾನ ಮಾಡತಕ್ಕ ರೀತಿಯಲ್ಲಿ ಮಾಡಬೇಕು. ಇದನು

ಮಾಡದಿದ್ದ ಪಕ್ಷದಲ್ಲಿ ನಿರುದ್ಯೋಗಿಗಳ ಮನಸ್ಸಿಗೆ ತುಂಬಾ ನೋವಾಗಿ ಅವರು ಜೀವನದಲ್ಲಿ ಬೇಸರ ಪಟ್ಟುಕೊಳ್ಳುತ್ತಾರೆ, ಆದುದರಿಂದ ನೌಕರರ ನಿವೃತ್ತಿ ವಯಸ್ಸನ್ನು ೫೮ರಿಂದ ೫೫ಕ್ಕೆ ಇಳಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಮ್ರಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ. ಐ.ಆರ್.ಡಿ.ಪಿ. ಮತ್ತು ಅಂತ್ಯೋದಯ ಯೋಜನೆಯ ಬಗ್ಗೆ ನನ್ನ ಕ್ಷೇತ್ರದಲ್ಲಿ ಅವುಗಳ ಬಗ್ಗೆ ಪ್ರತಿ ಮಾಸಿಕ ಸಭೆಯಲ್ಲಿ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ನಡೆದಂತಹ ವಿಷಯವನ್ನು ನನ್ನ ಗಮನಕ್ಕೆ ಬಂದಿರತಕ್ಕ ವಿಷಯ ವನ್ನು ಈ ಸಂದರ್ಭದಲ್ಲಿ ತರಬಯಸುತ್ತೇನೆ, ಬಹಳಷ್ಟು ಕಡೆ ಇದು ಸಮರ್ಪಕವಾಗಿ ನಡೆದಿಲ್ಲ, ಅವುಗಳನ್ನು ಸರಿಯಾಗಿ ಮಾಡಬೇಕು. ಆದರ ಪ್ರಯೋಜನ ಬಡವರಿಗೆ ತಲುಪಬೇಕು, ತಲುಪಿಸ ಬೇಕೆಂಬ ಮನಸ್ಸು ಇದ್ದರೂ ಆ ಕೆಲಸವನ್ನು ಬಹುತೇಕ ಜನಕ್ಕೆ ತಲುಪಿಸುವ ಮನಸ್ಸು ಇಲ್ಲವೆಂದು, ಸುತ್ತಮುತ್ತಲ ತಾಲ್ಲೂಕುಗಳಲ್ಲಿರುವುದನ್ನು ತಿಳಿದುಕೊಂಡಿದ್ದೇನೆ. ಇದನ್ನು ಮಾನ್ಯ ಶಂಕರ್‌ರವರು ಹೇಳಿದ್ದಾರೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನನ್ನ ಕ್ಷೇತ್ರದಲ್ಲಿರುವ ಹೊಸಗೆರೆ ಎಂಬ ಗ್ರಾಮದಲ್ಲಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಮೂಲಕ ೨೬ ಜನ ಹರಿಜನ-ಗಿರಿಜನರಿಗೆ ತಲಾ ೨ ಸಾವಿರ ರೂಪಾಯಿಗಳಂತೆ ಐ.ಆರ್.ಡಿ.ಪಿ. ಯೋಜನೆಯಲ್ಲಿ ಸಾಲ ಕೊಟ್ಟಿದ್ದಾರೆ. ಅದರಲ್ಲಿ ಬಂದಿರ ತಕ್ಕ ಸಬ್ಸಿಡಿ ಹಣ ೬೦೦ ರೂಪಾಯಿಗಳು ಏನು ಇದೆ, ಆ ಸಬ್ಸಿಡಿಯನ್ನು ಮ್ಯಾನೇಜರ್ ಕೊಟ್ಟಿಲ್ಲ. ಆದರೆ ಲೆಕ್ಕದಲ್ಲಿ ಸೊನ್ನೆ ತೋರಿಸಲಾಗಿದೆ. ಅಂದರೆ ಈ ರೀತಿಯ ಅನ್ಯಾಯಗಳು ನಡೆಯುತ್ತಾ ಇವೆ. ಏಕೆ ಇದನ್ನು ನಾನು ಹೇಳುತ್ತಿದ್ದೇನೆಂದರೆ. ಜನರ ಕಲ್ಯಾಣದ ಬಗ್ಗೆ ಅವರ ಅಭಿವೃದ್ಧಿ ಬಗ್ಗೆ ಮನಸ್ಸು ಇಲ್ಲದೇ ಇರತಕ್ಕ ಜನ ಇದ್ದಾರೆ ಇಲ್ಲದಿದ್ದರೆ ಈ ಕಾರ್ಯಕ್ರಮಗಳು ಏಕೆ ಯಶಸ್ವಿಯಾಗುವುದಿಲ್ಲ. ಈ ರೀತಿಯ ಕಾರ್ಯಗಳು ಆಗುತ್ತಿರುವುದರಿಂದ ಅಭಿವೃದ್ಧಿ ಕೆಲಸಗಳು ಜನರಿಗೆ ತಲುಪುತ್ತಿಲ್ಲವೆಂದು ವಿಷಾದದಿಂದ ನಾನು ಹೇಳಬೇಕಾಗಿದೆ. ವಿದ್ಯುದ್ದೀಕರಣದ ವಿಚಾರದಲ್ಲಿ ಈಗಾಗಲೇ ನಮ್ಮ ಸ್ನೇಹಿತರು ಗಳು ಹೇಳಿದ್ದಾರೆ. ಅದನ್ನು ನಾನು ಹೇಳುವುದು ಅಂದರೆ ಬಹುಶಃ ನಮ್ಮ ಸರ್ಕಾರ ಐದು ವರ್ಷಗಳಲ್ಲಿ ಗಣನೀಯ ಪ್ರಮಾಣದಲ್ಲಿ ಮಾಡಿದೆ ಎಂದು ಹೇಳಬಯಸುತ್ತೇನೆ. ಆದರೆ ಇನ್ನೂ ಬಹುತೇಕವಾಗಿ ಹ್ಯಾಮ್ಲೆಟ್‌ಗಳು ಆಗಿಲ್ಲ. ನನ್ನ ತಾಲ್ಲೂಕಿನ ಬಗ್ಗೆ ಹೇಳುವುದಾದರೆ ಎಲ್ಲಾ ಕಂದಾಯಂದ ಗ್ರಾಮಗಳಿಗೆ ವಿದ್ಯುದ್ದೀಕರಣ ಆಗಿದೆ. ಕಂದಾಯದ ಗ್ರಾಮಗಳಿಗೆ ಹೊಂದಿಕೊಂಡು ಇರುವ ಹ್ಯಾಮ್ಲೆಟ್‌ಗಳಲ್ಲಿ ಬಹಳಷ್ಟು ವಿದ್ಯುದ್ದೀಕರಣ ಆಗಬೇಕಾಗಿದೆ. ಅದನ್ನು ಆದಷ್ಟು ಬೇಗ ಮುಗಿಸುತ್ತೇವೆಂದು ರಾಜ್ಯ ಪಾಲರ ಭಾಷಣದಲ್ಲಿ ಹೇಳಿದ್ದಾರೆ. ಅದನ್ನು ತೀವ್ರಗತಿಯಲ್ಲಿ ಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಭಾಗ್ಯಜ್ಯೋತಿ ಯೋಜನೆ ಬಗ್ಗೆ ಹೇಳುವುದಾದರೆ ಇದನ್ನು ಸಹ ಹೆಚ್ಚಿಸಿ ರೀತಿ ಯಲ್ಲಿ ಮಾಡಬೇಕು. ಕೆಲವೊಂದು ಹಳ್ಳಿಯಲ್ಲಿ ಇದನ್ನು ಕೊಟ್ಟಿರುವುದು, ಕೆಲವೊಂದು ಕಡೆ ಕೊಡದೆ ಇರುವುದು ನಡೆದಿದೆ. ಪ್ರತಿಯೊಂದು ವಿಚಾರದಲ್ಲಿ ನಮ್ಮ ಮಾಸಿಕ ಸಭೆಯಲ್ಲಿ ಅರ್ಜಿಗಳು ಬರುತ್ತವೆ, ನಮಗೆ ಮಾಡಿಕೊಟ್ಟಿಲ್ಲ ಮಾಡಿಕೊಡಿ ಎಂದು. ಆದ್ದರಿಂದ ಹೆಚ್ಚಿನ ರೀತಿಯಲ್ಲಿ ಕ್ರಮ ತೆಗೆದುಕೊಂಡು ಎಲ್ಲಾ ಜನತಾ ಮನೆಗಳಿಗೆ ಬೆಳಕಿನ ಭಾಗ್ಯ ಕೊಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ನಾನು ಕೇಳಿ ಕೊಳ್ಳುತ್ತೇನೆ, ಸಹಕಾರಿ ಸಾಲಗಳ ಬಗ್ಗೆ ಈಗಾಗಲೇ ನಮ್ಮ ಸರ್ಕಾರ ರೈತರಿಗೆ ಕೊಟ್ಟಿರತಕ್ಕಂಥ ಒಂದು ರಿಯಾಯಿತಿಯ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ನಿಜಕ್ಕೂ ಇದು ಒಳ್ಳೆಯ ಕೆಲಸ, ಈ ಸಂದರ್ಭದಲ್ಲಿ ಈ ವಿಚಾರದಲ್ಲಿ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಯಾವುದೇ ಸರ್ಕಾರವೂ ಸಹ ರೈತರಿಗೆ ಶೇಕಡ ೬ ರೂಪಾಯಿಗಳ ಬಡ್ಡಿಯಂತೆ ಸಾಲವನ್ನು ಕೊಡ ತಕ್ಕಂಥ ಯೋಜನೆಯನ್ನು ಮಾಡಿರಲಿಲ್ಲ. ಇದನ್ನು ನಾವು ಹೇಳಿದರೆ ಅದು ನಿಜವಾಗಿ ಅತಿಶಯೋಕ್ತಿ ಆಗಲಾರದು ಎಂದು ನನ್ನ ಅಭಿಪ್ರಾಯ.

ಆದರೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ, ಮೊನ್ನೆ ನಡೆದಂಥ ಜನತಾ ಪಕ್ಷದ ವಿಜಯೋತ್ಸವದ ಸಂದರ್ಭದಲ್ಲಿ ಎಲ್ಲಾ ಹಳ್ಳಿಗಳಿಂದ ಬಂದಿದ್ದ ರೈತರ ಸಮಾವೇಶದಲ್ಲಿ ಹಾಗೂ ಅಂದು ಸೇರಿದ್ದ ಬೃಹತ್ ಜನಮೇಳವನ್ನು ಉದ್ದೇಶಿಸಿ ಮಾನ್ಯ ಮುಖ್ಯಮಂತ್ರಿಗಳು ಮಾತನಾಡು ವಂತಹ ಸಂದರ್ಭದಲ್ಲಿ ರೈತರು ಸಹಕಾರ ಸಂಘಗಳ ಮೂಲಕ ತೆಗೆದುಕೊಂಡಿರುವ ಸಾಲವನ್ನು ಮರು ಸಂದಾಯ ಮಾಡಿದರೆ ಅದರ ಮೇಲಿನ ಪೀನಲ್ ಇಂಟರೆಸ್ಟನ್ನು ಮನ್ನಾ ಮಾಡಲಾಗುವುದೆಂದು ಹೇಳಿ ದರು. ಆದರೆ ಈ ಬಗ್ಗೆ ಬ್ಯಾಂಕ್‌ಗಳಿಗೆ ಇನ್ನೂ ಸರ್ಕಾರದಿಂದ ಆದೇಶ ಹೋಗಿಲ್ಲ ಎಂದು ನನ್ನ ಕೊಠಡಿಗೆ ಬಂದಿದ್ದ ರಾಮನಗರದ ರೈತರು ತಿಳಿಸಿದರು. ಈಗ ಸಹಕಾರ ಸಚಿವರು ಇಲ್ಲಿ ಇಲ್ಲ. ಆದ್ದರಿಂದ ಇಲ್ಲಿರುವ ಬೇರೆ ಸಚಿವರುಗಳ ಗಮನಕ್ಕೆ ತರುತ್ತೇನೆ. ಏನೆಂದರೆ, ಈ ಬಗ್ಗೆ ಅದಷ್ಟೂ ಬೇಗ ಎಲ್ಲಾ ಬ್ಯಾಂಕ್‌ಗಳಿಗೆ ಆದೇಶವನ್ನು ಕಳುಹಿಸಿಕೊಡಬೇಕು. ಈಗ ರೈತರಿಗೆ ಒಂದು ರೀತಿಯ ಹಿಂಸೆ

ಯಾಗುತ್ತಿದೆ. ಆದ್ದರಿಂದ ಇದನ್ನು ಗಮನದಲ್ಲಿಟ್ಟುಕೊಂಡು ನಾನು ಈ ಮಾತನ್ನು ಹೇಳುತ್ತಿದ್ದೇನೆ

ಇನ್ನು ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಹೇಳಬೇಕಾಗಿದೆ. ಈ ಹಿಂದಿನ ಸರ್ಕಾರಕ್ಕೆ ಹೋಲಿಸಿದರೆ ನಮ್ಮ ಜನತಾ ಸರ್ಕಾರದ ಅವಧಿಯಲ್ಲಿ ವಿದ್ಯಾರ್ಥಿಗಳ ಚಳುವಳಿಗಳು, ಕಾರ್ಮಿಕರ ಚಳುವಳಿಗಳು, ರೈತರ ಚಳುವಳಿಗಳು ಗಣನೀಯವಾಗಿ ಕಡಿಮೆ ಆಗಿವೆ ಎಂದು ಹೇಳಿದರೆ ಅದು ಉತ್ಪ್ರೇಕ್ಷೆ ಆಗುವುದಿಲ್ಲ.

ಶ್ರೀ ಯಂ. ಭೂಪತಿ.—ಚಳವಳಿಗಳು ಆಗುತ್ತಿಲ್ಲವೆಂದು ಹೇಳಬೇಡಿ, ಆದರೆ ಅವು ಕಡಿಮೆ ಆಗಿವೆ. ಏತಕ್ಕೆ ಕಡಿಮೆ ಆಗಿವೆ ಎಂದರೆ, ಚಳವಳಿ ಮಾಡಿ ಮಾಡಿ ಅವರಿಗೆ ರೋಸಿಹೋಗಿ, ಇದನ್ನು ಮಾಡುವುದರಿಂದ ಏನೂ ಆಗುವುದಿಲ್ಲವೆಂದು ತಿಳಿದುಕೊಂಡು ಚಳವಳಿ ಮಾಡುವುದನ್ನು ಬಿಟ್ಟಿದ್ದಾರೆ.

ಶ್ರೀ ಬಿ. ಧರ್ಮಪ್ಪ.—ಇದು ಸುಖೀ ರಾಜ್ಯ. ಆದ್ದರಿಂದ ಚಳುವಳಿಗಳು ನಿಲ್ಲ.

ಶ್ರೀ ಬಿ. ಬಿ. ನಿಂಗಪ್ಪ.—ಜನರಿಗೆ ಹೋರಾಟ ಮಾಡಬೇಡಿ ಚಳವಳಿ ಮಾಡಬೇಡಿ ಎಂದು ನಮ್ಮ ಸರ್ಕಾರ ಏನೂ ಹೇಳಿಲ್ಲ. ಈ ನಮ್ಮ ಸರ್ಕಾರದವರು ಜನರಿಗೆ ಕೊಟ್ಟ ಮಾತನ್ನು ಈಡೇರಿಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ ಈ ಕಾರಣದಿಂದ ಚಳವಳಿಗಳು ಹೆಚ್ಚಾಗಿ ನಡೆಯುತ್ತಿಲ್ಲ. ಇದು ಈ ಹಿಂದಿನ ಸರ್ಕಾರಕ್ಕಿಂತ ಕಡಿಮೆ ಆಗಿದೆ. ಆದರೆ ನಮ್ಮ ರಾಜ್ಯದಲ್ಲಿ ಡಕಾಯಿತಿಗಳು ನಡೆಯುತ್ತಿವೆ. ಇದರಿಂದ ಜನರಿಗೆ ಒಂದು ರೀತಿಯ ಕಿರಿಕಿರಿಯಾಗುತ್ತಿದೆ. ಇದು ಹಳ್ಳಿಗಳಲ್ಲಿ ನಡೆಯುತ್ತಿಲ್ಲ, ಪಟ್ಟಣಗಳಲ್ಲಿ ನಡೆಯುತ್ತಿದೆ. ಈ ಬಗ್ಗೆ ಮಾನ್ಯ ಗೃಹಸಚಿವರು ಹೆಚ್ಚಿನ ಆಸಕ್ತಿ ವಹಿಸಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇನ್ನೂ ಹೆಚ್ಚಿನ ಆಸ್ತೆ ವಹಿಸಬೇಕು. ರಾಜ್ಯದ ಎಲ್ಲಾ ಕಡೆ ಶಾಂತಿ ಮತ್ತು ನೆಮ್ಮದಿ ನೆಲೆಸುವಂತೆ ನೋಡಿಕೊಳ್ಳಬೇಕು. ಈಗ ಹಳ್ಳಿಗಳ ರುವಂತಹ ಶಾಂತಿ ಮತ್ತು ನೆಮ್ಮದಿ ಪಟ್ಟಣಗಳಲ್ಲಿಯೂ ನೆಲೆಸುವಂತೆ ನೋಡಿಕೊಳ್ಳಬೇಕು. ಮಾನ್ಯ ಐ. ಬಿ. ಶಂಕರ್ ಅವರು ಹೇಳಿದ ಪ್ರಕಾರ ಈಗ ನಮ್ಮ ರಾಜ್ಯದ ಜನಸಂಖ್ಯೆ ಜಾಸ್ತಿ ಆಗಿದೆ. ೧೦–೨೦ ವರ್ಷಗಳ ಹಿಂದಿನ ಜನಸಂಖ್ಯೆ ಆಧಾರದ ಮೇಲೆ ಏನು ಪೋಲೀಸರನ್ನು ನೇಮಕ ಮಾಡಲಾಗಿತ್ತು, ಅದನ್ನು ಈಗಿನ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚು ಮಾಡಿಲ್ಲ. ನಾನು ಆಲ್ದೂರು ಪೋಲೀಸ್ ಠಾಣೆಗೆ ಹೋಗಿದ್ದಾಗ ಅಲ್ಲಿನ ಪೋಲೀಸ್ ಅಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿ ಹೆಚ್ಚಿರುವುದರಿಂದ ಇನ್ನೂ ೧೨ ಜನ ಪೋಲೀಸರು ಹೆಚ್ಚಾಗಿ ಬೇಕಾಗುತ್ತದೆಂದು ನನಗೆ ಹೇಳಿದರು. ನಮ್ಮದು ಮಲೆನಾಡು ಪ್ರದೇಶ. ಹತ್ತಿರಿಂದ ೩೦ ಕಿಲೋಮೀಟರ್ ವ್ಯಾಪ್ತಿಯಲ್ಲಿ ಒಂದು ಪೋಲೀಸ್ ಠಾಣೆ ಇದೆ. ಹಳ್ಳಿಗಳಲ್ಲಿ ಏನಾದರೂ ಸಣ್ಣ ಪುಟ್ಟ ಘಟನೆಗಳು ನಡೆದರೆ, ಜನರು ದೂರು ಕೊಡಲು ಬಹಳ ದೂರ ನಡೆದುಕೊಂಡು ಬರಬೇಕಾಗಿದೆ, ಬಣಕಲ್‌ನಲ್ಲಿ ಒಂದು ಪೋಲೀಸ್ ಠಾಣೆ ಇದೆ. ಇದು ನನ್ನ ಕ್ಷೇತ್ರದಲ್ಲಿ ಬರುತ್ತದೆ. ಅಲ್ಲಿನ ೩೫ ಕಿಲೋಮೀಟರ್ ವ್ಯಾಪ್ತಿಗೆ ಇದೊಂದು ಪೋಲೀಸ್ ಸ್ಟೇಷನ್ ಇದೆ. ಹಳ್ಳಿಗಳಲ್ಲಿನ ಜನರಿಗೆ ಏನಾದರೂ ಹೆಚ್ಚು ಕಡಿಮೆ ಆದರ ಕೂಡಲೇ ಪೋಲೀಸ್ ಸ್ಟೇಷನ್‌ಗೆ ಹೋಗಿ ದೂರು ಕೊಡಲು ವಾಹನ ಸೌಲಭ್ಯ ಕೂಡ ಅವರಿಗೆ ಇರುವುದಿಲ್ಲ. ಆದ್ದರಿಂದ ಅಲ್ಲಿ ಇದರ ಸಂಖ್ಯೆಯನ್ನು ಹೆಚ್ಚು ಮಾಡಬೇಕು. ಅಲ್ಲಿ ಮೊದಲು ಒಂದು ಔಟ್–ಪೋಸ್ಟ್ ಇತ್ತು, ಈಗ ಅದೂ ಸಹ ಇಲ್ಲ. ಮಾನ್ಯ ರಾಚಯ್ಯನವರು ಗೃಹ ಮಂತ್ರಿಗಳಾಗಿದ್ದಾಗ ಇದನ್ನು ಅವರ ಗಮನಕ್ಕೆ ತಂದಿದ್ದೆ. ಆದರೆ ಏನೂ ಆಗಲಿಲ್ಲ. ಈಗ ಹೊಸದಾಗಿ ಪೋಲೀಸ್ ಸ್ಟೇಷನ್ ಮಂಜೂರು ಮಾಡುವುದಿದ್ದರೆ ಅದನ್ನು ನಮ್ಮ ಕ್ಷೇತ್ರಕ್ಕೆ ಮಂಜೂರು ಮಾಡಬೇಕೆಂದು ಅಲ್ಲಿನ ಜನತೆಯ ಪರವಾಗಿ ನಾನು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.— ಮಲೆನಾಡಿನ ಜನರು ಬಹಳ ಒಳ್ಳೆಯ ಜನರು. ಆದ್ದರಿಂದ ಆ ಭಾಗದಲ್ಲಿ ಪೋಲೀಸ್ ಸ್ಟೇಷನ್‌ಗಳನ್ನು ಜಾಸ್ತಿ ಮಾಡಿಲ್ಲ.

೪–೩೦ ಪಿ. ಎಂ.

ಶ್ರೀ ಯಂ. ಭೂಪತಿ.— ಪೋಲೀಸ್ ಇದ್ದಲ್ಲೆಲ್ಲಾ ತೊಂದರೆಯಾಗುತ್ತದೆ ಎಂದು ನೀವು ಹೇಳಬಹುದು.

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಭೂಪತಿಯವರ ಕಾನ್‌ಸ್ಟಿಟ್ಯುಯನ್ಸಿಯಲ್ಲಿ ಜಾಸ್ತಿ ಮಾಡಬೇಕು.

ಶ್ರೀ ಬಿ. ಬಿ. ನಿಂಗಯ್ಯ.— ಈ ಕಾನೂನು ವ್ಯವಸ್ಥೆಯನ್ನು ಸುಗಮ ಗೊಳಿಸುವ ದೃಷ್ಟಿಯಿಂದ ನಾವು ಈ ಮಾತನ್ನು ಹೇಳಿದೆ. ದಯ ಮಾಡಿ ಸಚಿವರು ಇದನ್ನು ಗಮನದಲ್ಲಿಟ್ಟುಕೊಂಡು ಮುಂದೆ ಕೊಡುವಾಗ ನಮಗೆ ಒಂದು ಪೋಲೀಸ್ ಠಾಣೆಯನ್ನು ಮಂಜೂರು ಮಾಡಬೇಕು ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಬಡವರ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ನಮ್ಮ ಸ್ನೇಹಿತರು ಮಾತನಾಡಿದ್ದಾರೆ. ಈ ವಿಚಾರದಲ್ಲಿ ಒಂದು ಮಾತನ್ನು ಮಾತ್ರ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಸನ್ಮಾನ್ಯ ಅಧ್ಯಕ್ಷರೆ ೨-೩ ಜಿಲ್ಲಾ ಪರಿಷತ್ತಿನ ಸಭೆಗಳಲ್ಲಿ ಚರ್ಚೆ ಮಾಡಿದ್ದೇವೆ. ನಮ್ಮ ಜಿಲ್ಲೆಯಲ್ಲಿ ೩೦ ಸಾವಿರ ಹಸಿರು ಕಾರ್ಡುಗಳನ್ನು ಹೆಚ್ಚು ಕೊಟ್ಟಿದ್ದೇವೆ ಎನ್ನತಕ್ಕಂಥ ಮಾತು ಚರ್ಚೆಗೆ ಬಂದಿದೆ. ಇದು ಹೇಗೆ ಹೆಚ್ಚಾಯಿತು ಎಂದರೆ ಬೆನಿಫಿಷರೀಸನ್ನು ಹುಡುಕತಕ್ಕ ಸಂದರ್ಭದಲ್ಲಿ ಬಹಳಷ್ಟು ದುರ್ವ್ಯವಹಾರ ನಡೆದಿದೆ, ಅದು ಸಮರ್ಪಕವಾಗಿಲ್ಲ ಎನ್ನುವ ವಿಚಾರ ವೇದ್ಯವಾಗುತ್ತದೆ ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ಹೇಗಬಯಸುತ್ತೇನೆ. ಈಗ ಮಂಡಲ ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದಿವೆ. ಈಗಾಗಲೇ ಕೊಟ್ಟಿರತಕ್ಕಂಥ ಕಾರ್ಡುಗಳನ್ನು ವಾಪಸಾ ಪಡೆದು ಹೊಸದಾಗಿ ಮಂಡಲ ಪಂಚಾಯಿತಿ ಸದಸ್ಯರ ಮೂಲಕ ಕೊಡಿಸುವ ಏರ್ಪಾಡು ಮಾಡಿದರೆ ಅವ್ಯವಹಾರಗಳನ್ನು ಕಡಿಮೆ ಮಾಡಬಹುದು ಎಂದು ನನ್ನ ಅಭಿಪ್ರಾಯ. ಇನ್ನು ಓ. ಎ. ಪಿ.ಎ.ಪಿ, ಡೆರೂ ಪೆನ್‌ಷನ್ ಇವುಗಳಲ್ಲೂ ಕೂಡ ೫ ಎಕರೆ, ೧೦ ಎಕರೆ ಜಮೀನು ಇದ್ದವರಿಗೆ ಕೊಟ್ಟಿರುವುದು ನನ್ನ ಗಮನಕ್ಕೆ ಬಂದಿದೆ. ಈ ರೀತಿ ದುರ್ವ್ಯವಹಾರ ಆಗಿ ಯಾರಿಗೆ ನಿಜವಾಗಿ ಸಿಗಬೇಕೋ ಅವರಿಗೆ ಸಿಕ್ಕದೆ ಯಾರ್ಯಾರಿಗೋ ಹೋಗುವುದನ್ನು ತಡೆಗಟ್ಟಬೇಕು. ಈಗ ಆಗಿರುವುದು ತಪ್ಪು, ಅದು ಮತ್ತೆ ಆಗಬಾರದು ಎನ್ನುವುದು ನನ್ನ ಅಭಿಮತ.

ಇನ್ನು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಈ ವಿಚಾರದಲ್ಲಿ ಮಾನ್ಯ ಭೂಪತಿಯವರು ಇಲ್ಲ ಎಂದು ಹೇಳಲಾರರು ಎಂದು ನಾನು ಭಾವಿಸಿದ್ದೇನೆ. ಏಕೆಂದರೆ. ಬಹುಶಃ ಬಹಳ ಜನ ನಮ್ಮ ಕಾಂಗ್ರೆಸ್ ಪಕ್ಷದ ಸದಸ್ಯರು ಕೂಡ ಹೇಳತಕ್ಕ ಮಾತು. ಈ ವಿಚಾರದಲ್ಲಿ ನಮ್ಮ ಸರ್ಕಾರ ಬೇರೆ ಯಾವುದೇ ಸರ್ಕಾರಕ್ಕೆ ಹೋಲಿಸಲಿಕ್ಕೆ ಆಗದ ರೀತಿಯಲ್ಲಿ ಗಣನೀಯ ಸಾಧನೆ ಮಾಡಿದೆ ಎಂದು ಹೇಳಿದರೆ ಅದು ಹೆಮ್ಮೆ ಪಡಬೇಕಾದ ವಿಚಾರ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ಅದೇನೆಂದರೆ ಮಲೆನಾಡು ಪ್ರದೇಶಕ್ಕೆ, ಬಯಲು ಸೀಮೆ ಪ್ರದೇಶಕ್ಕೆ ಹಾಕಿಕೊಂಡಿರತಕ್ಕ ನಾರ್ಮ್ಸನ್ನು ಬದಲಾಯಿಸಬೇಕು. ಬೋರ್‌ವೆಲ್‌ನ್ನು ಹಾಕುವಾಗ ಜನಸಂಖ್ಯೆ ಮಿತಿಯನ್ನು ೧೦೦೦ರಿಂದ ೫೦೦ಕ್ಕೆ ಇಳಿಸಬೇಕು. ಏಕೆಂದರೆ ಮಲೆನಾಡು ಪ್ರದೇಶದಲ್ಲಿ ಎಲ್ಲೋ ೫-೧೦ ಗುಡಿಸಲುಗಳನ್ನು ಹಾಕಿಕೊಂಡಿರುತ್ತಾರೆ, ಅಲ್ಲಿ ಕುಡಿಯುವ ನೀರು ಅನಿವಾರ್ಯವಾಗಿರುತ್ತದೆ. ಅಲ್ಲಿ ೧೦೦ ಜನರು ಇಲ್ಲ ಎಂದು ಬೋರ್‌ವೆಲ್ ಕೊಡದೇ ಹೋದರೆ ಆ ಜನ ಎಲ್ಲಿಗೆ ಹೋಗಬೇಕು ? ಆದುದರಿಂದ ಈ ಮಿತಿಯನ್ನು ೫೦ಕ್ಕೆ ಇಳಿಸಬೇಕು. ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆ ಇರಬಹುದು, ಕುಡಿಯುವ ನೀರಿನ ಯೋಜನೆ ಇರಬಹುದು, ಯಾವುದೇ ಇರಬಹುದು. ಇದಕ್ಕೆಲ್ಲಾ ಮಲೆನಾಡು ಪ್ರದೇಶದಲ್ಲಿ ಜನಸಂಖ್ಯಾ ಮಿತಿಯನ್ನು ಕಡಿಮೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಸಂಬಂಧಪಟ್ಟ ಸಚಿವರ ಗಮನಕ್ಕೆ ತರುತ್ತೇನೆ ಮತ್ತು ಒತ್ತಾಯ ಮಾಡುತ್ತೇನೆ. ಮಲೆನಾಡು ಪ್ರದೇಶದಲ್ಲಿ ಬಹಳಷ್ಟು ಕೊಳವೆ ಬಾವಿಗಳು ಯಶಸ್ವಿಯಾಗುತ್ತಿಲ್ಲ. ಅಂತಹ ಪ್ರದೇಶಗಳಲ್ಲಿ, ಕೆಲವು ಕಡೆಗಳಲ್ಲಿ ಯಾವತ್ತೂ ಹರಿಯುತಕ್ಕ ನೀರು ಇದೆ. ಅಂತಹ ಪ್ರದೇಶಗಳಲ್ಲಿ ಬೋರ್‌ವೆಲ್‌ಗೆ ಬದಲಾಗಿ ಆ ನೀರಿಗೆ ಟ್ಯಾಂಕನ್ನು ಕಟ್ಟಿ ನೀರನ್ನು ಸ್ಟೋರ್ ಮಾಡಿ ಪೈಪ್‌ಗಳ ಮೂಲಕ ಕುಡಿಯುವ ನೀರನ್ನು ಕೊಡಿಸತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಸಂಬಂಧಪಟ್ಟ ಸಚಿವರಲ್ಲಿ ಹೇಳಲಿಕ್ಕೆ ಬಯಸುತ್ತೇನೆ,

ನಮ್ಮ ಸರ್ಕಾರ ನಿವೇಶನರಹಿತರಿಗೆ ಸಂಪೂರ್ಣವಾಗಿ ನಿವೇಶನ ಕೊಡತಕ್ಕ ಯೋಜನೆಯನ್ನು ಮಾಡುತ್ತೇವೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ ಇದು ನಿಜವಾಗಿಯೂ ಮೆಚ್ಚತಕ್ಕ ಕಾರ್ಯಕ್ರಮ. ಆದರೆ, ಇವತ್ತು ಈ ವಿಚಾರ ಮಾನ್ಯ ಜೀವಿಜಯರವರಿಗೂ ಗೊತ್ತಿದೆ. ನಿವೇಶನ ಪಡೆಯುತಕ್ಕ ಪ್ರಯೋಜನದಾರರ ಆದಾಯ ಎರಡು ಸಾವಿರ ರೂಪಾಯಿಗಳ ಮಿತಿಗಿಂತ ಹೆಚ್ಚಿರಬಾರದು. ಎರಡು ಸಾವಿರ ರೂಪಾಯಿಗಳ ಮಿತಿಯನ್ನು ೧೦ ವರ್ಷಗಳ ಹಿಂದೆ ಗೊತ್ತು ಮಾಡಿದ್ದುವು. ಇವತ್ತು ಒಬ್ಬ ಕೂಲಿ ಮಾಡುವವರಿಗೂ ೧೦-೧೫ ರೂಪಾಯಿ ಇರುವುದರಿಂದ ಒಂದು ವರ್ಷಕ್ಕೆ ೩-೪

ಸಾವಿರ ರೂಪಾಯಿಗಳ ವಾರ್ಷಿಕ ಆದಾಯ ಬರುತ್ತದೆ. ಎರಡು ಸಾವಿರ ಇಟ್ಟರೆ ಆದಾಯ ಮೀರುವಂಥ ಪರಿಸ್ಥಿತಿ ಇರುವುದರಿಂದ ಯಾರಿಗೂ ನಿವೇಶನ ಪಡೆಯುವುದಕ್ಕೆ ಆಗುವುದಿಲ್ಲ. ನಮ್ಮ ಜಿಲ್ಲಾಧಿಕಾರಿಗಳು ಕೂಡ ಇದೇ ಮಾತನ್ನು ಹೇಳಿದ್ದಾರೆ. ಆದುದರಿಂದ ಈ ಸಂದರ್ಭದಲ್ಲಿ ಮಾನ್ಯ ಕಂದಾಯ ಮಂತ್ರಿಗಳು ಈ ಮಿತಿಯನ್ನು ಹೆಚ್ಚಿಸುವ ಕಡೆ ಕೂಡಲೇ ಗಮನಕೊಡಬೇಕೆಂದು ಹೇಳುತ್ತೇನೆ. ಜನತಾ ಮನೆಗಳ ಬಗ್ಗೆ ಅನೇಕ ಮಾನ್ಯ ಸ್ನೇಹಿತರು ಮಾತನಾಡಿದ್ದಾರೆ. ಬಹಳಷ್ಟು ಪ್ರಮಾಣದಲ್ಲಿ ಜನತಾ ಮನೆಗಳನ್ನು ಸರ್ಕಾರ ಕೊಡುತ್ತಿದೆ. ಆದರೆ, ಜನತಾ ಮನೆಗಳು ವಾಸಕ್ಕೆ ಅಷ್ಟೊಂದು ಯೋಗ್ಯವಾಗಿಲ್ಲ ಎನ್ನುವ ವಿಚಾರ ನನಗೂ ಗೊತ್ತಿದೆ. ನಿಮಗೂ ತಿಳಿದಿರತಕ್ಕ ವಿಚಾರ ವಾಗಿದೆ. ಜನತಾ ಮನೆಗಳಿಗೆ ಕೊಡತಕ್ಕ ಹಣವನ್ನು ದ್ವಿಗುಣಗೊಳಿಸಬೇಕು. ಆಂಧ್ರ ಪ್ರದೇಶದಲ್ಲಿ ಎನ್. ಟಿ. ರಾಮರಾಯರು, ೧೧.೫೦೦ ರೂಪಾಯಿಗಳ ವೆಚ್ಚದಲ್ಲಿ ಜನತಾ ಮನೆಗಳನ್ನು ಕಟ್ಟಿಸಿ ಕೊಡುತಿದ್ದಾರೆ. ಅದು ಕೂಡ ಮುಫತ್ತಾಗಿ ಕಟ್ಟಿಸಿಕೊಡುತ್ತಿದ್ದಾರೆ. ನಮ್ಮಲ್ಲಿ ಸಬ್ಸಿಡ್ ಅಂಡ್ ಲೋನ್ ಸ್ಕೀಮು ಪ್ರಕಾರ ಕಟ್ಟಿಸಿಕೊಟ್ಟು ಹಣವನ್ನು ಮತ್ತೆ ವಾಪಸ್ಸು ಪಡೆಯತಕ್ಕ ವ್ಯವಸ್ಥೆ ಇದೆ. ಈ ರೀತಿ ಮಾಡುವುದರಿಂದ ಯಾವುದೇ ರೀತಿಯ ಆದಾಯ ಇಲ್ಲದೆ ಕೂಲಿ ಮಾಡಿಕೊಂಡು ಜೀವನ ಮಾಡುವವರಿಗೆ ಹೊರೆಯಾಗುವುದರಿಂದ ಆಂಧ್ರ ಪ್ರದೇಶದಲ್ಲಿ ಬಡವರಿಗೆ ಕಟ್ಟಿಸಿಕೊಡುವಂತೆ ಇಲ್ಲಿಯೂ ಕೂಡ ೧೧.೫೦೦ ರೂಪಾಯಿಗಳ ವೆಚ್ಚದಲ್ಲಿ ಬಡವರಿಗೆ ಜನತಾ ಮನೆಗಳನ್ನು ಕಟ್ಟಿಸಿಕೊಟ್ಟು ಅವರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಬೇಕೆಂದು ಹೇಳುತ್ತೇನೆ. ಈ ವಿಷಯ ಮಾನ್ಯ ರಘುಪತಿ ಯವರಿಗೂ ಗೊತ್ತಿದೆಯೆಂದು ನಾನು ಭಾವಿಸುತ್ತೇನೆ. ಹಿಂದೆ ಚೆನ್ನಿಗರಾಮಯ್ಯನವರು ಸಮಾಜ ಕಲ್ಯಾಣ ಮಂತ್ರಿಗಳಾಗಿದ್ದಾಗ ಮೊಟ್ಟಮೊದಲಿಗೆ ಜನತಾ ಮನೆಗಳನ್ನು ಕಟ್ಟಿಸಿಕೊಡುವಂಥ ಯೋಜನೆ ಯನ್ನು ಜಾರಿಗೆ ತಂದರು. ಅದು ಕೂಡ ಪುಕ್ಕಟ್ಟೆಯಾಗಿ ಕಟ್ಟಿಸಿಕೊಡಬೇಕೆನ್ನುವ ಯೋಜನೆ ತಂದರು. ಆದರೆ, ಇತ್ತೀಚೆಗೆ ಬಂದಂಥ ಸರ್ಕಾರಗಳು ಅದನ್ನು ಬದಲಾಯಿಸಿ ಸಬ್ಸೀಡಿ ಅಂಡ್ ಲೋನ್ ಸ್ಕೀಮು ಪ್ರಕಾರ ಮನೆ ಕಟ್ಟಿಸಿಕೊಡುವಂಥ ಯೋಜನೆಮಾಡಿದವು. ಇದಕ್ಕೆ ಬದಲಾಗಿ ಮುಫತ್ತಾಗಿ ಮನೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶಿಕ್ಷಣ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಾನು ಪ್ರಾಥಮಿಕ ಶಿಕ್ಷಣದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ ಪ್ರತಿಯೊಂದು ಹೋಬಳಿಯಲ್ಲಿಯೂ ರೆಸಿಡೆನ್ಸಿಯಲ್ ಸ್ಕೂಲುಗಳನ್ನು ತೆರೆಯಬೇಕೆಂದು ರಾಜ್ಯದಲ್ಲಿರುವ ದಲಿತರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಹಿಂದೆ ಈ ವಿಚಾರದಲ್ಲಿ ಮಾಡುತ್ತೇವೆನ್ನುವ ಭರವಸೆಯನ್ನು ಕೂಡ ಕೊಡಲಾಗಿತ್ತು. ಈ ವಿಷಯ ತಮಗೆಲ್ಲಾ ತಿಳಿದಿರುವಂಥ ವಿಚಾರ. ಪ್ರತಿಯೊಂದು ಹೋಬಳಿ ಮಟ್ಟದಲ್ಲಿಯೂ ಒಂದೊಂದು ರೆಸಿಡೆನ್ಸಿಯಲ್ ಸ್ಕೂಲುಗಳನ್ನು ತೆಗೆದು ಆ ಮೂಲಕ ದಲಿತ ವಿದ್ಯಾರ್ಥಿಗಳಿಗೆ, ದಲಿತ ಜನಾಂಗದ ಸ್ಥಿತಿ ಸುಧಾರಣೆ ಮಾಡಿಕೊಳ್ಳಲು ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಕಡಿಮೆಯಾಗಿದೆ. ಹಿಂದೆ, ಮಾನ್ಯ ಸಭಾಧ್ಯಕ್ಷರು ಮತ್ತು ನಾವುಗಳು ಓದಿದಂಥ ಸಂದರ್ಭದಲ್ಲಿ ೭ನೇ ತರಗತಿಗೆ ಪಬ್ಲಿಕ್ ಪರೀಕ್ಷೆ ಇತ್ತು. ಇಂದು ಅದನ್ನು ತೆಗೆದುಹಾಕಿ, ೯ನೇ ತರಗತಿಯವರೆಗೆ ವಿಧ್ಯಾರ್ಥಿಗಳನ್ನು ಮುಂದುವರಿಸಿ ಕೊಂಡು ಹೋಗುತ್ತಾರೆ, ಎಸ್.ಎಸ್.ಎಲ್.ಸಿ.ಯಲ್ಲಿ ಎಲ್ಲರೂ ಫೇಲಾಗುತ್ತಾರೆ. ಇದನ್ನು ಬದಲಾವಣೆ ಮಾಡಬೇಕು,

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಮಾನ್ಯ ಮಂತ್ರಿಗಳಾದ ಸೋಮಶೇಖರ್‌ರವರು ಈ ಕಡೆ ಗಮನ ಕೊಟ್ಟು ಕೇಳಬೇಕೆಂದು ಕೇಳಿ ಕೊಳ್ಳುತ್ತೇನೆ. ಮೊದಲು ಏಳನೇ ತರಗತಿಯ ವಿದ್ಯಾರ್ಥಿಗಳಿಗೆ ಪಬ್ಲಿಕ್ ಪರೀಕ್ಷೆ ಮಾಡುತ್ತಿದ್ದರು, ಅದೇ ರೀತಿಯಲ್ಲಿ ಈಗಲೂ ಏತಕ್ಕೆ ಮಾಡಬಾರದು ಎಂದು ಹೇಳುತ್ತೇನೆ. ಹಿಂದೆ ರಘುಪತಿಯವರು ಮಂತ್ರಿಗಳಾಗಿದ್ದಾಗ ನಾನು ಇದರ ಬಗ್ಗೆ ಪ್ರಶ್ನೆಯನ್ನು ಕೇಳಿದಾಗ ಅವರು ಉತ್ತರ ಹೇಳಿದ್ದರು. ತಾವು ಈಗ ಏನು ಮಾಡಿದ್ದೀರಿ ಎಂದು ಗೊತ್ತಾಗಲಿಲ್ಲ. ತಾವು ಏಳನೆಯ ತರಗತಿಯವರೆಗೆ ಪಬ್ಲಿಕ್ ಪರೀಕ್ಷೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ತಾವು ಸರ್ಕಾರದಿಂದ ಹೆಚ್ಚು ಹೆಚ್ಚು ಶಾಲೆಗಳನ್ನು ತೆರೆಯುವ ಬದಲು ಬ್ಲಾಕ್ ಬೋರ್ಡ್ ಸ್ಕೀಮು ಆದಷ್ಟು ಬೇಗ ಮಾಡಬೇಕು. ಇರತಕ್ಕ ಶಾಲೆಗಳಿಗೆ ಇನ್ನೂ ಹೆಚ್ಚು ಕಟ್ಟಡಗಳು ಆಗಬೇಕಾದದ್ದು ಇದೆ. ಅವುಗಳನ್ನು ತಾವು ಮಾಡಿಸಬೇಕು. ಶಿಕ್ಷಕರನ್ನು ಸಾಕಷ್ಟು ಸಂಖ್ಯೆಯಲ್ಲಿ ತಾವು ಶಾಲೆಗಳಿಗೆ ನೇಮಕ ಮಾಡದೇ ಹೋದರೆ ಬಹಳ ಕಷ್ಟ

ವಾಗುತ್ತದೆ ಎಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಸಂದರ್ಭದಲ್ಲಿ ಕಾಲೇಜಿನ ಶಿಕ್ಷಣದ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ನಮ್ಮ ಸರ್ಕಾರ ಬಂದಮೇಲೆ ಬಹಳಷ್ಟು ಕಾಲೇಜುಗಳನ್ನು ಕೊಟ್ಟಿದೆ. ಆದರೆ ಬಹುತೇಕ ಕಾಲೇಜುಗಳಿಗೆ ಅವರದೇ ಆದಂಥ ಕಟ್ಟಡಗಳು ಇಲ್ಲ, ಇದರಿಂದ ಬಹಳಷ್ಟು ತೊಂದರೆಗೊಳಗಾಗಿವೆ. ನನ್ನದೇ ತಾಲ್ಲೂಕಿನಲ್ಲಿ ಒಂದು ಪ್ರಥಮ ದರ್ಜೆ ಕಾಲೇಜು ನಮ್ಮ ಸರ್ಕಾರ ಬಂದಮೇಲೆ ತೆರೆದಿದೆ, ಅದಕ್ಕೆ ಅವರದೇ ಆದಂಥ ಒಂದು ಕಟ್ಟಡ ಇಲ್ಲ. ಅದಕ್ಕೆ ಹಣವನ್ನು ಒದಗಿಸಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಆದಷ್ಟು ಬೇಗ ಶಾಲೆಯ ಕಟ್ಟಡ ಆಗುವಂಥ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕುವೆಂಪು ವಿಶ್ವವಿದ್ಯಾನಿಲಯದ ಸ್ಥಾಪನೆಯ ಬಗ್ಗೆ ಹೇಳಬೇಕೆಂದರೆ, ಇಂತಹ ಮಹತ್ವದ ತೀರ್ಮಾನ ತೆಗೆದುಕೊಂಡಂಥ ಸರ್ಕಾರಕ್ಕೆ ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಚಿತ್ರದುರ್ಗದ ಜನತೆಯ ಪರವಾಗಿ ಅಭಿನಂಧನೆಯನ್ನು ಸಲ್ಲಿಸುತ್ತೇನೆ. ಹಿಂದೆ ನಾನು ಒಂದು ಸಾರಿ ಮಾತನಾಡುವಾಗ ಎಜುಕೇಷನ್ ಸಿಸ್ಟಮ್ ಅರ್ಬನ್ ಒರಿಯೆಂಟೆಡ್ ಆಗಿದೆ. eduction should be ruralised.

ಎನ್ನುವ ಮಾತನ್ನು ನಾನು ಒಮ್ಮೆ ಹೇಳಿದ್ದುದು ಜ್ಞಾಪಕ ಇದೆ. ಈ ಶಿಕ್ಷಣ ಗ್ರಾಮಾಂತರ ಪ್ರದೇಶಗಳಲ್ಲಿ ಆಗಬೇಕು. ಉದಾಹರಣೆಗೆ, ಹೇಳಬೇಕೆಂದರೆ ಕೃಷಿ ಕಾಲೇಜನ್ನು ಬೆಂಗಳೂರಿನಲ್ಲಿ ತೆರೆದರೆ ಅದರಿಂದ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಲಾಭವಾಗುತ್ತದೆಯೇ? ಗ್ರಾಮಾಂತರ ಪ್ರದೇಶದ ಬಡ ಮಕ್ಕಳು ಇಲ್ಲಿಗೆ ಬಂದು ಓದಲಿಕ್ಕೆ ಆಗುತ್ತದೆಯೇ? ಇವೊತ್ತು ಪಟ್ಟಣದಲ್ಲಿ ಹೆಚ್ಚಿಗೆ ತೆರೆದಿರತಕ್ಕ ವೃತ್ತಿ ಶಿಕ್ಷಣ ಏನಿದೆ. ಅದನ್ನು ಗ್ರಾಮಾಂತರ ಪ್ರದೇಶದಲ್ಲಿ ತೆರೆಯಬೇಕು. ಮೂಡಗೆರೆಯಲ್ಲಿ ೩೦–೪೦ ಜನ ಪ್ರೊಫೆಸರ್ಸ್ ಇದ್ದಾರೆ, ಸೈಂಟಿಸ್ಟ್ ಇದ್ದಾರೆ, ಅಲ್ಲಿಗೆ ಬೇಕಾದಂಥ ಎಲ್ಲಾ ಫೆಸಿಲಿಟೀಸ್ ಇವೆ. ಅಲ್ಲಿಗೆ ಕೃಷಿ ತೋಟಗಾರಿಕೆ ಕಾಲೇಜು ಕೊಡಬೇಕೆಂದು ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದಲೂ ನಾನು ಹೇಳುತ್ತಿದ್ದೇನೆ, ತಮ್ಮ ಮೂಲಕ ಮತ್ತೊಮ್ಮೆ ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ಮೂಡಿಗೆರೆ ಪ್ರಾದೇಶಿಕ ಸಂಶೋಧನ ಕೇಂದ್ರಕ್ಕೆ ಹೊಂದಿಕೊಂಡಂತೆ ಕೃಷಿ ಅಥವಾ ತೋಟಗಾರಿಕೆ ಕಾಲೇಜು ಕೊಡಬೇಕು. ಇಲ್ಲಿಯೇ ನಮ್ಮ ಕೃಷಿ ಸಚಿವರು ಇರುವುದರಿಂದ ನಾನು ಅವರಲ್ಲಿ ಇದರ ಬಗ್ಗೆ ಮನವಿ ಮಾಡಿಕೊಳ್ಳುತ್ತೇನೆ. ತಾವು ಕೂಡ ಗ್ರಾಮಾಂತರ ಪ್ರದೇಶದಿಂದ ಬಂದಿರುವವರು. ಅವರ ಕಷ್ಟ ಏನಿದೆ ಎನ್ನುವುದು ತಮಗೂ ಗೊತ್ತಿದೆ. ಸಾಮಾನ್ಯ ಬಡ ರೈತನ ಮಗ ಇಲ್ಲಿರತಕ್ಕ ಜಿ.ಕೆ.ವಿ.ಕೆ. ಯಲ್ಲಿ ಆಗಲಿ ಧಾರವಾಡದಲ್ಲಿಯಾಗಲಿ ಬಂದು ಓದಲಿಕ್ಕೆ ಕಷ್ಟವಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ತಾವು ಇಂತಹ ಕಾಲೇಜುಗಳನ್ನು ತೆರೆಯುವುದರ ಮೂಲಕ ಸಾಮಾನ್ಯ ಬಡ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇವನ್ನು ಮಾಡುವುದರಿಂದ ಅರ್ಬನೈಸ್ ಆಗಿರತಕ್ಕ ಶಿಕ್ಷಣವನ್ನು ರೂರಲೈಸೇಷನ್ ಮಾಡಿದಂತಾಗುತ್ತದೆ. ಮೂಡಗೆರೆ ತಾಲ್ಲೂಕಿಗೆ ಕೃಷಿ ಅಥವಾ ತೋಟಗಾರಿಕೆ ಕಾಲೇಜನ್ನು ಕೊಡಬೇಕೆಂದು ನಾನು ಮತ್ತೊಮ್ಮೆ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಹಾಸ್ಟಲುಗಳ ಬಗ್ಗೆ ಹೇಳಬೇಕೆಂದರೆ ಹಾಸ್ಟಲುಗಳ ಸೌಲಭ್ಯದ ಬಗ್ಗೆ ಬಹಳಷ್ಟು ಗೊಂದಲ ಇದೆ, ಒಂದೊಂದು ಕೊಠಡಿಯಲ್ಲಿಯೂ ೨೦-೩೦ ಜನ ವಿದ್ಯಾರ್ಥಿಗಳು ಇರುವುದನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ನೋಡಬಹುದು. ನಾನು ಮೂಡಗೆರೆಯಲ್ಲಿ ಇರತಕ್ಕದು ಹೇಳುವುದಾದರೆ ಅಲ್ಲಿ ಐದಾರು ಹಾಸ್ಟಲುಗಳು ಇವೆ. ಆ ಹಾಸ್ಟಲುಗಳಿಗೆ ಹೆಚ್ಚಿನ ಕಟ್ಟಡಗಳನ್ನು ಕಟ್ಟಿಸಿ. ಹೆಚ್ಚಿನ ಸೌಲಭ್ಯ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತಾ, ಬಹಳಷ್ಟು ಹಾಸ್ಟಲುಗಳು ಏನಿದೆ. ಅವುಗಳಿಗೆ ಸ್ವಂತ ಕಟ್ಟಡಗಳು ಇಲ್ಲ, ಅದನ್ನು ಸಹ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನು ಕೊನೆಯದಾಗಿ ಹೇಳುವುದಾದರೆ, ದಲಿತರಿಗೆ ಆಗಿರತಕ್ಕ ಅನ್ಯಾಯದ ಬಗ್ಗೆ ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ನಮ್ಮ ಸರ್ಕಾರ ಚುನಾವಣೆಯ ಸಂದರ್ಭದಲ್ಲಿ ಹೇಳಿದಂಥ ಎಲ್ಲಾ ಆಶ್ವಾಸನೆಗಳನ್ನೂ ಈಡೇರಿಸಿದೆ. ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಏನೊಂದು ಆಶ್ವಾಸನೆಯನ್ನು ಕೊಟ್ಟಿತ್ತು ಎಂದರೆ ಈ ವರ್ಗದ ಜನರಲ್ಲಿ ಯಾರು ಅತಿ ಹೆಚ್ಚು ಅಂಕಗಳನ್ನುಗಳಿಸಿ ಪದವೀಧರರಾಗಿರುತ್ತಾರೆ ಅಂಥ ವಿದ್ಯಾರ್ಥಿಗಳನ್ನು ಕ್ಲಾಸ್ ಒಂದು ಮತ್ತು ಎರಡನೇ ದರ್ಜೆ ಹುದ್ದೆಗಳಿಗೆ ನೇರವಾಗಿ ನೇಮಕ ಮಾಡುತ್ತೇವೆ ಎಂದು ಇದುವರೆಗೂ ಈ ಬಗ್ಗೆ ನಮ್ಮ ಸರ್ಕಾರ ಕ್ರಮವನ್ನು ತೆಗೆದುಕೊಂಡಿಲ್ಲ. ಬಹಳಷ್ಟು ಸಾರಿ ಪ್ರತಿಪಕ್ಷದ ಸದಸ್ಯರು, ಹಾಗೂ ನಮ್ಮ ಪಕ್ಷದ ಸದಸ್ಯರು ಇದರ ಬಗ್ಗೆ ಕೇಳಿಕೊಂಡಿದ್ದೇವೆ.

ನಾವು ಕೇಳಿದಾಗಲೆಲ್ಲಾ ಇದಕ್ಕೆ ಸ್ಟೇ ಇದೆ, ಆದ್ದರಿಂದ ಇದನ್ನು ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಸ್ವಾಮಿ, ನಾನಾದರೂ ಕೇಳುತ್ತೇನೆ, ಎಷ್ಟೋ ವಿಚಾರಗಳಲ್ಲಿ ಕೋರ್ಟ್‌ನಲ್ಲಿ ಸ್ಟೇ ಇದ್ದರೂ ಕೂಡ ಕೆಲಸವನ್ನು ಮಾಡಿದ್ದೇವೆ. ಇದು ತಮಗೂ ಗೊತ್ತಿದೆ. ಆದರೆ ಈ ವರ್ಗದ ಜನರಿಗೆ ಚುನಾವಣೆ ಸಂದರ್ಭದಲ್ಲಿ ಕೊಟ್ಟಿದ್ದಂಥ ಒಂದೇ ಒಂದು ಆಶ್ವಾಸನೆಯನ್ನು ನಾವು ಇದುವರೆಗೂ ಈಡೇರಿಸುವುದಕ್ಕೆ ಸಾಧ್ಯವಾಗಿಲ್ಲ. ಈಗಲಾದರೂ ಅವರಿಗೆ ಕೊಟ್ಟಿರತಕ್ಕ ಆಶ್ವಾಸನೆಯನ್ನು ತಾವು ಈಡೇರಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ನನ್ನ ಮಟ್ಟಿಗೆ ಹೇಳುವುದಾದರೆ ಇದೇನೂ ಕಷ್ಟದ ಕೆಲಸವಲ್ಲ ತಮ್ಮಿಂದ ಈ ಸ್ಟೇಯನ್ನು ವೆಕೇಟ್ ಮಾಡಿಸುವುದಕ್ಕಾಗುವುದಿಲ್ಲವೆ ? ಇರತಕ್ಕ ಸ್ಟೇಯನ್ನು ವೆಕೇಟ್ ಮಾಡಿಸಿ ಆ ಜನರಿಗೆ ಕೊಟ್ಟಿರತಕ್ಕ ಆಶ್ವಾಸನೆಯನ್ನು ಈಡೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಬಡ್ತಿ ಕೊಡುವಾಗ ರೋಸ್ಟರ್ ಪದ್ಧತಿಯನ್ನು ಕೆಲವರು ಅನುಸರಿಸುತ್ತಿಲ್ಲ ಇದರ ಬಗ್ಗೆ ತಾವು ಗಮನಹರಿಸಬೇಕು. ಈ ಸಂದರ್ಭದಲ್ಲಿ ತಮಗೆ ಒಂದು ಉದಾಹರಣೆಯನ್ನು ಹೇಳುವುದಾದರೆ. ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳ ಹುದ್ದೆಯಿಂದ ಎಕ್ಸಿಕ್ಯೂಟಿವ್ ಇಂಜಿನಿಯರ್ ಹುದ್ದೆಗೆ ಬಡ್ತಿ ಕೊಡುವಾಗ ರೋಸ್ಟರ್ ಪದ್ಧತಿಯನ್ನು ಅನುಸರಿಸಿಲ್ಲ. ಇದು ನಮ್ಮ ಲೋಕೋಪಯೋಗಿ ಇಲಾಖೆಯಲ್ಲಿ ನಡೆದಿರತಕ್ಕ ವಿಚಾರ. ೧೯೮೩ರಲ್ಲಿ ಸುಮಾರು ಜನರಿಗೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಹುದ್ದೆಯಿಂದ ಎಕ್ಸಿಕ್ಯೂಟಿವ್ ಇಂಜಿನಿಯರ್ ಹುದ್ದೆಗೆ ಬಡ್ತಿ ಕೊಟ್ಟರು. ಈ ಕೆಲಸವನ್ನು ಯಾರು ಮಾಡಿದರೋ ಗೊತ್ತಿಲ್ಲ. ಆಗ ೧೫೦ ಜನ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಿಗೆ ಪ್ರಮೋಷನ್ ಕೊಟ್ಟಾಗ ರೋಸ್ಟರ್ ಸಿಸ್ಟಂನ್ನು ಅನುಸರಿಸಿದ್ದರೆ ೨೭ ಜನರಿಗೆ ಸಿಕ್ಕಬೇಕಾಗಿತ್ತು. ಆದರೆ ಸರ್ಕಾರ ಅದನ್ನು ಮಾಡಲಿಲ್ಲ. ಅನಂತರ ೩ ವರ್ಷಕಾಲ ಏನು ರಿಸರ್ವೇಷನ್ ಸಿಸ್ಟಂ ಇತ್ತು ಅದನ್ನು ೫ ವರ್ಷಕ್ಕೆ ಏರಿಸಿದ್ದರಿಂದ ಈ ಜನರಿಗೆ ಸಿಕ್ಕಲಿಲ್ಲ ಎನ್ನತಕ್ಕ ಮಾತನ್ನು ನಾನು ಬಹಳ ದುಃಖದಿಂದ ಹೇಳಬೇಕಾಗಿದೆ ನಂತರ ೧೯೮೫ರಲ್ಲಿ ೯೩ ಜನರಿಗೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಹುದ್ದೆಯಿಂದ ಎಕ್ಸಿಕ್ಯೂಟಿವ್ ಇಂಜಿನಿಯರ್ ಹುದ್ದೆಗೆ ಪ್ರಮೋಷನ್ ಆಯಿತು. ಆಗಲೂ ಕೂಡ ರಿಸರ್ವೇಷನ್ ಕೊಡಲಿಲ್ಲ. ನನಗನ್ನಿಸುತ್ತದೆ ಈ ಎರಡೂ ಸಂದರ್ಭಗಳಲ್ಲಿ ಈ ವರ್ಗದ ಜನರಿಗೆ ಆ ಹುದ್ದೆಗಳು ಸಿಕ್ಕದಂತೆ ಏನೋ ಪಿತೂರಿ ನಡೆದಿದೆ. ಎರಡು ಸಾರಿಯೂ ಕೊಟ್ಟಿರತಕ್ಕ ಪ್ರಮೋಷನ್‌ನಲ್ಲಿ ಹರಿಜನರಿಗೆ ರಿಸರ್ವೇಷನ್‌ನ್ನು ಕೊಟ್ಟಿದ್ದರೆ ಸುಮಾರು ೪೪ ಜನ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾಗುತ್ತಿದ್ದರು. ಈಗ ಸದನದಲ್ಲಿ ಮಾನ್ಯ ಲೋಕೋಪಯೋಗಿ ಮಂತ್ರಿಗಳಿಲ್ಲ. ಅವರು ಇಲ್ಲಿ ಇದ್ದಿದ್ದರೆ ನಾನು ಅವರನ್ನು ಕೇಳುತ್ತಿದ್ದೆ. ಈ ಒಂದು ಅನ್ಯಾಯವನ್ನು ಯಾವ ಅಧಿಕಾರಿ ಮಾಡಿದ್ದಾನೆಂದು ಕೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ನಾನು ಇನ್ನು ಹೆಚ್ಚಿಗೆ ವಿಚಾರಗಳನ್ನು ಹೇಳುವುದಕ್ಕೆ ಬಯಸುವುದಿಲ್ಲ. ಇಲ್ಲಿ ಮಾನ್ಯ ಸಾರಿಗೆ ಸಚಿವರು ಇಲ್ಲ. ಇವತ್ತು ಅವರು ಇಲ್ಲಿಗೆ ಬಂದಿಲ್ಲವೆಂದು ಕಾಣಿಸುತ್ತದೆ. ನಾನು ಈಗ ಹೇಳತಕ್ಕ ವಿಚಾರ ಮಾನ್ಯ ಅಧ್ಯಕ್ಷರಿಗೂ ಕೂಡಾ ಗೊತ್ತಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಹರಿಜನರ ಹೆಸರಿನಲ್ಲಿ ಕೆಲಸಗಳನ್ನು ತೆಗೆದುಕೊಳ್ಳುವಾಗ ಸುಳ್ಳು ಜಾತಿಯ ಪತ್ರಗಳನ್ನು ಒದಗಿಸಿದ್ದಾರೆ. ಅಂಥ ಕೆಲವು ಪ್ರಕರಣಗಳು ಬೆಳಕಿಗೆ ಬಂದಿವೆ.

ಮಾನ್ಯ ಅಧ್ಯಕ್ಷರೆ, ಇಲ್ಲಿ ಒಂದು ಉದಾಹರಣೆಯನ್ನು ಹೇಳುವುದಾದರೆ ''ವಿಜಯ ವಿಕ್ರ' ಎನ್ನುವವನು ''ಬೇಡ'' ಜಾತಿಗೆ ಸೇರಿದವರು. ಆದರೆ ನಾನು ಎಸ್.ಟಿ. ಗುಂಪಿಗೆ ಸೇರಿದವನೆಂದು ಜಾತಿಯ ಸುಳ್ಳು ಸರ್ಟಿಫಿಕೇಟ್‌ನ್ನು ತಂದುಕೊಟ್ಟು ೧೯೮೩ರಲ್ಲಿ ಆರ್.ಟಿ.ಒ. ಆಗಿ ಸೆಲೆಕ್ಟ್ ಆದರು. ಅವರು ಸುಳ್ಳು ಹೇಳಿ ಕೆಲಸವನ್ನು ತೆಗೆದುಕೊಂಡಿದ್ದಾರೆಂದು ಇಲ್ಲಿ ನಾನು ಆರೋಪ ಮಾಡಿದಾಗ ಇಲಾಖೆಯವರು ಅದನ್ನು ತನಿಖೆ ಮಾಡಿದಾಗ ''ಹೌದು'' ಈ ವ್ಯಕ್ತಿ ಎಸ್.ಟಿ. ಗುಂಪಿಗೆ ಬರುವುದಿಲ್ಲ ಎಂದು ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರು ಹೇಳಿದ್ದಾರೆ, ಮತ್ತು ಇವನು ''ಬೇಡ ನಾಯಕ'' ಎಂಬ ಗುಂಪಿನಲ್ಲಿ ಬರುತ್ತಾನೆಂದು ಹೇಳಿದ್ದರು. ನಂತರ ಹರಿಜನಗಿರಿಜನ ಸೆಲ್ ಏನಿದೆ ಅದೂ ಕೂಡ ಇದೇ ವಿಚಾರವನ್ನು ಹೇಳಿದೆ. ಆಗ ಇವರು ಏನು ಮಾಡಿದರು ಎಂದರೆ ಆ ಮನುಷ್ಯನನ್ನು ಸಸ್ಪೆಂಡ್ ಮಾಡಿ ನಂತರ ವಿಚಾರಣೆಗೆ ಒಳಪಡಿಸಿ ಮತ್ತೆ ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಆದ್ದರಿಂದ ನಾನು ಸರ್ಕಾರದವರನ್ನು ಕೇಳುವುದಾದರೂ ಇಷ್ಟೆ. ನಮ್ಮ ಸರ್ಕಾರ ಈರೀತಿ ಒಬ್ಬ ವ್ಯಕ್ತಿ ಮೋಸ ಮಾಡಿದ್ದಾನೆಂದು ಗೊತ್ತಿದ್ದರೂ ಕೂಡ ಪುನಃ ಅದೇ ವ್ಯಕ್ತಿಯನ್ನು ಕೆಲಸಕ್ಕೆ ತೆಗೆದುಕೊಂಡಿರುವುದರ ಬಗ್ಗೆ

ನನ್ನ ದುಃಖವನ್ನು ವ್ಯಕ್ತಪಡಿಸಿ ಮಾನ್ಯ ಸಚಿವರಾದ ಸಿಂಧ್ಯರವರು ಇದಕ್ಕೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ ನಾನು ಈ ಸಂದರ್ಭದಲ್ಲಿ ಮಾನ್ಯ ಅರಣ್ಯ ಇಲಾಖೆಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೆನೆಂದರೆ ನಮ್ಮ ಮಲೆನಾಡು ಪ್ರದೇಶದಲ್ಲಿ ಇತ್ತೀಚೆಗೆ ಹಾನೆಗಳ ಅವಳಿ ಜಾಸ್ತಿಯಾಗಿದೆ. ರೈತರು ಬೆಳೆದಂಥ ಬೆಳೆಯನ್ನು ಆನೆಗಳು ತಿಂದು ನಾಶಮಾಡಿರತಕ್ಕ ಪರಿಸ್ಥಿತಿ ಮಾನ್ಯ ಸಚಿವರಿಗೂ ಗೊತ್ತಿರುತ್ತದೆ. ಈ ವರ್ಷ ನೂರಾರು ಅರ್ಜಿಗಳು ಬಂದಿರುತ್ತವೆ, ಅದೇ ರೀತಿಯಲ್ಲಿ ಆನೆಗಳ ಹಾವಳಿಯಿಂದ ಬೇಲೂರು, ಹಾಲೂರು, ಸಕಲೇಶಪುರದಲ್ಲಿ, ಇಂಥ ಘಟನೆಗಳು ನಡೆದಬಗ್ಗೆ ಆನೆಗಳನ್ನು ಹಿಡಿದು ನಾಗರಹೊಳೆ ಅರಣ್ಯದಲ್ಲಿ ಬಿಟ್ಟರು, ಆದರೆ ನಮ್ಮ ಮೂಡಿಗೆರೆಯಲ್ಲಿ ಇತ್ತೀಚೆಗೆ ಆನೆಗಳ ಹಾವಳಿ ನಡೆಯುತ್ತಿದ್ದು, ಅವುಗಳನ್ನು ಹಿಡಿದು ಆಗುತ್ತಿರುವ ತೊಂದರೆ, ಹಿಂಸೆಯಿಂದ ಪಾರು ಮಾಡಲಿಕ್ಕೆ ಅರಣ್ಯ ಇಲಾಖೆಯವರು ಪ್ರಯತ್ನ ಮಾಡಲಿಲ್ಲವೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಅರಣ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಸನ್ಮಾನ್ಯ ಸಚಿವರು ಈಗಲಾದರೂ ಆನೆಗಳನ್ನು ಹಿಡಿಸಿ ನಾಗರಹೊಳೆಯಲ್ಲಿ ಬಿಡಬೇಕೆಂದು ತನ್ಮೂಲಕ ಅಲ್ಲಿಯ ರೈತರಿಗೆ ಆಗುತ್ತಿರುವ ಹಿಂಸೆ ಭಯವನ್ನು ತಪ್ಪಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ,

ಇನ್ನು ಹೆಚ್ಚಿನ ವಿಚಾರಗಳನ್ನು ಪ್ರಸ್ತಾಪ ಮಾಡದೆ, ಸನ್ಮಾನ್ಯ ಅಧ್ಯಕ್ಷರೇ ಮೊನ್ನೆ ನಡೆದಂಥ ವಿಚಾರ ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರವಾಗಿದೆ. ಬೆಂಡಿಗೇರಿ ಪ್ರಕರಣದ ಬಗ್ಗೆ ಈಗಾಗಲೇ ಸರ್ಕಾರ ಕ್ರಮ ತೆಗೆದುಕೊಂಡಿರುತ್ತದೆ. ಅದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ. ಮೊನ್ನೆ ತುಮಕೂರು ಮತ್ತು ತಿಪಟೂರು ಭಾಗದಲ್ಲೂ ಶ್ರೀರಾಮ ಜನ್ಮಭೂಮಿಯ ಬಗ್ಗೆ ಬಂದನ್ನು ಆಚರಿಸಿದರು. ಆದರೆ ನಮ್ಮ ರಾಮಜನ್ಮಭೂಮಿಯಲ್ಲಿ ದಲಿತರ ವಿಚಾರ ಬಂದಾಗ ಯಾವ ಗೊಂದಲವನ್ನೂ ಮಾಡಲಿಲ್ಲ. ದೇವರ ವಿಚಾರಬಂದಾಗ ನಮ್ಮ ಜನ ಕಾಳಜಿಯನ್ನು ವಹಿಸತಕ್ಕಂಥವರು, ನಾನು ಯಾವುದೇ ವರ್ಗದವರ ಬಗ್ಗೆಯೂ ಆರೋಪ ಮಾಡುತ್ತಿಲ್ಲ. ಮನುಷ್ಯ ಮನುಷ್ಯ ಮಾನವೀಯತೆಯನ್ನು ತಿಳಿದುಕೊಳ್ಳದೆ ಇಂಥ ಒಂದು ಪ್ರಕರಣ ನಡೆದುದು ಬಹಳ ದುಃಖ ತರುವಂಥದ್ದಾಗಿದೆ. ಇಂಥ ಪರಿಸ್ಥಿತಿ ಮತ್ತೆ ಮರುಕಳಿಸದೆ ಇರಲಿ, ರಾಜ್ಯದಲ್ಲಿ ಹಿಂದೆ ಎಂದೂ ಇಂಥ ಘಟನೆ ನಡೆದಿರಲಿಲ್ಲ ಇತಿಹಾಸದ ಪುಟಗಳಲ್ಲಿ ಹೋಗತಕ್ಕಂಥ ಕೆಟ್ಟ ಘಟನೆಗಳು ಆಗಬಾರದೆಂದು, ಈ ದಿಸೆಯಲ್ಲಿ ಸರ್ಕಾರದವರು ಬಹಳ ಶ್ಲಾಘನೀಯವಾದ ಕೆಲಸವನ್ನು ಮಾಡಿದೆ. ದೀನದಲಿತರಿಗೆ ಹೆಚ್ಚಿನ ರಕ್ಷಣೆ ಸಿಕ್ಕಬೇಕು ಯಾವುದೇ ಜನಾಂಗಕ್ಕೆ ಹಿಂಸೆ ಶೋಷಣೆ ಇರಬಾರದೆಂದು ಹೇಳುತ್ತಾ ರಾಜ್ಯಪಾಲರು ಈ ದಿಸೆಯಲ್ಲಿ ಏನು ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆಂದು ತಿಳಿಸಿದ್ದಾರೆ ಅದನ್ನು ಸ್ವಾಗತಿಸಿ ನನಗೆ ತಾವು ಇಷ್ಟು ಪ್ರಸ್ತಾಪ ಮಾಡಲು ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† **ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).**—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ರಾಜ್ಯಪಾಲರು ಮಾಡಿದಂಥ ಭಾಷಣವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಜನತಾ ಸರ್ಕಾರವು ಅಧಿಕಾರಕ್ಕೆ ಬಂದಮೇಲೆ ರೈತರಿಗೆ ರಿಯಾಯಿತಿ, ಹಳ್ಳಿಗಳಲ್ಲಿ ಕುಡಿಯಲು ಕೊಳವೆಬಾವಿಗಳನ್ನು ತೋಡಿಸಿರುವುದು, ಶಾಲಾ ಮಕ್ಕಳಿಗೆ ಉಚಿತವಾಗಿ ಪುಸ್ತಕಗಳನ್ನು ಹಂಚಿರುವುದು ಇನ್ನೂ ಅನೇಕ ಅತ್ಯಂತ ಉನ್ನತವಾದ ಸಾಧನೆಗಳನ್ನು ಮಾಡಿದೆ- ಅದರ ಜೊತೆಗೆ ಇನ್ನೂ ಅನೇಕ ಸಾಧನೆಗಳನ್ನು ಮಾಡಬೇಕಾದ್ದು ಇದ್ದು ಅದನ್ನು ನಾನು ಹೇಳಬೇಕಾಗಿದೆ. ಅದೇನೆಂದರೆ ಕಳೆದ ಐದು ವರ್ಷಗಳ ಸಾಧನೆಯಲ್ಲಿ ರಾಜ್ಯಪಾಲರ ಭಾಷಣದಲ್ಲಿ ಶಿಶುಕಲ್ಯಾಣ, ಪಶು ಕಲ್ಯಾಣ ಮತ್ತು ಜನ ಕಲ್ಯಾಣದ ಬಗ್ಗೆ ಮಾಡಿರುವ ಸಾಧನೆಯ ಬಗ್ಗೆ ಯಾವ ಒಂದು ಅಂಕಿ ಅಂಶಗಳನ್ನು ಕೊಟ್ಟಿಲ್ಲ. ಅಂದರೆ ಈಗೀ ಎರಡು ವರ್ಷಗಳ ಕಾಲ ಒಂದು ಆಸ್ಪತ್ರೆ ಕಟ್ಟಡ ಮಂಜೂರಾತಿ ಆಗಿಲ್ಲ, ಅದೇ ರೀತಿ ಅಂಗನವಾಡಿ ಶಿಶುವಿಹಾರಗಳು ಆಗಿಲ್ಲ, ಪಶು ವೈದ್ಯ ಶಾಲೆಗಳನ್ನು ಇನ್ನು ನೂರಾದರೂ ತೆರೆಯುತ್ತಾರೋ ಇಲ್ಲವೋ ಎಂಬ ಪರಿಸ್ಥಿತಿಯಲ್ಲಿದ್ದೇವೆ. ಈ ರೀತಿಯ ವಿಷಮ ಪರಿಸ್ಥಿತಿಯಲ್ಲಿ ಒಂದು ರೀತಿ ಕೊಡುವ ದಾರಿ ಇದೆಯೆ ಹೊರತು ಅಭಿವೃದ್ಧಿ ಕಾರ್ಯದ ಕಡೆಗೆ ಗಮನ ಹರಿಸಿಲ್ಲ ಎಂಬುದನ್ನು ತೋರಿಸುತ್ತದೆ. ಸುಮಾರು ೧೨ ಪುಟಗಳ ರಾಜ್ಯಪಾಲರ ಭಾಷಣವನ್ನು ನೋಡಿದರೆ ನಮ್ಮ ಪೂರ್ಣ ಹಣವೆಲ್ಲ ಕೊಡುವುದರಲ್ಲೇ ಹೋಗುತ್ತಿದೆಯೇ ಹೊರತು ಅಭಿವೃದ್ಧಿ ಕಾರ್ಯ ಮಾತ್ರ ಆಗಿಲ್ಲ. ರೈತರ ಅಭಿವೃದ್ಧಿ ಕಾರ್ಯಗಳಿಗೆ ೧೫ ಪರ್ಸೆಂಟ್ ಹಣ ಹೋಗುತ್ತದೆ, ನೌಕರ ವರ್ಗಕ್ಕೆ ೬೦ ಪರ್ಸೆಂಟ್ ಹೋಗುತ್ತದೆ, ಉಳಿದದ್ದು ಇತರೆ ಬಾಬಿಗೆ ಹೋಗುತ್ತದೆ. ಈ ರೀತಿ ವ್ಯವಸ್ಥೆ ರಾಜ್ಯಪಾಲರ ಭಾಷಣದಲ್ಲಿರುವಾಗ, ಹೀಗೆಯೇ ಎಲ್ಲವನ್ನು

ಕೊಟ್ಟುಕೊಂಡು ಹೋದರೆ ಯಾವ ಮಟ್ಟಕ್ಕೆ ಹೋಗುತ್ತದೆಂದರೆ ಇನ್ನು ಹತ್ತು ವರ್ಷಗಳಲ್ಲಿ ಏನೂ ಉಳಿಯುವುದಿಲ್ಲ. ಅಂಗಿ ಬಿಚ್ಚಿ ಕೊಡುವ ಪರಿಸ್ಥಿತಿಗೆ ಬರುತ್ತದೆ. ಆ ದೃಷ್ಟಿಯಿಂದ ಇವತ್ತು ಇನ್ನೂ ಕಾಲ ಮಿಂಚಿಲ್ಲ. ಕಾಲಾವಕಾಶ ಇದೆ. ನಾವು ಮುಂದುವರಿಯಲು ಏನು ಮಾಡಬೇಕೆಂದರೆ ನಮ್ಮ ಸಂಪನ್ಮೂಲಗಳನ್ನು ರೂಢೀಕರಿಸುವ ದಾರಿಯನ್ನು ಯೋಚಿಸಬೇಕಾಗಿದೆ. ಪುಸ್ತಕ, ಬಟ್ಟೆ, ಸೀರೆ, ಲಂಗ, ರವಿಕೆ, ಮನೆ, ನಿವೇಶನ, ಕುಡಿಯುವ ನೀರನ್ನು ಕೊಟ್ಟು ಜನಸಾಮಾನ್ಯರ ಹಿತರಕ್ಷಣೆ ಮಾಡಬೇಕೆಂಬುದನ್ನು ಒಪ್ಪುತ್ತೇನೆ. ಅದರ ಜೊತೆಯಲ್ಲಿ ಅಭಿವೃದ್ಧಿಶೀಲ ಕಾರ್ಯವನ್ನು ಮಾಡದಿದ್ದರೆ, ಎಲ್ಲವನ್ನೂ ಕೊಡುತ್ತಲೇ ಹೋದರೆ ತೆಗೆದುಕೊಳ್ಳುವುದು ಯಾವಾಗ ಎಂಬ ಪರಿಸ್ಥಿತಿ ಬರುತ್ತದೆ. ಮಾನ್ಯ ರಾಜ್ಯಪಾಲರ ಭಾಷಣದ ರಡನೇ ಪುಟದಲ್ಲಿ ಈ ರೀತಿ ಹೇಳಿದ್ದಾರೆ.

ಎ) ಎಲ್ಲಾ ಗ್ರಾಮಗಳ ವಿದ್ಯುದೀಕರಣ

ಬಿ) ಎಲ್ಲಾ ಹರಿಜನ ಕಾಲೋನಿಗಳ ವಿದ್ಯುದೀಕರಣ

ಸಿ) ನಿವೇಶನ ರಹಿತರೆಲ್ಲರಿಗೂ ನಿವೇಶನ ಹಂಚಿಕೆ

ಡಿ) ಭಾಗ್ಯಜ್ಯೋತಿ ಯೋಜನೆಯ ಸೌಲಭ್ಯವು ಪೂರ್ಣವಾಗಿ ದೊರೆಯುವಂತೆ ಮಾಡುವುದು.

ಅದೇ ರೀತಿ ೧೧ನೇ ಪುಟದಲ್ಲಿ ಬೆಂಗಳೂರಿನಲ್ಲಿ ೧೨೦ ಮೆಗಾವಾಟ್ ಶಕ್ತಿಯ ಡೀಸಲ್ ಜನರೇಟರನ್ನು ಸ್ಥಾಪಿಸುವುದಕ್ಕಾಗಿ ನನ್ನ ಸರ್ಕಾರವು ಸಲ್ಲಿಸಿದ ಪ್ರಸ್ತಾವಕ್ಕೆ ಭಾರತ ಸರ್ಕಾರವು ಅನುಮೋದನೆ ನೀಡಿದೆ ಎಂದು ಹೇಳಿದ್ದಾರೆ. ಅದಕ್ಕೂ ಹಣವನ್ನು ರೂಢೀಕರಿಸಿಲ್ಲ. ಒಂದು ಕಡೆ ಕೊಡುತ್ತೇವೆಂದು. ಇನ್ನೊಂದು ಕಡೆ ಹಣ ಇಲ್ಲವೆಂದು ಹೇಳುತ್ತಾರೆ. ಇವುಗಳ ಜೋಡಣೆ ಇಲ್ಲದಿದ್ದರೆ ಅಪಹಾಸ್ಯಕ್ಕೆ ನಾವು ಈಡಾಗಬೇಕಾಗುತ್ತದೆ, ಬರಗಾಲದ ಪರಿಸ್ಥಿತಿಯ ಬಗ್ಗೆ ೩ನೇ ಪುಟದಲ್ಲಿ ಹೇಳಿದ್ದಾರೆ. ಕೇಂದ್ರ ಸರ್ಕಾರ ನಮಗೆ ಈ ಬಾಬಿಗಾಗಿ ೪೬ ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಕೇಂದ್ರ ಸರ್ಕಾರದಿಂದ ಹಣ ತೆಗೆದುಕೊಳ್ಳುವುದಕ್ಕೆ ಹಿಂದೆ ಬಿದ್ದಿದ್ದೇವೆ. ಕೇಂದ್ರ ಸರ್ಕಾರದವರು ಏನು ಹೇಳುತ್ತಾರೆಂದರೆ ಈ ನೆರವನ್ನು ಅನುದಾನದ ರೂಪದಲ್ಲಿ ಕೊಡಬೇಕು ಇಲ್ಲವಾದರೆ ಬರಗಾಲ ಪರಿಸ್ಥಿತಿಯಲ್ಲಿ ಪ್ರವಾಹ ಪೀಡಿತರಿಗೆ ಕೊಡಬೇಕಾಗುತ್ತದೆ ಅನ್ನುತ್ತಾರೆ. ಕೇಂದ್ರದ ಈ ಮಲತಾಯಿ ಧೋರಣೆಯನ್ನು ಖಂಡಿಸುವುದರಲ್ಲಿ ಇವರು ಏತಕ್ಕೆ ಹಿಂದೆಗೆದಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ರಾಜ್ಯಸರ್ಕಾರಕ್ಕಾಗಲಿ ಅಥವಾ ಮುಖ್ಯಮಂತ್ರಿಗಳಿಗಾಗಲಿ ತಮಿಳ್ನಾಡಿನ ಸರ್ಕಾರದ ಹಾಗೆ ನಮ್ಮ ರಾಜ್ಯವನ್ನು ಎಲ್ಲಿ ರಾಜ್ಯಪಾಲರ ಆಳ್ವಿಕೆಗೆ ಗುರಿ ಮಾಡುತ್ತಾರೆಂದು ಹೆದರಿಕೆ ಉಂಟಾಗಿದೆಯೆ ? ಈ ರೀತಿ ಕೇಂದ್ರ ಸರ್ಕಾರಕ್ಕೆ ಹೆದರಿ ಬರತಕ್ಕ ಸವಲತ್ತನ್ನು ಕೇಳುವುದರಲ್ಲಿ ಹಿಂಜರಿದಿದ್ದಾರೆಂಬ ಪರಿಸ್ಥಿತಿ ಕಾಣುತ್ತಿದೆ. ಬರಗಾಲಕ್ಕೆ ಕೇಂದ್ರದಿಂದ ಹಣ ಬರುತ್ತಿಲ್ಲ.ಬರತಕ್ಕ ಸಮಪಾಲು ಬರುತ್ತಿಲ್ಲ. ಕಳೆದ ಎರಡು ವರ್ಷಗಳಲ್ಲಿ ನಿಜವಾಗಿ ಹೆಗಡೆಯವರನ್ನು ನಾವು ಶ್ಲಾಘಿಸುತ್ತಿದ್ದೆವು. ಕೇಂದ್ರ ಸರ್ಕಾರ ಕಾಲು ಕೆರೆದು ನಿಂತಿದ್ದರೂ ಅವರೊಡನೆ ಜಗಳ ಮಾಡಿ ನಮಗೆ ಬರಬೇಕಾದ ಪಾಲನ್ನು ಪಡೆಯುತ್ತಿದ್ದುದನ್ನು ನೋಡಿ ನಿಮ್ಮ ಬೆನ್ನು ತಟ್ಟಿ ನಾವು ನಿಮ್ಮ ಕಡೆ ಇದ್ದೆವು ಆದರೆ ಈಗ ಕೇಂದ್ರ ಸರ್ಕಾರವನ್ನು ಹೊಗಳುವುದಕ್ಕೂ ಹೋಗಿಲ್ಲ, ತೆಗಳುವುದಕ್ಕೂ ಹೋಗಿಲ್ಲ. ಹೀಗಾಗಿ ಕನ್ನಡಿಗರನ್ನು ತುಳಿಯುವ ಪ್ರವೃತ್ತಿ ಅವರಲ್ಲಿ ಉಂಟಾಗುತ್ತಿದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನೆಲದ ಬಗ್ಗೆ, ಜಲದ ಬಗ್ಗೆ, ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವುದರ ಬಗ್ಗೆ ಏನೂ ಹೇಳಿಲ್ಲ. ಇವತ್ತಿನ ದಿವಸ ನಾವು ನೆಲ, ಜಲ, ನಾವು ಇರುವ ಪ್ರದೇಶವನ್ನೂ ಬಿಡುತ್ತಿದ್ದೇವೆ. ಇನ್ನೂ ಎರಡು ವರ್ಷ ಕಳೆದರೆ ಏನಾಗುತ್ತದೆಯೋ ಏನೋ ಗೊತ್ತಿಲ್ಲ, ಎರಡು ವರ್ಷ ಕಳೆದರೆ ಇನ್ನೊಂದು ಸರ್ಕಾರ ಬರುತ್ತದೆ. ಅಂದಾಗ ಈ ಸಂದರ್ಭದಲ್ಲಿ ಇದ್ದಷ್ಟು ದಿವಸ ದುಡಿ ಅಥವಾ ಮಡಿ ಎಂಬ ರೀತಿಯಲ್ಲಿ ಕೇಂದ್ರ ಸರ್ಕಾರವನ್ನು ಎಚ್ಚರ ಮಾಡದಿದ್ದರೆ ನಾವು ಇಡೀ ಕರ್ನಾಟಕಕ್ಕೆ, ಕನ್ನಡಿಗರಿಗೆ ದ್ರೋಹ ಬಗೆದಂತಾಗುತ್ತದೆ. ಎರಡು ದಿವಸ ಇರಲಿ ಅಥವಾ ಒಂದು ದಿವಸ ಇರಲಿ, ಆ ಪ್ರಶ್ನೆ ಮುಖ್ಯವಲ್ಲ. ಇರುವಷ್ಟು ಕಾಲ ಚನ್ನಾಗಿ ಕೆಲಸ ಮಾಡಬೇಕು. ಕೇಂದ್ರ ಸರ್ಕಾರದವರು ಅಥವಾ ಕಾಂಗ್ರೆಸ್ ಸರ್ಕಾರದವರು ಇಡೀ ನಮ್ಮ ರಾಜ್ಯಕ್ಕೆ ಮತ್ತು ಕಾಂಗ್ರೆಸ್ಸೇತರ ಸರ್ಕಾರಗಳಿಗೆ ಹೆಚ್ಚಿಗೆ ಸವಲತ್ತುಗಳನ್ನು ಕೊಡುತ್ತಿಲ್ಲ.

೫-೦೦ ಪಿ. ಎಂ.

ಅವರು ಮೊದಲಿನಿಂದಲೂ ನಮಗೆ ಮೋಸ ಮಾಡುತ್ತಾ ಬಂದರು, ಇಂದಿರಾಗಾಂಧಿಯವರು ಚರಣಸಿಂಗರಿಗೆ ಮೋಸ ಮಾಡಿದರು. ತಮಿಳುನಾಡಿನಲ್ಲಿ ಶ್ರೀಮತಿ ಜಾನಕಿ ರಾಮಚಂದ್ರನ್ ಅವರಿಗೆ ಮೋಸ ಮಾಡಿದರು. ಕಾಂಗ್ರೆಸ್ಸಿನವರ ಕೃಪಾಕಟಾಕ್ಷದಲ್ಲಿ ನಾವೇನೂ ಇಲ್ಲಿ ರಾಜ್ಯಭಾರ ಮಾಡುತ್ತಿಲ್ಲ. ಹೀಗಿರುವಾಗ ಈ ವಿಷಯವನ್ನು ಏತಕ್ಕೆ ಕೈಬಿಟ್ಟಿದ್ದಾರೋ ಗೊತ್ತಿಲ್ಲ. ಗಂಗಾ ಮತ್ತು ಕೃಷ್ಣ ಅಥವಾ ಎಲ್ಲಾ ನೀರಿನ ಬಳಕೆ ವಿಚಾರ ಮತ್ತು ಮಹಾಜನ್ ವರದಿ ವಿಚಾರದಲ್ಲಿ ಚರ್ಚೆ ಮಾಡಬೇಕಾಗಿದೆ. ಮಹಾಜನ್ ವರದಿ ಬಗ್ಗೆ ಪ್ರತಿಸಾರಿಯೂ ನಾವು ಹೇಳುತ್ತಿದ್ದೇವೆ. ಆಂಧ್ರಕ್ಕೆ ಅಥವಾ ತಮಿಳುನಾಡಿಗೆ ಹೆದರಿಕೊಂಡು ನೀರಿನ ಯೋಜನೆ ಕೈಬಿಟ್ಟಿದ್ದಾರೆ. ಕೇಂದ್ರ ಸರ್ಕಾರಕ್ಕೆ ಹೆದರಿಕೊಂಡು ಅಥವಾ ಇಲ್ಲಿ ರಾಷ್ಟ್ರಪತಿ ಆಡಳಿತ ಎಲ್ಲಿ ತರುತ್ತಾರೋ ಎಂದು ಹೆದರಿಕೊಂಡು ಆ ವಿಚಾರವನ್ನು ಬಿಡಬಾರದು. ನಮ್ಮ ನೆಲ ಮತ್ತು ನೀರನ್ನು ಉಳಿಸಿಕೊಳ್ಳುವುದಕ್ಕೆ ಏನಾದರೂ ಠರಾವು ಸದನದಲ್ಲಿ ಮಾಡದೇ ಹೋದರೆ, ಅಂತಿಮ ಎಚ್ಚರಿಕೆಯನ್ನು ಕೊಡದೇ ಹೋದರೆ ಕನ್ನಡಿಗರಿಗೆ ಮೋಸ ಮಾಡಿದಂತಾಗುತ್ತದೆ ಎಂದು ಹೇಳುತ್ತೇನೆ. ಹೋದ ವರ್ಷ ೮೭೦ ಕೋಟಿ ರೂಪಾಯಿಗಳ ಅಭಿವೃದ್ಧಿ ಕಾರ್ಯವನ್ನು ಆಯವ್ಯಯದಲ್ಲಿ ಸೇರಿಸಿತ್ತು. ಆದರೆ ಅದರಲ್ಲಿ ೬೦೦ ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದೆ. ೬೦೦ ಕೋಟಿ ರೂಪಾಯಿಗಳಲ್ಲಿ ನಮಗೆ ಎಷ್ಟು ಖರ್ಚಾಗಿದೆ, ಲೇಖನಿಯಲ್ಲಿ ಬರೆಯುವವರಿಗೆ ಎಷ್ಟು ಖರ್ಚಾಗಿದೆ ಮತ್ತು ಉಳುವವರಿಗೆ ಎಷ್ಟು ಖರ್ಚಾಗಿದೆ ಎಂದರೆ ಕೇವಲ ೧೦೦ ಕೋಟಿ ರೂಪಾಯಿಗಳು ಮಾತ್ರ ನೇಗಿಲಿನವರಿಗೆ ಖರ್ಚಾಗಿದೆ. ಲೇಖನಿಯವರಿಗೆ ಹೆಚ್ಚು ಖರ್ಚಾಗಿದೆ. ಲೇಖನಿ ವ್ಯವಸ್ಥೆಗೆ ಖರ್ಚು ಮಾಡುವುದನ್ನು ಕಡಿಮೆ ಮಾಡಬೇಕು. ಜಿಲ್ಲಾ ಪರಿಷತ್ ವ್ಯವಸ್ಥೆ, ಇನ್ನೊಂದು ವ್ಯವಸ್ಥೆ, ನಾಡ ಕಚೇರಿ ವ್ಯವಸ್ಥೆ ಯಾವುದೇ ಆಗಲಿ ೪೦ ವರ್ಷಗಳಲ್ಲಿ ಲೇಖನಿ ವ್ಯವಸ್ಥೆಗೆ ರಾಜ್ಯ ಸರ್ಕಾರ ಆಗಲೀ ಕೇಂದ್ರ ಸರ್ಕಾರ ಆಗಲೀ ಹೆಚ್ಚು ಖರ್ಚು ಮಾಡಿ ಅಭಿವೃದ್ಧಿಗೊಳಿಸುತ್ತಿದೆಯೋ ಹೊರತು ನೇಗಿಲಿಗಾಗಿ ಕೆಲಸ ಮಾಡುತ್ತಿಲ್ಲ. ನೇಗಿಲಿಗೆ ಯಾವಾಗ ಪ್ರಾಶಸ್ತ್ಯ ಕೊಡುವುದಿಲ್ಲ ಆಗ ನಿಜವಾಗಿ ಬಹಳ ಕ್ಲಿಷ್ಟ ಪರಿಸ್ಥಿತಿ ನಮಗೆ ಬರುತ್ತದೆ. ಇದಕ್ಕೆ ೧೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದರೆ ಎಷ್ಟು ಶೋಚನೀಯ ಪರಿಸ್ಥಿತಿ ಎಂದು ಹೇಳಬೇಕಾಗುತ್ತದೆ. ಐ.ಎ.ಎಸ್, ಅಧಿಕಾರಿಗಳ ಬಗ್ಗೆ ಒಂದು ಮಾತನ್ನು ಹೇಳಬೇಕು. ಹಿಂದೆ ಒಂದು ಸಾರಿ ಚಳುವಳಿ ಮಾಡಿದ್ದೆವು. ಅದೇನೆಂದರೆ ಕ್ವಿಟ್ ಇಂಡಿಯಾ ಚಳುವಳಿ.

ಶ್ರೀ ಎಂ. ರಘುಪತಿ.—ಇವರಿನ್ನೂ ಆಗ ಹುಟ್ಟೇ ಇರಲಿಲ್ಲ. ತಾಯಿ ಹೊಟ್ಟೆಯಲ್ಲಿ ಇದ್ದಾಗಲೇ ಚಳುವಳಿ ಮಾಡಿದಂತೆ ಕಾಣುತ್ತದೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ನಾವು ಅಂದರೆ ನಮ್ಮ ಅಪ್ಪ, ತಾತ ಇರಬಹುದು. ನಾವು ಹಿಂದೆ ಬ್ರಿಟಿಷರನ್ನು ತೊಲಗಿಸುವ ಚಳವಳಿ ಮಾಡಿದೆವು. ಅದೇರೀತಿ ಐ.ಎ.ಎಸ್. ಅಧಿಕಾರಿಗಳ ಬಗ್ಗೆ ಮಾಡಬೇಕಾಗಿದೆ. ಐ.ಎ.ಎಸ್ ಅಧಿಕಾರಿಗಳ ಬಗ್ಗೆ ನನಗೆ ಪ್ರೀತಿ ಇಲ್ಲ ಎಂದಲ್ಲ. ೧೦೦ಕ್ಕೆ ೧೦೦ ರಷ್ಟು ಪ್ರೀತಿ ಇದೆ. ಆದರೆ ಒಂದು ವ್ಯವಸ್ಥೆ ಏನಾಗಿದೆ ಎಂದರೆ ಈ ಐ.ಎ.ಎಸ್. ಅಧಿಕಾರಿಗಳು ಹೊರ ರಾಜ್ಯದಿಂದ ಬರುತ್ತಾರೆ. ಅವರು ಇಲ್ಲಿ ಬಂದು ಅಡ್ಜಸ್ಟ್ ಆಗುವಹೊತ್ತಿಗೆ ೨೫ ವರ್ಷ ಆಗಿರುತ್ತದೆ. ಕೊನೆಯ ಐದು ವರ್ಷದಲ್ಲಿ ಅವರು ಏನು ಮಾಡುತ್ತಾರೆ ಅವರು ಪರರಾಜ್ಯದವರು ಆದ್ದರಿಂದ ಅವರು ನಮಗೆ ಹೆದರಿಕೊಳ್ಳುವುದಿಲ್ಲ. ಆ ದೃಷ್ಟಿಯಿಂದ ನಾವು ಐ.ಎ.ಎಸ್ ಅಧಿಕಾರಿಗಳನ್ನು ಹೆಚ್ಚು ಬಳಸದೆ ಕೆ.ಎ.ಎಸ್. ಅಧಿಕಾರಿಗಳನ್ನು, ಸ್ಥಳೀಯ ಅಧಿಕಾರಿಗಳನ್ನು ಬಳಸಿಕೊಂಡರೆ ಅವರು ಹೆದರಿಕೊಂಡು ಕೆಲಸ ಮಾಡುತ್ತಾರೆ. ಈ ಕಾರಣದಿಂದ ೯೦ ಪರ್ಸೆಂಟ್ ಇರತಕ್ಕ ಐ ಎ.ಎಸ್. ಅಧಿಕಾರಿಗಳನ್ನು ತೆಗೆದುಹಾಕಿ ಕೆ.ಎ.ಎಸ್. ಅಧಿಕಾರಿಗಳಿಗೆ ಅಥವಾ ಸ್ಥಳೀಯ ಅಧಿಕಾರಿಗಳಿಗೆ ಈ ಕೆಲಸ ಕೊಡಿ, ಇವರಿಗೆ ಪ್ರೊಮೋಷನ್ ಕೊಡಿ. ಆಡಳಿತದ ದೃಷ್ಟಿಯಿಂದಲೂ ಇದು ಅನುಕೂಲ ಆಗುತ್ತದೆ. ಐಎಎಸ್ ಅಧಿಕಾರಿಗಳು ಇಲ್ಲಿ ಬಂದು ಕನ್ನಡ ಅರ್ಧಂಬರ್ಧ ಕಲಿಯುವುದರೊಳಗೆ ಅವರ ಸರ್ವೀಸೇ ಮುಗಿದು ಹೋಗುತ್ತದೆ. ಆ ದೃಷ್ಟಿಯಿಂದ ಕೇಂದ್ರ ಸರ್ಕಾರಕ್ಕೆ ಈ ಐ.ಎ.ಎಸ್., ಹಾಗೂ ಐ.ಪಿ.ಎಸ್. ಅಧಿಕಾರಿಗಳನ್ನು ವಾಪಸ್ಸು ಕಳುಹಿಸಿಕೊಟ್ಟು, ಅವರ ಜಾಗದಲ್ಲಿ ನಮ್ಮಲ್ಲೇ ನೇಮಕವಾಗಿರುವಂತಹ ಕೆ.ಎ.ಎಸ್. ಅಧಿಕಾರಿಗಳಿಗೆ ಪ್ರಮೋಷನ್ ಕೊಡಬೇಕು. ರಾಜ್ಯದಲ್ಲಿ ಇನ್ನೊಂದು ರೀತಿಯ ದರೋಡೆಯಾಗುತ್ತಿದೆ. ನಾವು ಕೇಂದ್ರ ಸರ್ಕಾರದ ಮೇಲೆ ಮಾತನಾಡಬಾರದು ಎಂಬುದಾಗಿ ಹೇಳುತ್ತಿದ್ದಾರೆ. ಪೂಜಾರಿಯವರ ಸಾಲದ ಬಗ್ಗೆ ಏಕೆ ಮಾತನಾಡಬಾರದು. ಪೂಜಾ

ಯವರ ಸಾಲದಿಂದ ಜನರಿಗೆ ಅನುಕೂಲವಾಗುವುದಕ್ಕೆ ಬದಲಾಗಿ ತೊಂದರೆಯಾಗುತ್ತಿದೆ. ನಾವು ಹಸಿರು ಕಾರ್ಡನ್ನು ಏನು ಕೊಟ್ಟಿದ್ದೇವೆ, ಆ ಜನಗಳಿಗೆ ಸಮ್ಮಾನ ಕೊಟ್ಟಿಲ್ಲ. ಅದರ ಬಗ್ಗೆ ಸಮೀಕ್ಷೆಯನ್ನು ಮಾಡಿ ಇಂತಿಷ್ಟು ಆದಾಯದ ಮಿತಿ ಇರಬೇಕೆಂದು ತಿಳಿಸಿದ್ದು, ಆ ಆದಾಯದ ಮಿತಿಯೊಳಗೆ ಇರುವವರಿಗೆ ಮಾತ್ರ ಈ ಹಸಿರು ಕಾರ್ಡನ್ನು ಹಂಚಿದ್ದೇವೆ, ಆದರೆ ಈ ಪೂಜಾರಿಯವರ ಸಾಲ ಏನಾಗಿದೆ ಎಂದರೆ, ಕಾಂಗ್ರೆಸ್‌ನವರ ಏಜೆಂಟ್ ಮೂಲಕ ಅದು ನಡೆಯುತ್ತಿದೆ. ಅದರಲ್ಲೂ ಸಾಲವನ್ನು ಕೊಡುವಂತಹವರಿಗೆ ೫ ಸಾವಿರ ರೂಪಾಯಿಗಳನ್ನು ಪೂರ್ಣವಾಗಿ ಕೊಡುವುದಿಲ್ಲ. ೩ ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಇದರಲ್ಲಿ ಸಾಲವನ್ನು ಕೊಡಿಸಿದಂಥ ಏಜೆಂಟ್‌ಗಳು ೧೦–೧೫ ಪರ್ಸೆಂಟ್ ಕಮೀಷನ್ ಪಡೆಯುತ್ತಾರೆ. ನಮ್ಮ ಕ್ಷೇತ್ರ ಒಂದರಲ್ಲೇ ೪೦ ಸಾವಿರ ಅರ್ಜಿಗಳನ್ನು ಜನರಿಂದ ತೆಗೆದುಕೊಂಡಿದ್ದಾರೆ. ಕೇವಲ ಒಂದು ಸಾವಿರ ಜನರಿಗೆ ಮಾತ್ರ ಸಾಲವನ್ನು ಕೊಟ್ಟಿದ್ದಾರೆ. ಅದು ಇಡೀ ಎರಡು ವರ್ಷದಲ್ಲಿ ಅಷ್ಟು ಜನರಿಗೆ ಸಾಲವನ್ನು ಕೊಟ್ಟಿದ್ದಾರೆ. ಇದರಿಂದಾಗಿ ಗ್ರಾಮಾಂತರ ಪ್ರದೇಶದ ಜನರು ದುಡಿದು ತಿನ್ನುವುದನ್ನು ಮರೆಯುತ್ತಿದ್ದಾರೆ. ಅದರ ಬಗ್ಗೆ ಈ ಸದನವೇ ಕೇಂದ್ರ ಸರ್ಕಾರಕ್ಕೆ ಗೊತ್ತುವಳಿಯನ್ನು ಕೊಡಬೇಕಾಗುತ್ತದೆ. ಸಾಲವನ್ನು ಕೊಡುವುದಕ್ಕೆ ನಮ್ಮ ವಿರೋಧ ಇಲ್ಲ. ಆದರೆ ಅದನ್ನು ನ್ಯಾಯ ರೀತಿಯಲ್ಲಿ ಕೊಡುವಂತಹ ವ್ಯವಸ್ಥೆಯಾಗಬೇಕು.

ಈಗ ಪೆಟ್ರೋಲ್ ಬೆಲೆ, ಸಕ್ಕರೆ ಬೆಲೆ, ಈ ಎರಡೂ ಹೆಚ್ಚಳದಿಂದ ರಾಜ್ಯ ಸರ್ಕಾರದ ಮೇಲೆ ಹೊರೆ ಜಾಸ್ತಿಯಾಗಿದೆ. ಸಾಮಾನ್ಯವಾಗಿ ಜನರು ಏನು ಮಾತನಾಡಿಕೊಳ್ಳುದ್ದಾರೆಂದರೆ, ಜನತಾ ಸರ್ಕಾರವೇ ಇದರ ಬೆಲೆಯನ್ನು ಹೆಚ್ಚು ಮಾಡಿದೆ ಎಂಬುದಾಗಿ ಮಾತನಾಡಿಕೊಳ್ಳುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಆ ಬಗ್ಗೆ ನಾನೊಂದು ಖಾಸಗಿ ನಿರ್ಣಯವನ್ನು ತಂದಿದ್ದೇನೆ. ಅದರ ಬಗ್ಗೆ ತಾವು ಒಂದು ಗಂಟೆಗಳ ಕಾಲ ಮಾತನಾಡಿದರೆ ಹೆಚ್ಚು ಸಹಾಯಕವಾಗುತ್ತದೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಇದರಿಂದಾಗಿ ಸಾಮಾನ್ಯ ಜನರಿಗೆ ಬಹಳ ಕಷ್ಟವಾಗಿದೆ. ಕೂಡಲೇ ಇದರ ಬೆಲೆಯನ್ನು ಇಳಿಸಬೇಕು ನಂತರ ಜಿಲ್ಲಾಪರಿಷತ್ತು ಮತ್ತು ಮಂಡಲ್ ಪಂಚಾಯಿತಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಹಳ್ಳಿಕಡೆ ಒಂದು ಗಾದೆ. ಅದೇನೆಂದರೆ. ಕುಳಿತು ತಿನ್ನುವವರಿಗೆ ಕುಡಿಕೆ ಹಣ ಸಾಲದು ಎಂದು. ಇವತ್ತು ಅವುಗಳ ಪರಿಸ್ಥಿತಿ ಹಾಗೆ ಆಗಿದೆ. ಈ ಒಂದು ಜಿಲ್ಲಾಪರಿಷತ್ತು ಹಾಗೂ ಮಂಡಲ್ ಪಂಚಾಯಿಗಳ ವ್ಯವಸ್ಥೆಯನ್ನು ಲೋಹಿಯಾರವರು ಕಾರ್ಯಕ್ರಮ ಅಂತಿರೋ, ಅಥವಾ ಜಯಪ್ರಕಾಶ್ ನಾರಾಯಣ್ ಅವರ ಕಾರ್ಯಕ್ರಮ ಅಂತಿರೋ ಅನ್ನಿ, ನಮ್ಮ ನಜೀರ್ ಸಾಬ್ ಅವರು ಇದನ್ನು ತಂದಿದ್ದಾರೆ. ಅದನ್ನು ನಾವು ಸ್ವಾಗತಿಸಿದ್ದೇವೆ. ಚುನಾವಣೆಯನ್ನು ಮಾಡಿದ್ದೇವೆ, ಗೆದ್ದಿದ್ದೇವೆ. ಆದರೆ ಇವತ್ತು ಅವುಗಳಿಗೆ ಸರಿಯಾದ ಹಣಕಾಸಿನ ವ್ಯವಸ್ಥೆ ಇಲ್ಲದೆ, ಬಹಳಷ್ಟು ತೊಂದರೆಯನ್ನು ಅನುಭವಿಸುತ್ತಿವೆ. ಆದಕ್ಕಾಗಿ ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಅವರಿಗೆ ನ್ಯಾಯವಾಗಿ ಕೊಡಬೇಕಾಗಿರುವಂತಹ ಹಣವನ್ನು ಕೊಡಿ ಇಲ್ಲದಿದ್ದರೆ ಅವರು ತಮ್ಮದೇ ಹಣವನ್ನು ರೂಢಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ. ನಾವಂತೂ ಯಾವ ಜಿಲ್ಲಾಪರಿಷತ್ತಿನ ಸಭೆಗಾಗಲಿ, ಅಥವಾ ಮಂಡಲ್ ಪಂಚಾಯ್ತಿಯ ಸಭೆಗಾಗಲಿ ಹೋಗುವಂತಿಲ್ಲ. ಎಲ್ಲರೂ ಸರ್ಕಾರ ಹಣವನ್ನು ಕೊಟ್ಟಿಲ್ಲವೆಂದು ದೂರುತ್ತಿದ್ದಾರೆ. ಹಣವನ್ನು ಅವರಿಗೆ ಕೊಡದಿದ್ದರೆ ನಿಜವಾಗಿಯೂ ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ.

ಅಧ್ಯಕ್ಷರೇ ನಾನು ಹೇಳುವುದನ್ನು ನೀವೂ ಕೇಳುವುದಿಲ್ಲ, ಮಂತ್ರಿಗಳೂ ಕೇಳುವುದಿಲ್ಲ ನಾನು ಯಾರಿಗಾಗಿ ಭಾಷಣ ಮಾಡಬೇಕು ? ಕಾಂಗ್ರೆಸ್‌ನವರು ಇಲ್ಲದೇ ಇರುವುದರಿಂದ ನೀವು ಕೇಳುವುದಿಲ್ಲ. ಮಂತ್ರಿಗಳೂ ಕೇಳುವುದಿಲ್ಲ. ನಮ್ಮ ಪರಿಸ್ಥಿತಿ ಹೇಗೆ? ಕಾಂಗ್ರೆಸ್‌ನವರು ಇದ್ದಿದ್ದರೆ ಮಂತ್ರಿಗಳಾದರೂ ಕೇಳುತ್ತಿದ್ದರು.

ಶ್ರೀ ಎಂ.ಎಸ್. ಕೃಷ್ಣನ್.-ಕಾಂಗ್ರೆಸ್‌ನವರು ಯಾರು ಇಲ್ಲ. ಆದ್ದರಿಂದ ಇವರು ಮಾತನಾಡಿದ್ದೆ ಮಾತನಾಡಿದ್ದು. ಇದು ಜನತಾ ಸರ್ಕಾರದ ಪರಿಸ್ಥಿತಿ.

ಶ್ರೀ ಬಿ.ಎಸ್.ಯಡಿಯೂರಪ್ಪ.—ಈ ಜನತ ಪಕ್ಷದ ಪರಿಸ್ಥಿತಿ ಚೆನ್ನಾಗಿಯೇ ಇದೇ ಆದರೆ ಈ ರಾಜ್ಯದ ಜನತೆಯ ಪರಿಸ್ಥಿತಿ ಚೆನ್ನಾಗಿಲ್ಲ

ಶ್ರೀ ಸಿದ್ದರಾಮಯ್ಯ.—ಮಾನ್ಯ ಸದಸ್ಯರು ಮಾತನಾಡುತ್ತಿರುವುದೇ ನಿಮಗೋಸ್ಕರವಾಗಿ.

ಶ್ರೀ ಬಿ.ಆರ್ ನೀಲಕಂಠಪ್ಪ.—ಇವತ್ತು ಜಿಲ್ಲಾಪರಿಷತ್ತುಗಳಿಗೆ ನೀವು ಎಷ್ಟು ಹಣವನ್ನು ಕೊಡುತ್ತೀರೋ ಅದರಲ್ಲಿ ಶೇಕಡ ೨೫ ಭಾಗವನ್ನು ನೀವೇ ಕೂಡಿಸಿಕೊಳ್ಳಬೇಕೆಂದು ಹೇಳಿ, ಆ ನಂತರ ಶೇಕಡ ೭೫ ಭಾಗವನ್ನು ಸರ್ಕಾರ ಕೊಡಲಿ ಅದೇ ರೀತಿ ಮಂಡಲ ಪಂಚಾಯಿತಿಗಳೂ ಶೇಕಡ ೫೦ ಭಾಗದ ಹಣವನ್ನು ಸ್ವಂತ ಕೂಡಿಸಿಕೊಳ್ಳಬೇಕೆಂದು ಹೇಳಿ ಬಾಕಿ ಶೇಕಡ ೫೦ ಭಾಗವನ್ನು ಸರ್ಕಾರ ಕೊಡಲಿ ಈ ರೀತಿ ಜವಾಬ್ದಾರಿ ಕೊಡದೇ ಹೋದರೆ ಬಿಕ್ಷಾಟನೆಗೆ ದಾರಿ ಮಾಡಿಕೊಟ್ಟ ಹಾಗೆ ಆಗುತ್ತದೆ. ಒಬ್ಬ ಬಿಕ್ಷುಕನಿಗೆ ದಿವಸ ದಿವಸವೂ ಕಾಸು ಕೊಟ್ಟರೆ ಆತ ದಿನಾ ಬೆಳಿಗ್ಗೆ ಸಾಯಂಕಾಲ ಬರುತ್ತಲೇ ಇರುತ್ತಾನೆ ಬಿಕ್ಷೆ, ಬೇಡುವ ಪರಿಸ್ಥಿತಿಗೆ ನಮ್ಮ ಜನರನ್ನು ದೂಡುವುದು ಬೇಡ.

ಅಧ್ಯಕ್ಷರು.— ದಯಮಾಡಿ ತಮ್ಮ ಭಾಷಣವನ್ನು ಮುಕ್ತಾಯ ಮಾಡಿ.

ಶ್ರೀ ಬಿ.ಆರ್.ನೀಲಕಂಠಪ್ಪ.—ಮಾನ್ಯ ನಜೀರ್‌ಸಾಬ್ ಅವರು ಸರ್ವರಿಗೂ ಸಮಪಾಲು ಎಂದು ಹೇಳಿದರು. ಈ ರೀತಿ ಹೇಳಿ ಎಲ್ಲರೂ ಬಿಕ್ಷೆ ಬೇಡುವ ಪರಿಸ್ಥಿತಿಗೆ ತಂದಿದ್ದಾರೆಂದು ನನ್ನ ಅನಿಸಿಕೆ.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ಕಡೆ ಅನಿಸಿಕೆ ಇನ್ನೊಂದು ಕಡೆ ಅಂಜಿಕೆ.

ಶ್ರೀ ಬಿ.ಆರ್. ನೀಲಕಂಠಪ್ಪ.—ಈ ಅನಿಸಿಕೆಗಳನ್ನು ಹೋಗಲಾಡಿಸುವುದಕ್ಕೆ ಪ್ರತಿಯೊಬ್ಬರಿಗೂ ಜವಾಬ್ದಾರಿಯನ್ನು ಕೊಡದೇ ಹೋದರೆ ಯಾರು ಕೂಡ ಪ್ರಜಾಪ್ರಭುತ್ವದಲ್ಲಿ ಜವಾಬ್ದಾರಿಯನ್ನು ಅರಿತುಕೊಂಡು ಕೆಲಸ ಮಾಡದೇ. ಕೇವಲ ಬೇರೆಯವರಿಂದ ಹಣ ಬರುತ್ತದೆ ಅದರಿಂದ ಕೆಲಸ ಮಾಡುತ್ತೇವೆನ್ನುವ ದೋರಣೆ ಇದೆ ಅದು ನಿಜವಾಗಿಯೂ ಪ್ರಜಾಪ್ರಭುತ್ವಕೆ ಮೊದಲನೆಯ ಪೆಟ್ಟು ಇದನ್ನು ಹೋಗಲಾಡಿಸದೇ ಇದ್ದರೆ ನಮ್ಮನ್ನು ನಿಮ್ಮನ್ನು ಈ ಸದನದಿಂದ ಓಡಿಸುತ್ತಾರೆ. ಆಗ ನಾವು ಎಚ್ಚರಿಕೆಯನ್ನು ವಹಿಸುತ್ತೇವೆಂದು ಹೇಳುತ್ತಾ ಈಗ ಮಾನ್ಯ ಅಧ್ಯಕ್ಷರೇ......

ಶ್ರೀ ಬಿ. ಎಸ್. ಯಡಿಯೂರಪ್ಪ.— ಸಂಜೆ ಆದಹಾಗೆ ಜನತಾ ಪಾರ್ಟಿ ಬಗ್ಗೆ ಏನೇನೋ ಹೇಳುವುದಕ್ಕೆ ಹೊರಟಿದ್ದಾರೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಇನ್ನು ಕೃಷಿ ಇಲಾಖೆ ಬಗ್ಗೆ ಎರಡು ಮಾತು. ರೈತರ ಬಗ್ಗೆ ಹೇಳಬೇಕೆಂದರೆ ರೈತನಿಗೆ ಅನೇಕ ಸೌಕರ್ಯಗಳನ್ನು ನಾವು ಕೊಟ್ಟಿದ್ದೇವೆ. ಆದರೆ ರೈತ ಬೆಳೆಯತಕ್ಕ ರಾಗಿಗಾಗಲೀ, ಭತ್ತಕ್ಕಾಗಲೀ, ಮೆಣಸಿನಕಾಯಿಗಾಗಲೀ ಬೆಲೆ ಹೆಚ್ಚು ಆಗಿಲ್ಲ. ಇದೇ ಹತ್ತು ವರ್ಷಗಳ ಕೆಳಗೆ ೨೦ ವರ್ಷಗಳ ಕೆಳಗೆ ನೌಕರ ವರ್ಗದ ಶ್ರೇಣಿ ಯಾವ ಮಟ್ಟದಲ್ಲಿ ಇತ್ತು ಈಗ ಯಾವ ಮಟ್ಟಕ್ಕೆ ಏರಿದೆ ಆ ಪ್ರಮಾಣದಲ್ಲಿ ರಾಗಿ, ಭತ್ತ, ಮೆಣಸಿನಕಾಯಿ, ಕಡ್ಲೇಕಾಯಿಯ ಬೆಲೆಗಳು ಏರಿವೆಯೇ ಸ್ವಾಮಿ ? ಇದನ್ನು ಮಾನ್ಯ ಕೃಷಿ ಸಚಿವರು ಯೋಚನೆ ಮಾಡಬೇಕು. ಈ ಬಗ್ಗೆ ನಾನು ಹಿಂದೆ ಮಾನ್ಯ ಎಂ. ಪಿ. ಪ್ರಕಾಶ್ ಅವರಿಗೆ ಕೇಳಿದ್ದಕ್ಕೆ ನಾವು ನಿಗಧಿತ ಬೆಲೆ, ಬೆಂಬಲ ಬೆಲೆಯನ್ನು ಕೊಡುತ್ತೇವೆಂದು ಹೇಳಿದರು. ಎಲ್ಲಿಯವರೆಗೆ ನೀವು ಬೆಂಬಲ ಬೆಲೆಯನ್ನು ಈ ಬೆಳೆಗಳಿಗೆ ಕೊಡುವುದಿಲ್ಲವೋ ಅಲ್ಲಿಯವರೆಗೆ ನೀವು ಏನು ನೇಗಿಲು ಹೊತ್ತ ರೈತ ರಾಷ್ಟ್ರದ ಬೆನ್ನಲುಬು ಎಂದು ಹೇಳುತ್ತೀರೋ ಆ ರೈತನ ಪರಿಸ್ಥಿತಿ ಸುಧಾರಿಸುವುದಿಲ್ಲ. ಕೃಷಿಗೆ ಇವತ್ತು ಬೆಂಬಲ ಬೆಲೆಯನ್ನು ಕೊಡಬೇಕೆಂದು ಹೇಳುತ್ತಾ......

ಅಧ್ಯಕ್ಷರು.—ತಾವು ತಮ್ಮ ಭಾಷಣವನ್ನು ಮುಕ್ತಾಯ ಮಾಡಿ ಅಧ್ಯಕ್ಷರು ನೀವು ನಿಮ್ಮ ಭಾಷಣವನ್ನು ಮುಗಿಸಿ, ಮುಕ್ತಾಯ ಮಾಡುತ್ತೀರೊ ಇಲ್ಲವೋ ನಿಮಗೆ ಎಷ್ಟು ಸಾರಿ ಹೇಳಬೇಕು ? ಸಮಯ ಸೂಕ್ಷ್ಮತೆಯನ್ನು ತಾವು ಅರಿಯಬೇಕು.

ಶ್ರೀ ಬಿ. ಆರ್. ನೀಲಕಂಠಪ್ಪ.—ಸರ್ಕಾರ ರೈತರ ಬೆಳೆಯ ವಿಮೆಯ ಬಗ್ಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈಗ ಇದು ಏನಾಗಿದೆ ಅಂದರೆ ಒಬ್ಬ ರೈತನಿಗೆ ಬೆಳೆ ನಷ್ಟವಾದರೆ ಬೆಳೆ ವಿಮೆ ಸಿಗುವುದಿಲ್ಲ. ಇಡೀ ತಾಲ್ಲೂಕಿಗೆ ಬೆಳೆ ನಷ್ಟವಾದರೆ ಕೊಡುತ್ತಾರೆ. ಇದರ ಬಗ್ಗೆ ಕಣ್ಣೊರೆಸುವ, ಕಣ್ಣೀರಿಡುವ ಜನಾರ್ಧನ ಪೂಜಾರಿಯವರು ನಮ್ಮ ತರೀಕೆರೆಗೆ ಬಂದಾಗ ಈ ಬಗ್ಗೆ ಕೇಳಿದ್ದೇನೆ ಬೆಳೆ ವಿಮೆ ಬಗ್ಗೆ ನಾನು ಪದೇ ಪದೇ ಹೇಳಿದ್ದೇನೆ. ಮೂರು ಸಾರಿ ಹೇಳಿದ್ದೇನೆ ಬೆಳೆ ವಿಮೆ ಸಿಗಬೇಕಾದರೆ ಇಡೀ ತಾಲ್ಲೂಕಿನಲ್ಲಿ ಅಥವಾ ಒಂದು ಹೋಬಳಿಯಲ್ಲಿ ಬೆಳೆ ನಷ್ಟವಾದರೆ ಬೆಳೆ ವಿಮೆ ಸಿಗುತ್ತದೆಂದು ಹೇಳುತ್ತಾರೆ. ಈ ಸದನದ ಮೂಲಕ ಒಂದು ನಿರ್ಣಯ ಮಾಡಬೇಕಾಗುತ್ತದೆ. ರೈತ ೫ ಎಕರೆ ೧೦ ಎಕರೆ ಭೂಮಿ ಇಟ್ಟುಕೊಂಡು ಬೆಳೆ ನಷ್ಟವಾದರ, ಅವನಿಗೆ ಆದ ನಷ್ಟಕ್ಕೆ ವಿಮೆ ಸಿಗಬೇಕು. ಒಂದು ಪೆಟ್ಟಿ ಅಂಗಡಿ ಸುಟ್ಟು ಹೋದರೆ ೫೦೦ ರೂಪಾಯಿಗಳ ವಿಮೆ ಸಿಗುತ್ತದೆ.

ಸಣ್ಣ ಕಾರ್ಖಾನೆ ಸುಟ್ಟುಹೋದರೆ ಮಾಲೀಕನಿಗೆ ವಿಮೆ ಸಿಗುತ್ತದೆ. ಆಕ್ಸಿಡೆಂಟ್ ಆದರೆ ಅವರಿಗೆ ವಿಮೆ ಸಿಗುತ್ತದೆ. ರೈತನಿಗೆ ವಿಮೆ ಸಿಗುವುದಿಲ್ಲ. ಒಬ್ಬ ರೈತನಿಗೂ ಬೆಳೆ ವಿಮೆ ಸಿಗುವ ವ್ಯವಸ್ಥೆಯನ್ನು ರಾಜ್ಯ ಸರ್ಕಾರ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಶಿಕ್ಷಣ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ,

ಅಧ್ಯಕ್ಷರು.—ಮಾನ್ಯ ನೀಲಕಂಠಪ್ಪನವರೇ ತಮ್ಮ ಭಾಷಣ ಮುಕ್ತಾಯ ಮಾಡಿ.

ಶ್ರೀ ಬಿ. ಆರ್. ನೀಲಕಂಠಪ್ಪ.—ನಮ್ಮ ಸರ್ಕಾರ ಶಿಶು ಕಲ್ಯಾಣದ ಬಗ್ಗೆ ಬಹಳ ಯೋಚನೆ ಮಾಡಬೇಕಾಗುತ್ತದೆ. ಸರ್ಕಾರ ಶಿಕ್ಷಣದ ಬಗ್ಗೆ ಆದ್ಯತೆ ಕೊಟ್ಟಿದೆ. ಆದರೆ ಇವತ್ತು ಹಳ್ಳಿಗಳ ಕಡೆ ಏನಾಗಿದೆ ಅಂದರೆ, ನಮ್ಮ ಮಕ್ಕಳಾಗಲೀ, ಇನ್ನೊಬ್ಬರ ಮಕ್ಕಳಾಗಲೀ ಐದಾರು ವರ್ಷಗಳ ತಪಕ ಶಾಲೆಗೆ ಕಳುಹಿಸುವುದಕ್ಕೆ ಆಗುವುದಿಲ್ಲ. ನಮ್ಮ ತಾಲ್ಲೂಕಿನಲ್ಲಿಯೇ ೨ಳಳ ಹಳ್ಳಿಗಳಿವೆ. ಅಲ್ಲಿ ೪ ಶಿಶು ವಿಹಾರಗಳು ಇಲ್ಲ. ನೀವು ಒಂದೇ ಸಾರಿ ಪುಸ್ತಕ ಒಟ್ಟೆ ಎಲ್ಲಾ ಕೊಡಬಹುದು. ಹಳ್ಳಿಗಳಲ್ಲಿ ಸಣ್ಣ ಮಕ್ಕಳನ್ನು ದನ ಕಾಯಲಿಕ್ಕೆ ಕಳುಹಿಸುತ್ತಾರೆ. ಯಾರೂ ಕೂಡ ಶಾಲೆಗೆ ಕಳುಹಿಸುವುದಿಲ್ಲ. ಆದ್ದರಿಂದ ಶಿಶು ಕಲ್ಯಾಣದ ಬಗ್ಗೆ ಮಂತ್ರಿಗಳು ಜವಾಬ್ದಾರಿ ವಹಿಸಿಕೆಲಸ ಮಾಡಬೇಕೆಂದು ಹೇಳುತ್ತೇನೆ. ಶಿಶು ಕಲ್ಯಾಣದ ಬಗ್ಗೆ ಸರ್ಕಾರ ಯೋಚನೆ ಮಾಡದಿದ್ದರೆ ಮುಂದೆ ಬಹಳ ಕಷ್ಟವಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ನೀಲಕಂಠಪ್ಪನವರಿಗೆ ಒಬ್ಬೊಬ್ಬ ಮಂತ್ರಿಗಳನ್ನು ನೋಡಿದಾಗ ಒಂದೊಂದು ವಿಷಯ ಜ್ಞಾಪಕಕ್ಕೆ ಬರುತ್ತದೆ.

ಶ್ರೀ ಬಿ. ಆರ್. ನೀಲಕಂಠಪ್ಪ.— ಶಿಶುಕಲ್ಯಾಣದ ಬಗ್ಗೆ ಬಹಳ ಆಸಕ್ತಿವಹಿಸಬೇಕು. ವಿಶ್ವವಿದ್ಯಾನಿಲಯಗಳನ್ನು, ಕಾಲೇಜುಗಳನ್ನು ಬೇಕಾದರೆ ಕ್ಲೋಸ್ ಮಾಡಿ. ಏಕೆಂದರೆ ಅಲ್ಲಿ ಬರತಕ್ಕವರು ಮಾನ್ಯ ದೇಶಪಾಂಡೆಯವರು ಮಕ್ಕಳು, ಜೀವಿಜಯರವರ ಮಕ್ಕಳು ಬರಬಹುದು ಒಬ್ಬ ಬಡ ಬೋರೇಗೌಡನ ಮಗ ಬರುವಂತಾಗಬೇಕು. ವಿಶ್ವವಿದ್ಯಾಲಯಗಳನ್ನು ಕ್ಲೋಸ್ ಮಾಡಿ, ಹಳ್ಳಿಗಳಲ್ಲಿ ಶಿಶುವಿಹಾರ ಕೇಂದ್ರಗಳನ್ನು ತೆಗೆದರೆ ಆಗ ನಿಜವಾಗಿಯೂ ರಾಷ್ಟ್ರದ ಅಭಿವೃದ್ಧಿಯಾಗುತ್ತದೆ. ವಯಸ್ಕರ ಶಿಕ್ಷಣ ಯಾರಿಗೆ ಬೇಕು ಸ್ವಾಮಿ ? ವಯಸ್ಕರ ಶಿಕ್ಷಣ ಕೇಂದ್ರಕ್ಕೆ ಬರತಕ್ಕವನು ಸಾಯುತ್ತಿರುತ್ತಾನೆ. ನಾನು ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ, ಅವನು ಹೆಬ್ಬೆಟ್ಟು ಒತ್ತುವವನು ಏನು ಕಲಿಯುತ್ತಾನೆ ? ವಯಸ್ಕರ ಶಿಕ್ಷಣ ಕೇಂದ್ರದಲ್ಲಿ ಕಲಿಸುವವರಿಗೆ ೧೦೦-೧೫೦ ರೂಪಾಯಿ ಕೊಡಲಾಗುತ್ತಿದೆ. ಇದರಿಂದ ಇಡೀ ರಾಷ್ಟ್ರದಲ್ಲಿ ಒಂದು ಪರ್ಸೆಂಟ್ ಕೂಡ ಸಹಾಯವಾಗುತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಹಾಗಾದರೆ ವಯಸ್ಕರ ಶಿಕ್ಷಣ ಬೇಡವೆಂದು ಹೇಳುತ್ತಿದ್ದಾರೆ. ಇದು ಜನತಾ ಪಕ್ಷದ ಧೋರಣೆಯೇ ಎಂದು ಕೇಳಬೇಕಾಗಿದೆ.

ಶ್ರೀ ಸಿದ್ಧರಾಮಯ್ಯ.— ಮಾನ್ಯ ಸದಸ್ಯರು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ ಅಷ್ಟೆ.

ಶ್ರೀ ಎಂ. ರಘುಪತಿ.— ಮಾನ್ಯ ಸದಸ್ಯರು ಈಗತಾನೇ ನಾನು ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆಂದು ಹೇಳಿದರು, ಈಗ ಜವಾಬ್ದಾರಿಯಿಂದ ಮಾತನಾಡಿದರೆ, ಇಷ್ಟುಹೊತ್ತು ಮಾತನಾಡಿದ್ದು ಜವಾಬ್ದಾರಿಯಿಂದ ಮಾತನಾಡಲಿಲ್ಲವೆ ? ಈಗ ಮಾತ್ರ ಜವಾಬ್ದಾರಿಯಿಂದ ಮಾತನಾಡುತ್ತಿದ್ದಾರೆಯೇ ?

ಅಧ್ಯಕ್ಷರು.— ಮುಕ್ತಾಯ ಮಾಡಿರಿ, ಮುಂದೆ ಮಾತನಾಡುವುದಕ್ಕೆ ಅವಕಾಶ ಇದೆ.

ಶ್ರೀ ಬಿ. ಆರ್. ನೀಲಕಂಠಪ್ಪ.— ಈ ಕಾಡು ಬೆಳೆಸುವ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಕಳೆದ ಐದು ವರ್ಷಗಳಲ್ಲಿ ಸಾಮಾನ್ಯ ಕಾಡನ್ನು ಬೆಳೆಸಿದ್ದಾರೆ. ಇದನ್ನು ನಿಜವಾಗಿಯೂ ನಾನು ಸ್ವಾಗತ ಮಾಡುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸಹ ಬಹಳ ಹೇಳಿದ್ದಾರೆ. ಈ ಐದು ವರ್ಷಗಳ ಅಂಕಿ ಅಂಶಗಳನ್ನು ತೆಗೆದುಕೊಂಡರೆ ಸಾಮಾನ್ಯ ಕಾಡು ಬೆಳೆಸಲು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ಅದಕ್ಕೆ ಏನಾದರೂ ಸಿ. ಒ. ಡಿ. ತನಿಖೆ ಮಾಡಿಸಿದರೆ ಬಹಳ ಒಳ್ಳೆಯದು. ಐದು ವರ್ಷಗಳಲ್ಲಿ ಎಷ್ಟು ಗಿಡಗಳಿಗೆ ಎಷ್ಟು ಹಣ ಕೊಟ್ಟಿದ್ದಾರೆ ? ಎಷ್ಟು ಗಿಡ ಬೆಳೆಸಿದ್ದೀರಿ ? ನಾನು ಈ ಸದನದಲ್ಲಿ ಹೇಳುತ್ತೇನೆ. ನನ್ನ ಅಪ್ಪನಾಣೆಗೂ ಹೇಳುತ್ತೇನೆ, ಐದು ಪರ್ಸೆಂಟ್‌ನಷ್ಟು ಕೂಡ ಗಿಡಗಳನ್ನು ಬೆಳೆಸಿಲ್ಲ......

ಶ್ರೀ ಲಕ್ಷ್ಮೀನರಸಿಂಹಯ್ಯ.— ನಮ್ಮ ತುಮಕೂರಿನಲ್ಲಿ ಹಾಕಿದ ಗಿಡಗಳಲ್ಲಿ ನೂರಕ್ಕೆ ತೊಂಭತ್ತೈದಕ್ಕಿಂತ ಹೆಚ್ಚು ಗಿಡಗಳು ಚೆನ್ನಾಗಿ ಬೆಳೆದುಕೊಂಡು ಬಂದಿವೆ.

ಶ್ರೀ ಬಿ. ಆರ್. ನೀಲಕಂಠಪ್ಪ.— ನಿಮಗೆ ಐದು ವರ್ಷಗಳಿಂದ ಕಾರು ಸಿಕ್ಕಿದೆ ಹಳ್ಳಿಗಳಕಡೆಗೆ ಹೋಗಿಲ್ಲವೆಂದು ಕಾಣುತ್ತದೆ, ಅಲ್ಲಿ ಹೋಗಿ ನೋಡಿದರೆ ಗೊತ್ತಾಗುತ್ತದೆ. ಅದಕ್ಕೆ ನೀವು ಒಂದು ಸಮಿತಿಯನ್ನು ರಚಿಸಿ ಅಥವಾ ಸಿ. ಒ. ಡಿ. ಯಿಂದ ತನಿಖೆ ಮಾಡಿಸಿ. ಐದು ವರ್ಷಗಳಲ್ಲಿ ಎಷ್ಟು ಗಿಡಗಳನ್ನು ಬೆಳೆಸಿದ್ದಾರೆ ಎಂದು ಗೊತ್ತಾಗುತ್ತದೆ .....

ಶ್ರೀ ಬಿ. ಎ. ಜೀವಿಜಯ.— ಅಧ್ಯಕ್ಷರೇ......

ಅಧ್ಯಕ್ಷರು.— ಶ್ರೀ ನೀಲಕಂಠಪ್ಪನವರು ಹೇಳಿದ್ದುದು ಸರಿಯಾಗಿದೆ. ತುಮಕೂರಿನ ರಸ್ತೆಗಳಲ್ಲಿ ಅಷ್ಟೇ ಗಿಡಗಳನ್ನು ಹಚ್ಚಿದ್ದಾರೆ. ಹೋಗಿ ನೋಡಿ ಬೇಕಾದರೆ. ಶ್ರೀ ನೀಲಕಂಠಪ್ಪನವರೇ, ನೀವು ಮಾತನಾಡಿದ್ದು ಸಾಕು, ಬೇಗ ಮುಗಿಸಿರಿ.

ಶ್ರೀ ಲಕ್ಷ್ಮೀನರಸಿಂಹಯ್ಯ.— ಬಹಳ ಕಡೆ ಒಳ್ಳೆ ಪರ್ಸೆಂಟೇಜ್ ಇದೆ.

(ಗೊಂದಲ)

ಅಧ್ಯಕ್ಷರು.— ಅವರು ಮಾತನಾಡುತ್ತಿದ್ದಾರೆ. There is something in his speech.

ಶ್ರೀ ಬಿ. ಎ. ಜೀವಿಜಯ.— ಅಧ್ಯಕ್ಷರೇ, ನಾನು ಹೇಳುತ್ತೇನೆ......

ಅಧ್ಯಕ್ಷರು.— ನೀವು ಮಾಜಿ ಅರಣ್ಯ ಮಂತ್ರಿಗಳು. ನೀವು ಅವರಿಗೆ ಸಪೋರ್ಟ್ ಕೊಡಲಿಕ್ಕೇ ಬೇಕು.

ಶ್ರೀ ಬಿ. ಎ. ಜೀವಿಜಯ.— ಅಧ್ಯಕ್ಷರೇ, ಈ ಐದು ವರ್ಷಗಳಲ್ಲಿ ೧೨೦ ಕೋಟಿ ಸಸಿಗಳನ್ನು ನೆಟ್ಟಿದ್ದೇವೆ. ಪಶ್ಚಿಮ ಘಟ್ಟದ ಅರಣ್ಯಕ್ಕೆ ಮಾನ್ಯ ಸದಸ್ಯರು ಹೋಗಿದ್ದಾರೋ ಗೊತ್ತಿಲ್ಲ. ರೋಡ್ ಸೈಡ್ ಪ್ಲಾಂಟೇಶನ್ ಒಂದೇ ಅಲ್ಲ.

ಅಧ್ಯಕ್ಷರು.— ಎಲ್ಲಿ ಹೋಗಿ ನೋಡಿದರೂ ಮುನ್ನೂರು ವರ್ಷಗಳ ಹಿಂದೆ ಹಚ್ಚಿದ ಗಿಡಗಳು ಕಾಣುತ್ತವೆಯೋ ಹೊರತು ನಲ್ವತ್ತು ವರ್ಷಗಳಿಂದ ಸ್ವಾತಂತ್ರ್ಯ ಸಿಕ್ಕಿದ ನಂತರ ಹಚ್ಚಿದ ಗಿಡಗಳು ಎಲ್ಲಿಯೂ ಕಾಣುವುದಿಲ್ಲ.

ಶ್ರೀ ಬಿ. ಎ. ಜೀವಿಜಯ.— ಪಶ್ಚಿಮ ಘಟ್ಟದ ಅರಣ್ಯಕ್ಕೆ ಹೋಗಿ ನೋಡಬೇಕು. ಬೇಕಾದಷ್ಟು ಕೆಲಸ ಆಗಿದೆ.

ಶ್ರೀ ಜಿ.ಎಸ್. ಬಾಗಲಕೋಟೆ.— ಈಗ ಮಾನ್ಯ ಸಚಿವರು ಏನು ಹೇಳಿದರು, ಆ ತರಹ ಸಸಿಗಳು ಬೆಳೆದಿವೆ. ನಮ್ಮ ದೇಶದಲ್ಲಿ ಕರ್ನಾಟಕದ ಅರಣ್ಯಕ್ಕೆ ಒಂದು ಒಳ್ಳೆಯ ಹೆಸರು ಇದೆ. ಬಹಳ ಒಳ್ಳೆಯ ಅರಣ್ಯ ಎನ್ನುವ ದೃಷ್ಟಿಯಿಂದ, ಮಾನ್ಯ ನೀಲಕಂಠಪ್ಪನವರ ಅಭಿಪ್ರಾಯ ಏನಿದೆಯೋ ನನಗೆ ಗೊತ್ತಿಲ್ಲ.

ಅಧ್ಯಕ್ಷರು.— ಅವರು ಹೇಳಿದ್ದರಲ್ಲಿ ಸತ್ಯಾಂಶ ಇದೆ. ನೀವು ಹೇಳುವುದು ಕುರುಡುಗಣ್ಣು ಮೆಳ್ಳೆಗಣ್ಣು ಅಂದಹಾಗೆ.

ಶ್ರೀ ಬಿ.ಎ. ಜೀವಿಜಯ.—ನಮ್ಮ ಪ್ರಧಾನ ಮಂತ್ರಿಗಳು ವೇಸ್ಟ್‌ಲ್ಯಾಂಡ್ ಡೆವಲಪ್‌ಮೆಂಟ್‌ಗೆ ಇಡೀ ನಮ್ಮ ರಾಷ್ಟ್ರದಲ್ಲಿ ಕರ್ನಾಟಕಕ್ಕೆ ಮೂರೂವರೆ ಕೋಟಿ ರೂಪಾಯಿಗಳನ್ನು ಕೊಟ್ಟರು. ಮಹಾರಾಷ್ಟ್ರಕ್ಕೆ ೨೫ ಲಕ್ಷ ಕೊಟ್ಟರು. ಬೇರೆ ಯಾವುದೇ ರಾಜ್ಯಕ್ಕೆ ಇಷ್ಟು ಹಣ ಕೊಟ್ಟಿಲ್ಲ. ಕರ್ನಾಟಕ ರಾಜ್ಯದಲ್ಲಿ ಇಷ್ಟು ಚೆನ್ನಾಗಿ ಅರಣ್ಯವನ್ನು ಬೆಳೆಸಿದ್ದಾರೆ ಎನ್ನುವ ಕಾರಣಕ್ಕಾಗಿ......

ಅಧ್ಯಕ್ಷರು.— ನಿಮ್ಮ ಫಾರೆಸ್ಟ್‌ನೊಳಗೆ ಪೇಪರ್ ಅಚೀವ್‌ಮೆಂಟ್ ಏನಿದೆ ಅದು ಇಂಡಿಯಾದೊಳಗೇ ಬೆಸ್ಟ್ ಇದೆ.

ಶ್ರೀ ಬಿ. ಎ. ಜೀವಿಜಯ.— ಇದು ತಮ್ಮ ತಪ್ಪು ಕಲ್ಪನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ತಾವು ಹಿಂದೆ ತಾತ ಮುತ್ತಾತಂದಿರು ಬೆಳೆಸಿದ ಗಿಡಗಳು ಮಾತ್ರ ಇವೆ. ೬೦ ವರ್ಷಗಳಿಂದ ಈಚೆಗೆ ಯಾವ ಗಿಡಗಳೂ ಕಾಣುವುದಿಲ್ಲ ಎಂದು ರೂಲಿಂಗ್ ಕೊಟ್ಟ ಮೇಲೆ ಮತ್ತೆ ಇದರ ಬಗ್ಗೆ ಪ್ರಸ್ತಾಪ ಮಾಡುವುದು ಅವಶ್ಯಕತೆ ಇಲ್ಲ.

ಅಧ್ಯಕ್ಷರು.— ನಾನು ರೂಲಿಂಗ್ ಕೊಟ್ಟಿಲ್ಲ.

ಶ್ರೀ ಜಿ. ಎಸ್. ಬಾಗಲಕೋಟೆ.— ಮಾನ್ಯ ಅಧ್ಯಕ್ಷರೇ, ಕಾರವಾರದ ಒಂದು ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ ಸುಮಾರು ೬೦ ಸಾವಿರ ಎಕರೆ ಪ್ರದೇಶದಲ್ಲಿ ಅಲ್ಲಿ ಮರಗಳನ್ನು ಬೆಳೆಸಿದ್ದೇವೆ. ಸುಮಾರು ನೂರಕ್ಕೆ ತೊಂಬತ್ತರಷ್ಟು ಮರಗಳು ಯಶಸ್ವಿಯಾಗಿದೆ. ತಾವು ದಯಮಾಡಿ ಸಮಯ ಸಿಕ್ಕಿ ನಮ್ಮ ಜೊತೆಗೆ ಬಂದರೆ ತಮಗೆ ಅದನ್ನು ತೋರಿಸುತ್ತೇನೆ. ತಾವು ಕೂಡ ಇದನ್ನು ಮೆಚ್ಚುತ್ತೀರೆಂದು ಭಾವಿಸುತ್ತೇನೆ.

ಅಧ್ಯಕ್ಷರು.— ನನಗೆ ಎಲ್ಲಾ ಗೊತ್ತಿದೆ ಬಿಡಿ, ನೀವು ಮಾತನಾಡಿ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಸಚಿವರು ೬೦ ಸಾವಿರದ ಲೆಕ್ಕ ಕೊಟ್ಟಿದ್ದಾರೆ. ಲೆಕ್ಕ ಮಾತ್ರ ಇದೆ. ಎಷ್ಟು ಬೆಳೆದಿವೆಯೋ ಗೊತ್ತಿಲ್ಲ.

ಅಧ್ಯಕ್ಷರು.— ಇದರ ಬಗ್ಗೆ ಬೇಕಾದಷ್ಟು ಎನ್‌ಕ್ವೈರಿ ನಡೆದಿದೆ. ಗಿಡಗಳನ್ನು ಹಚ್ಚದೇನೆ ಹಚ್ಚಿದ್ದೀರಿ ಎಂದು ತೋರಿಸುವ ರೆಕಾರ್ಡ್‌ಗಳು ಸಿಕ್ಕಿವೆ. ಇಂಥಾದ್ದು ಬೇಕಾದಷ್ಟು ನಡೆದಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಜನತಾ ಪಾರ್ಟಿಯ ಷೇಪ್ ನಿಕಾಲ್ ಆಯಿತು...

ಶ್ರೀ ಬಿ. ಆರ್. ನೀಲಕಂಠಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಹೇಳಿದಹಾಗೆ ಜನತಾ ಸರ್ಕಾರದ ತಪ್ಪುಗಳನ್ನು ಹೇಳುತ್ತಿಲ್ಲ. ಜನತಾ ಸರ್ಕಾರ ಇನ್ನೂ ಉತ್ತಮವಾಗಿ ಕೆಲಸ ಮಾಡಿದರೆ, ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಲಹೆಯನ್ನು ಹೇಳುತ್ತಾ, ಗೋಬರ್ ಗ್ಯಾಸ್ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಕೇಂದ್ರ ಸರ್ಕಾರದ ವತಿಯಿಂದ ಮಲೆನಾಡು, ಬಯಲು ಸೀಮೆ ಎಂದು ಎರಡು ಭಾಗ ಮಾಡಿದ್ದಾರೆ. ಹಿಂದೆ ಇದನ್ನು ನಂಬಿಕೊಂಡು ೬೩ ಪರ್ಸೆಂಟ್ ಸಬ್ಸಿಡಿ ಸಿಗುತ್ತದೆ ಎನ್ನುವ ದೃಷ್ಟಿಯಿಂದ ಅನೇಕ ಕಡೆ ಗೋಬರ್ ಗ್ಯಾಸ್ ಮಾಡಿಕೊಂಡವು. ಆದರೆ ಮಧ್ಯಂತರ ಆಚ್ನೆ ಬಂದ ಮೇಲೆ ೩೩ ಪರ್ಸೆಂಟ್ ಸಬ್ಸಿಡಿ ಆಗಿರುತ್ತದೆ. ಈ ಸಬ್ಸಿಡಿ ಕೂಡ ಬಾರದೇ ಇರುವುದರಿಂದ, ಇದನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತಾ......

ಅಧ್ಯಕ್ಷರು.— ಮಾನ್ಯ ನೀಲಕಂಠಪ್ಪನವರೇ, ನೀವಿನ್ನು ಮುಗಿಸುತ್ತೀರೋ ಇಲ್ಲವೋ. ಎಷ್ಟು ಸಾರಿ ಹೇಳಿಸಿಕೊಳ್ಳುತ್ತೀರಿ.

ಶ್ರೀ ಬಿ. ಆರ್. ನೀಲಕಂಠಪ್ಪ.— ವಂದನೆ ಹೇಳುತ್ತೇನೆ. ಜನತಾ ಸರ್ಕಾರ ನಿಜವಾಗಿಯೂ ೫ ವರ್ಷಗಳಲ್ಲಿ ಇಡೀ ರಾಷ್ಟ್ರದಲ್ಲಿ ಗಣನೀಯ ಸಾಧನೆ ಮಾಡಿದೆ. ಈ ಸಾಧನೆಗೆ ಪೂರಕವಾಗಿ ಕಾಂಗ್ರೆಸ್‌ನವರು ಕೇಳಲಾರದೆ ಹೊರಗೆ ಹೋಗಿದ್ದಾರೆ. ಇದು ಶೋಚನೀಯ ಎಂದು ಹೇಳುತ್ತೇನೆ. ಆದರೂ ಸದನದಲ್ಲಿರತಕ್ಕ ಸದಸ್ಯರು, ಸಚಿವರು, ನನ್ನ ಮಿತ್ರರೂ ನನ್ನ ಭಾಷಣವನ್ನು ಆಲಿಸಿದ್ದಾರೆ. ಎಲ್ಲರಿಗೂ ನನ್ನ ವಂದನೆಗಳನ್ನು ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಇಲ್ಲಿಗೆ ಈ ವಿಷಯದ ಮೇಲೆ ಚರ್ಚೆ ಮುಕ್ತಾಯವಾಯಿತು. ಇದುವರೆಗೆ ಜನತಾ ಪಕ್ಷದವರು ೫೭೦ ನಿಮಿಷ, ಸಿ. ಪಿ. ಐ. ನವರು ೭೪೮ ನಿಮಿಷ, ಸಿ. ಪಿ. ಐ. ಎಂ. ನವರು ೬೮ ನಿಮಿಷ ಬಿ. ಜೆ. ಪಿ. ನವರು ೧೨೦ ನಿಮಿಷ, ಇಂಡಿಪೆಂಡೆಂಟ್ಸ್‌ನವರು ೪೮ ನಿಮಿಷಗಳು ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಇಲ್ಲಿಗೆ ಚರ್ಚೆ ಮುಕ್ತಾಯವಾಯಿತು. ನಾಳೆ ಮುಖ್ಯ ಮಂತ್ರಿಗಳಿಂದ ಉತ್ತರ- ಈಗ ಸಭೆಯನ್ನು ನಾಳೆ ಬೆಳಿಗ್ಗೆ ೧೧ ಗಂಟೆಗೆ ಮುಂದೂಡಲಾಗಿದೆ.

ಸದನವು ಸಾಯಂಕಾಲ ೫-೨೦ಕ್ಕೆ ಮುಕ್ತಾಯವಾಗಿ, ದಿನಾಂಕ ೩-೨-೮೫ ರಂದು ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿಶ್ಚಯಿಸಿತು